Swabhimani Sahakari

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Pages : 48 / 12₹

Volume - 17
Issue - 06
June - 2020


ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ರಾಜ್ಯಕ್ಕೆ ಮುಂಗಾರು ಮಳೆ ಆಗಮನ.
ಭರ್ತಿಯಾಗಲಿವೆ ಅಣೆಕಟ್ಟೆ, ಕೆರೆ–ಕೊಳ್ಳಗಳು.
ಉತ್ತಮ ಮಳೆ ಮುನ್ಸೂಚನೆ, ಬಿತ್ತನೆಗೆ ಅಣಿಯಾಗಿರುವ ರೈತರ ಮುಖದಲ್ಲಿ ಮಂದಹಾಸ.



ರೈತರು ಸಮೃದ್ಧರಾದರೆ,
ದೇಶ ಸಮೃದ್ಧವಾಗುತ್ತದೆ.
– ಪ್ರಧಾನಿ ನರೇಂದ್ರ ಮೋದಿ

ಮುಂಗಾರಿನ
ಅಭಿಷೇಕಕೆ
ಮಿದುವಾಯಿತು
ನೆಲವು ಧಗೆ ಆರಿದ
ಹೃದಯದಲ್ಲಿ
ಪುಟಿದೆದ್ದಿತು ಚೆಲುವು
–ಜಿ.ಎಸ್.ಶಿವರುದ್ರಪ್ಪ

ಸೌಹಾರ್ದ ಸಹಕಾರಿಗಳ
ಸಂಖ್ಯೆ : 5049

ಇ–ಸ್ಟಾಂಪಿಂಗ್
ಕೇಂದ್ರಗಳ ಸಂಖ್ಯೆ : 1335

ಜೂನ್ 5, ವಿಶ್ವಪರಿಸರ ದಿನ



ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ

ಕೋವೀಡ್–19 ಮಹಾಮಾರಿಯ ಪ್ರಭಾವದಿಂದಾಗಿ ಆರ್ಥಿಕ ವ್ಯವಸ್ಥೆಗೆ ತೀರ ಹಿನ್ನಡೆ ಕಾಣುತ್ತಿರುವುದರಿಂದಾಗಿ ದೇಶ, ರಾಜ್ಯ, ವಿವಿಧ ಸಂಸ್ಥೆಗಳಂತೆ ನಮ್ಮ ಸೌಹಾರ್ದ ಸಹಕಾರಿಗಳು ಕೂಡ ಆರ್ಥಿಕ ಪ್ರಗತಿಗಾಗಿ ಪರ್ಯಾಯ ವ್ಯವಸ್ಥೆಯೊಂದನ್ನು ರೂಪಿಸುವುದು ಅನಿವಾರ್ಯವಾಗಿದೆ. ದೇಶಿಯ ಸಂಪನ್ಮೂಲ ಅಭಿವೃದ್ಧಿ, ಕ್ರೋಢೀಕರಣ ಹಾಗೂ ಸದ್ಬಳಕೆ ದೇಶದ ಆರ್ಥಿಕ ಪ್ರಗತಿಯ ಕೈಂಕರ್ಯವನ್ನು ದೇಶದ ಎಲ್ಲ ಪ್ರಜೆಗಳು ಅನುಸರಿಸಲೇಬೇಕಾದ ಕಾರ್ಯತಂತ್ರ ಇಂದಿನ ಅವಶ್ಯಕತೆ.

# ಆತ್ಮನಿರ್ಭರತೆ ಸಾಧನೆಯ ಅಭಿಯಾನ ಸೌಹಾರ್ದ ಸಹಕಾರಿಗಳಿಗೆ ವ್ಯವಹಾರ ವ್ಯಾಪಾರ ಅಭಿವೃದ್ಧಿಗೆ ಅವಕಾಶಗಳ ತೆರೆದ ಬಾಗಿಲು.

**ಆತ್ಮೀಯ ಸಹಕಾರಿ ಬಂಧುಗಳೆ,**

ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ಹೃದಯಪೂರ್ವಕ ನಮಸ್ಕಾರಗಳು. ಕೋವಿಡ್–19 ಕರಾಳ ನೆರಳಿನ ಈ ದಿನಗಳನ್ನು ಧೈರ್ಯದಿಂದ ಎದುರಿಸುತ್ತಿರುವ ಈ ಸೋಂಕನ್ನು ತಡೆಗಟ್ಟಲು ಶ್ರಮಿಸುತ್ತಿರುವ ಮತ್ತು ಈ ಕಾರಣದಿಂದಾಗಿ ತೊಂದರೆಗಿಡಾಗಿರುವ ನಮ್ಮ ಎಲ್ಲಾ ಬಂಧುಬಾಂಧವರಿಗೆ, ಬಡವರಿಗೆ, ಕಾರ್ಮಿಕರಿಗೆ ಸಹಾಯ ಹಸ್ತವನ್ನು ನೀಡುತ್ತ ಕಾರ್ಯನಿರ್ವಹಿಸುತ್ತಿರುವ ತಮಗೆ ನನ್ನ ವೈಯಕ್ತಿಕ ಹಾಗೂ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಪರವಾಗಿ ಹಾಗೂ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ ಪರವಾಗಿ ಕೃತಜ್ಞತೆಗಳು ಹಾಗೂ ಅಭಿನಂದನೆಗಳು.

ಕೋವೀಡ್–19 ಮಹಾಮಾರಿಯ ಪ್ರಭಾವದಿಂದಾಗಿ ಆರ್ಥಿಕ ವ್ಯವಸ್ಥೆಗೆ ತೀರ ಹಿನ್ನಡೆ ಕಾಣುತ್ತಿರುವುದ–ರಿಂದಾಗಿ ದೇಶ, ರಾಜ್ಯ, ವಿವಿಧ ಸಂಸ್ಥೆಗಳಂತೆ ನಮ್ಮ ಸೌಹಾರ್ದ ಸಹಕಾರಿಗಳು ಕೂಡ ಆರ್ಥಿಕ ಪ್ರಗತಿಗಾಗಿ ಪರ್ಯಾಯ ವ್ಯವಸ್ಥೆಯೊಂದನ್ನು ರೂಪಿಸುವುದು ಅನಿವಾರ್ಯವಾಗಿದೆ. ದೇಶಿಯ ಸಂಪನ್ಮೂಲ ಅಭಿವೃದ್ಧಿ, ಕ್ರೋಢೀಕರಣ ಹಾಗೂ ಸದ್ಬಳಕೆ ದೇಶದ ಆರ್ಥಿಕ ಪ್ರಗತಿಯ ಕೈಂಕರ್ಯವನ್ನು ದೇಶದ ಎಲ್ಲ ಪ್ರಜೆಗಳು ಅನುಸರಿಸಲೇಬೇಕಾದ ಕಾರ್ಯತಂತ್ರ ಇಂದಿನ ಅವಶ್ಯಕತೆ.

ದೇಶದ ಆರ್ಥಿಕ ಅಭಿವೃದ್ಧಿಗಾಗಿ ಮಾನ್ಯ ಪ್ರಧಾನ ಮಂತ್ರಿಯವರು ಘೋಷಣೆ ಮಾಡಿದ ಆತ್ಮನಿರ್ಭರತೆ ಸಾಧಿಸಲು ಅಂದರೆ ಸಂಘಟಿತರಾಗಿ ಸ್ವಾವಲಂಬನೆಯನ್ನು ಸಾಧಿಸಲು ಸಮರ್ಥರಾಗಬೇಕಾಗಿದೆ. ಮಾನ್ಯ ಪ್ರಧಾನ ಮಂತ್ರಿಗಳು ಉಚ್ಚರಿಸಿದ **"ಸರ್ವಂ ಪರಾತ್ಮಕಂ ದುಃಖಂ ಸರ್ವಂ ಆತ್ಮವಶಂ ಸುಃಖಂ"** ಅವಲಂಬನೆ ಸಾಧುವಲ್ಲ ಮತ್ತು ಅವಲಂಬನೆ ಸಾಕು. ನಮಗೆ ಬೇಕಾದ ವಸ್ತುಗಳನ್ನು ನಾವೇ ಉತ್ಪಾದಿಸಲು ನಮ್ಮಲ್ಲಿ ಸಂಪನ್ಮೂಲಗಳಿವೆ. ಶಕ್ತಿ ಇದೆ. ಅವಕಾಶಗಳಿವೆ ಹಾಗಾಗಿ ನಾವು ಸಮರ್ಥರು. ಇದೇ ಸ್ವಾವಲಂಬನೆಯತ್ತ ನಮ್ಮ ದಿಟ್ಟ ಹೆಜ್ಜೆ ಯೆನಿಸುತ್ತದೆ.

ಈ ಸುಸಂದರ್ಭವು ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಅವಕಾಶಗಳನ್ನು ತೆರೆದಿಟ್ಟಿದೆ. ಈ ಸದಾವಕಾಶವನ್ನು ಸದುಪಯೋಗ ಮಾಡಿಕೊಳ್ಳುವ ಬುದ್ಧಿವಂತಿಕೆ ಜಾಣತನವನ್ನು ನಮ್ಮ ಸೌಹಾರ್ದ ಸಹಕಾರಿಗಳು ಪ್ರದರ್ಶಿಸಬೇಕಿದೆ.

ಮೊದಲನೆಯ ಹಂತದಲ್ಲಿ ಸೌಹಾರ್ದ ಸಹಕಾರಿಗಳ ತಮ್ಮ ಸದಸ್ಯರ ಬೇಕು ಬೇಡಿಕೆಗಳ ವಸ್ತುಗಳ ಹಾಗೂ ಅಗತ್ಯ ಸೇವೆಗಳ ವಿವರ ಸಂಗ್ರಹಿಸುವುದು. ಇದರಲ್ಲಿ ಯಾವುದು ವಿದೇಶಿ. ಯಾವುದು ಸ್ವದೇಶಿ. ಸದಸ್ಯರು ಯಾವುದನ್ನು ತ್ಯಜಿಸಬೇಕು ತ್ಯಜಿಸಿದ ವಸ್ತುಗಳ ಪರ್ಯಾಯವಾಗಿ ದೇಶಿ ವಸ್ತುಗಳ ಲಭ್ಯತೆ ಬಗ್ಗೆ ತಿಳುವಳಿಕೆ ನೀಡಬೇಕು. .

ಎರಡನೇಯದಾಗಿ ಸದಸ್ಯರು ತಮ್ಮ ಸಂಪನ್ಮೂಲಗಳ ಸದ್ಬಳಕೆಗೆ ಹಾಗೂ ಹಾಲಿ ಇರುವ ಸಂಪನ್ಮೂಲಗಳ ಬಳಕೆಯಿಂದ ಉತ್ಪಾದಿಸಬಹುದಾದ ವಸ್ತುಗಳ ಹಾಗೂ ಅವುಗಳ ಮಾರಾಟ ವ್ಯವಸ್ಥೆ ಬಗ್ಗೆ ಅರಿವು ಮೂಡಿಸಬೇಕು. ಇದಕ್ಕಾಗಿ ಕಾರ್ಯಯೋಜನೆಯನ್ನು ಸಿದ್ಧಪಡಿಸುವುದು ಅದರ ಬಗ್ಗೆ ಜ್ಞಾನ ಕೊಡಬೇಕು. ಅದಕ್ಕೆ ಅಗತ್ಯವಾದ ಪರಿಸರ ನಿರ್ಮಾಣಕ್ಕೆ ಒದಗಿಸುವುದು ಅಗತ್ಯ.

ಮೂರನೇಯದಾಗಿ ಹಣಕಾಸಿನ ವ್ಯವಸ್ಥೆಯ ಪೂರೈಕೆಯ ವ್ಯವಸ್ಥೆ. ದೇಶಿಯ ವಸ್ತುಗಳು ಅಂದರೆ ಸಣ್ಣ ಸಣ್ಣ ಗೃಹ ಕೈಗಾರಿಕೆಗಳಿಂದ ಗೃಹೋಪಯೋಗಿ ವಸ್ತುಗಳ ಉತ್ಪಾದನೆಗೆ ಹಣಕಾಸಿನ ನೆರವು ನೀಡುವುದು. ಸಹಕಾರಿಯ ವ್ಯಾಪ್ತಿಯಲ್ಲಿ ಇರಬಹುದಾದ ಸ್ವಾಭಾವಿಕ ಸಂಪನ್ಮೂಲಗಳು, ಮಾನವ ಸಂಪನ್ಮೂಲಗಳು, ಸೌಹಾರ್ದ ಸಹಕಾರಿಯು ಒದಗಿಸಬಹುದಾದ ಸೇವೆಗಳ ಪಟ್ಟಿ ಮಾಡುವುದು. ಸದಸ್ಯರಿಗೆ ಹಾಗು ಸಾರ್ವಜನಿಕರಿಗೆ ಇವುಗಳ ಬಗ್ಗೆ ವ್ಯಾಪಕ ಪ್ರಚಾರ ಮಾಡುವುದು.

ಅತ್ಯಂತ ಮಹತ್ವದ್ದಾಗಿ ಕ್ರಿಯಾಶೀಲ ಆಡಳಿತ ಮಂಡಳಿ, ದಕ್ಷ ಹಾಗು ಪ್ರಾಮಾಣಿಕ ಸಿಬ್ಬಂದಿವರ್ಗ ಅರಿವುಳ್ಳ ಪ್ರಜ್ಞಾವಂತ ಸದಸ್ಯರ ಸಂಖ್ಯೆಯ ನಿರ್ಮಾಣ, ಆಡಳಿತದಲ್ಲಿ ಪಾರದರ್ಶಕತೆ, ಆರ್ಥಿಕ ಶಿಸ್ತು, ಅಗತ್ಯತೆ ಹಾಗೂ ಅನಗತ್ಯತೆಗಳ ಪರಾಮರ್ಶೆ ಇವುಗಳನ್ನು ಸೌಹಾರ್ದ ಸಹಕಾರಿಗಳು ರೂಡಿಸಿಕೊಂಡು ಈ ಅತ್ಮನಿರ್ಭರತೆ ಸಾಧಿಸುವ ಅಭಿಯಾನದಲ್ಲಿ ಸಕ್ರೀಯವಾಗಿ ಭಾಗವಹಿಸುವುದು ಅವಶ್ಯಕತೆ. ಸೌಹಾರ್ದ ಸಹಕಾರಿಗಳಿಗೆ ಇದೂಂದು ಉತ್ತಮ ಅವಕಾಶ. ಇದರಲ್ಲಿ ಎಲ್ಲ ಸೌಹಾರ್ದ ಸಹಕಾರಿಗಳು ಸಕ್ರೀಯರಾಗುತ್ತಾರೆಂದು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ.

**ವಿದೇಶಿ ವಸ್ತುಗಳ ಬಳಕೆ ತ್ಯಜಿಸಿ ಸ್ವದೇಶಿ ವಸ್ತುಗಳ ಉತ್ಪಾದಿಸಿ, ಬಳಸಿ, ಪ್ರೋತ್ಸಾಹಿಸಿ.**

ಸ್ವಾಭಿಮಾನಿ ಸಹಕಾರಿ
ಸಂಪಾದಕ ಮಂಡಳಿ

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಗೌರವ ಅಧ್ಯಕ್ಷರು

ಶ್ರೀ ಜಗದೀಶ ಕವಟಗಿಮಠ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ ಪಾಟೀಲ
ಸಂಪಾದಕರು

ಶ್ರೀ ವಿ.ಜೆ. ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ನಿರ್ಮಾನ ಭವನ", ಡಾ. ರಾಜಕುಮಾರ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು–560010.
ದೂರವಾಣಿ/ ಫ್ಯಾಕ್ಸ್ :
080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop

ಒಳಪುಟಗಳಲ್ಲಿ...

ಅಧ್ಯಕ್ಷರ ನುಡಿ........................................ 2
ಸಂಪಾದಕೀಯ...................................... 3
ಜ್ಞಾನ ಜ್ಯೋತಿ........................................ 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು ........................................................ 5–19
ಸರ್ಕಾರದ ಸುತ್ತೋಲೆ.........................20–21
ಸೌಹಾರ್ದ ಸಹಕಾರಿಗಳ ಸಮಾಚಾರಗಳು ........................................................ 23–38
ಲೇಖನ........................................... 39–48

# ಸಂಪಾದಕೀಯ

## "ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ವ್ಯವಹಾರಗಳು, ಸಭೆಗಳು ಹಾಗೂ ತರಬೇತಿಗಳು ಆನ್‌ಲೈನ್" ಸ್ಪಂದಿಸಿದ ಹಾಗೂ ಸಹಕರಿಸಿದ ಎಲ್ಲ ಸೌಹಾರ್ದ ಸಹಕಾರಿಗಳು ಅಭಿನಂದನಾರ್ಹರು

ಕೋವೀಡ್–19 ಮಹಾಮಾರಿಯ ಪ್ರಭಾವದಿಂದಾಗಿ ಆರ್ಥಿಕ ವ್ಯವಸ್ಥೆಗೆ ತೀರ ಹಿನ್ನಡೆ ಕಾಣುತ್ತಿರುವುದರಿಂದಾಗಿ ದೇಶ, ರಾಜ್ಯ, ವಿವಿಧ ಸಂಸ್ಥೆಗಳಂತೆ ನಮ್ಮ ಸೌಹಾರ್ದ ಸಹಕಾರಿಗಳು ಕೂಡ ಆರ್ಥಿಕ ಪ್ರಗತಿಗಾಗಿ ಪರ್ಯಾಯ ವ್ಯವಸ್ಥೆಯೊಂದನ್ನು ರೂಪಿಸುವುದು ಅನಿವಾರ್ಯವಾಗಿದೆ. ದೇಶಿಯ ಸಂಪನ್ಮೂಲ ಅಭಿವೃದ್ಧಿ ಕ್ರೋಢೀಕರಣ ಹಾಗೂ ಸದ್ಬಳಕೆ ದೇಶದ ಆರ್ಥಿಕ ಪ್ರಗತಿಯ ಕೈಂಕರ್ಯವನ್ನು ದೇಶದ ಎಲ್ಲ ಪ್ರಜೆಗಳು ಅನುಸರಿಸಲೇಬೇಕಾದ ಕಾರ್ಯತಂತ್ರ ಇಂದಿನ ಅವಶ್ಯಕತೆ.

ಕೋವೀಡ್–19 ಕಾಯಿಲೆಯ ಹರಡುವಿಕೆಯನ್ನು ತಡೆಯುವುದಕ್ಕಾಗಿ ರಾಜ್ಯಾದ್ಯಂತ, ರಾಷ್ಟ್ರದಾದ್ಯಂತ ಲಾಕ್‌ಡೌನ್ ಆಗಿರುವ ಸಂದರ್ಭದಲ್ಲಿ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆ ಸ್ಥಗಿತವಾಗಬಾರದು, ಅವರುಗಳಿಗೆ ನೈತಿಕ ಸ್ಥೈರ್ಯ ತುಂಬಬೇಕು, ಲಾಕ್‌ಡೌನ್ ಸಂದರ್ಭದಲ್ಲಿ ಯಾವುದನ್ನು ಮಾಡಬೇಕು, ಯಾವುದನ್ನು ಮಾಡಬಾರದು ಮತ್ತು ಮಾಡುವುದನ್ನು ಹೇಗೆ ಮಾಡಬೇಕು, ಹಣಕಾಸಿನ ಶಿಸ್ತು ಹೇಗೆ ಕಾಪಾಡಿಕೊಳ್ಳಬೇಕು ಸದಸ್ಯರ ನಿರಂತರ ಸಂಪರ್ಕ ಹೇಗೆ ಹೊಂದಬೇಕು ಮತ್ತು ಅವರುಗಳಿಗೆ ಅವಶ್ಯವಿರುವ ಮಾಹಿತಿ ನೆರವು ಇತ್ಯಾದಿಗಳನ್ನು ಹೇಗೆ ಒದಗಿಸಬೇಕು ಇತ್ಯಾದಿ ವಿಷಯಗಳನ್ನು ಸಂಯುಕ್ತ ಸಹಕಾರಿಯು ಸೌಹಾರ್ದ ಸಹಕಾರಿಗಳಿಗೆ ತಲುಪಿಸುವುದು ಸಮಸ್ಯೆಯಾಗದೆ ಅವರುಗಳಿಗೆ ಎಲ್ಲ ವಿಷಯಗಳನ್ನು ಆನ್‌ಲೈನ್ ಮೂಲಕ ತಲುಪಿಸುವ ವ್ಯವಸ್ಥೆಯನ್ನು ಹಮ್ಮಿಕೊಂಡಾಗ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು ಸ್ಪಂದಿಸಿರುವುದು ಅತ್ಯಂತ ಸಂತೋಷದ ವಿಷಯ ಅದಕ್ಕಾಗಿ ಎಲ್ಲರೂ ಅಭಿನಂದನಾರ್ಹರು.

ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯಾದಾದ್ಯಂತ 23 ಜಿಲ್ಲೆಗಳಲ್ಲಿ ಸೌಹಾರ್ದ ಸಹಕಾರಿಗಳೊಡನೆ ಸಂಯುಕ್ತ ಸಹಕಾರಿಯ ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು, ಸಂಪನ್ಮೂಲ ವ್ಯಕ್ತಿಗಳು, ವ್ಯವಸ್ಥಾಪಕ ನಿರ್ದೇಶಕರು ಹಾಗೂ ಅಧಿಕಾರಿಗಳು ಆನ್‌ಲೈನ್ ಮೂಲಕ ಸಭೆ ನಡೆಸಿ 1665 ಸೌಹಾರ್ದ ಸಹಕಾರಿಗಳು ಭಾಗವಹಿಸಿ ಪ್ರಯೋಜನ ಪಡೆದರು. ಈ ಲಾಕ್‌ಡೌನ್ ಸಂದರ್ಭವನ್ನು ಹೇಗೆ ನಿರ್ವಹಿಸಬೇಕು ಎಂಬ ಬಗ್ಗೆ ಮಾರ್ಗದರ್ಶನ ಮಾಡಿದ್ದಾರೆ.

ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಸಭೆಗಳು ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ನಡೆಯುತ್ತಿರುವ ಡಿ.ಸಿ.ಬಿ.ಎಮ್ ಕೋರ್ಸ್‌ನ ತರಬೇತಿಗಳನ್ನು ಆನ್‌ಲೈನ್‌ನಲ್ಲಿ ಯಶಸ್ವಿಯಾಗಿ ನಡೆಸಿರುವುದು ಸಂಯುಕ್ತ ಸಹಕಾರಿಗೆ ಹೆಮ್ಮೆ ಎನಿಸಿದೆ. ಈ ಸಭೆಗಳಲ್ಲಿ ಹಾಗೂ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಎಲ್ಲ ಸೌಹಾರ್ದ ಸಹಕಾರಿಗಳು ಉತ್ತಮ ಪ್ರತಿಕ್ರಿಯೆ ನೀಡಿರುವುದು ಸ್ವಾಗತಾರ್ಹ. ಈ ಸವಾಲನ್ನು ಅವಕಾಶವನ್ನಾಗಿ ಉಪಯೋಗಿಸಲು ಸಹಕರಿಸಿದ ಹಾಗೂ ಸೌಹಾರ್ದ ಸಹಕಾರಿಗಳು ತಾಂತ್ರಿಕವಾಗಿ ಅಪ್‌ಡೇಟ್ ಆಗಿ ಆನ್‌ಲೈನ್‌ನಲ್ಲಿ ವ್ಯವಹಾರ ನಡೆಸಲು ಸಿದ್ಧರಾಗಿರುವುದು ಅತ್ಯಂತ ಹೆಮ್ಮೆಯ ವಿಷಯ. ಈ ಪ್ರಕ್ರಿಯೆ ನಿತ್ಯ ಹಾಗು ನಿರಂತರ ಎಂಬುದನ್ನು ತಮ್ಮೆಲ್ಲರ ಅವಗಾಹನೆಗೆ ತರುತ್ತ ತಮ್ಮ ಸಂಪೂರ್ಣ ಸಹಕಾರವನ್ನು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ. ಈ ಬಗ್ಗೆ ತಮ್ಮ ಸಲಹೆ ಹಾಗೂ ಸಹಕಾರವನ್ನು ಕೋರುತ್ತೇನೆ.

## "ಭವಿಷ್ಯದ ಉನ್ನತಿಗೆ ವರ್ತಮಾನವನ್ನು ಗೌರವಿಸಿ"

**ಅಭಿನಂದನೆಗಳು :** ಶ್ರೀ ಎಂ ಬಸಪ್ಪ, ಸಹಕಾರ ಸಂಘಗಳ ಉಪನಿಬಂಧಕರು(ನಿ) ಇವರು ಸ್ವಾಭಿಮಾನಿ ಸಹಕಾರಿ ಮಾಸಪತ್ರಿಕೆಯಲ್ಲಿ ನಿರಂತರವಾಗಿ 50 ಸಂಚಿಕೆಗಳಲ್ಲಿ ಜ್ಞಾನ ಜ್ಯೋತಿ ಅಂಕಣದಲ್ಲಿ ಮಂಕುತಿಮ್ಮನ ಕಗ್ಗದಿಂದ ಸಹಕಾರಿ ಕ್ಷೇತ್ರಕ್ಕೆ ಉಪಯೋಗಿಸ ಬಹುದಾದ ಹಾಗೂ ಮಾನವನ ಪ್ರತಿನಿತ್ಯದ ಬದುಕಿನಲ್ಲಿ ಅಳವಡಿಸಿಕೊಳ್ಳಬಹುದಾದ ತತ್ವಗಳ ವಿವರಗಳನ್ನು ಸರಳ ಭಾಷೆಯಲ್ಲಿ ವಿವರಿಸುತ್ತ ಸ್ವಾಭಿಮಾನಿ ಸಹಕಾರಿ ಪತ್ರಿಕೆಯ ಓದುಗರಿಗೆ ಜ್ಞಾನದ ಬೆಳಕನ್ನು ಹರಿಸುತ್ತಾ ಬಂದಿದ್ದಾರೆ. ಅವರಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಪರವಾಗಿ ಹಾಗೂ ರಾಜ್ಯದ ಎಲ್ಲಾ ಸಹಕಾರಿಗಳ ಪರವಾಗಿ ಅಭಿನಂದನೆಗಳು.

ಆಂಗ್ಲ ಕವಿಯೋರ್ವ "Morning is the youthood of the day" ಎನ್ನುವ ಮೂಲಕ ದಿನದ ಬದುಕಿನ ಉತ್ಕೃಷ್ಟತೆಗೆ ಬೆಳಗಿನ ಸಮಯದ ಸದುಪಯೋಗ ಪ್ರಮುಖವೆಂಬ ಅಂಶವನ್ನು ವ್ಯಕ್ತಪಡಿಸುತ್ತ ಭವಿಷ್ಯದ ಉಜ್ವಲತೆಗೆ ವರ್ತಮಾನದ ಸದುಪಯೋಗ ಅತಿಮುಖ್ಯವೆಂಬ ಅಂಶವನ್ನು ಜನತೆಗೆ ಸಾರಿದ್ದಾರೆ.

ಇಂದಿನ ಯುವ ಪೀಳಿಗೆಯೂ ತನ್ನ ದುಡುಕಿನಿಂದಾಗಿ ತಳಪಾಯ ಭದ್ರವಿಲ್ಲದ ಹಾಗೂ ನ್ಯಾಯನಿಷ್ಟುರವಲ್ಲದ ಕನಸುಗಳ ಮೂಲಕ ಭವಿಷ್ಯವನ್ನು ಹಾಳುಗಡವಿಕೊಂಡಿರುವುದನ್ನು ಅಂದಿನ ದಿನಗಳಲ್ಲೇ ಮನಗಂಡ ಆಧ್ಯಾತ್ಮ ಕವಿ ಡಿವಿಜಿಯವರು, ಭವಿಷ್ಯದ ಬಗ್ಗೆ ಅತಿ ಚಿಂತಿಸುವ ಬದಲಾಗಿ ವರ್ತಮಾನ ಸಮಯವನ್ನು ಗುಣಾತ್ಮಕವಾಗಿ ಬಳಸಲು ತನ್ಮೂಲಕ ಮುಂದಿನ ಭವಿಷ್ಯವನ್ನು

ಶ್ರೇಣಿ 50

## ಜ್ಞಾನ ಜ್ಯೋತಿ



ಎಂ .ಬಸಪ್ಪ, ಸಹಕಾರ ಸಂಘಗಳ
ನಿವೃತ್ತ ಉಪನಿಬಂಧಕರು, ಬೆಂಗಳೂರು.

ಕಟ್ಟಿಕೊಳ್ಳಲು ಸೂಚಿಸಿರುತ್ತಾರೆ. ಪದ್ಯದ ಸಾರ ಹೀಗಿದೆ.

ಮುಂದೇನೋ ಮತ್ತೇನೋ ಇಂದಿಗಾ ಮಾತೇಕೆ?
ಸಂದರ್ಭ ಬರಲಿ ಬಂದಾಗಲಾ ಚಿಂತೆ
ಹೊಂದಿಸುವನಾರೋ ನಿನ್ನಾಳಲ್ಲ ಬೇಂಹನು
ಇಂದಿಣಂದಿನ ಬದುಕು ॥ ಮಂಕುತಿಮ್ಮ ॥

ಮುಂದೆ ಏನಾಗುತ್ತದೋ ಹೇಗಾಗುವುದೋ ಎಂದು ಅತಿಯಾಗಿ ತಲೆಕಡಿಸಿಕೊಳ್ಳುವ ಅವಶ್ಯಕತೆಯಿಲ್ಲ. ಆದರೆ ಪ್ರಾಜ್ಞ ಚಿಂತನೆಯಿರಲೆಂದು ತಿಳಿಸುತ್ತ, ನೀವೆಷ್ಟೇ ಚಿಂತಿಸಿದರೂ ಊಹಿಸಿದಂತೆ ಅವೆಲ್ಲವನ್ನೂ ಹೊಂದಿಸಲು ವಿಧಿಯೋನು ನಿಮ್ಮ ಆಳಲ್ಲ ಎಂಬ ಅಂಶವನ್ನು ಸೂಚಿಸಿರುತ್ತಾರೆ.

ನಾಳೆಯು ಇಂದಿನ ಪರಿಶ್ರಮ ಹಾಗೂ ಪ್ರಜ್ಞತೆಯ ಪ್ರತಿಫಲವಾಗಿದ್ದು ಈ ಕಾರಣದಿಂದ ವರ್ತಮಾನವನ್ನು ಕಡೆಗಣಿಸದೇ, ದೈವದಲ್ಲಿ ನಂಬಿಕೆ ಹಾಗೂ ಶ್ರದ್ಧೆಗಳನ್ನಿಟ್ಟು, ದೃಢನಿಶ್ಚಯದಿಂದ ಕಾರ್ಯತತ್ವರಾದಲ್ಲಿ ಉತ್ತಮ ನಾಳೆಯು ನಮ್ಮ ಫಲಶೃತಿಯಾಗುತ್ತದೆಂದು ಒತ್ತಿಹೇಳುವ ಮೂಲಕ, ಸಮಾಜದ ಎಲ್ಲಾ ಪ್ರಜೆಗಳನ್ನು ಸಹೋದರರಂತೆ ಭಾವಿಸುತ್ತ ದೈವೋಪಾಲನೆಯಲ್ಲಿ ನಂಬಿಕೆಯಿಟ್ಟು ಕಾರ್ಯನಿರತರಾದಲ್ಲಿ "Glorious harvest" ಉತ್ತಮ ಸುಗ್ಗಿ ನಿಮ್ಮದಾಗುತ್ತದೆಂದಿದ್ದಾರೆ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಬೆಳಗಾವಿ:–8,508, ಬೆಂಗಳೂರು:–1,947, ಮೈಸೂರು:–922 ಹಾಗೂ ಕಲಬುರಗಿ:–2,078 ವಿಭಾಗಗಳಿಂದ ದಾಖಲಾದ ದಾವಾ ಪ್ರಕರಣಗಳ ಒಟ್ಟು 13,456 ಆಗಿರುತ್ತದೆ. ಇವುಗಳ ಪೈಕಿ 6,222 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 7,234. ಮೇ ತಿಂಗಳಿನಲ್ಲಿ 35 ಪ್ರಕರಣಗಳು ದಾಖಲಾಗಿರುತ್ತವೆ.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 2,440 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 226 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 146 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 2,068 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 998 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 91 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 80 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 827 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ.

# ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ 6 ತಿಂಗಳ ಕೋರ್ಸ್ ಎರಡನೇ ಸಂಪರ್ಕ ವರ್ಗ ಆನ್‌ಲೈನ್ ತರಗತಿ

ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ನಿ., ನಡೆಸುತ್ತಿರುವ ಎರಡನೇ ತಂಡದ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ ಕೋರ್ಸ್‌ನ ಎರಡನೇ ಸಂಪರ್ಕ ವರ್ಗವನ್ನು, ಕೋವಿಡ್-19 ಮಹಾಮಾರಿಯ ಕಾರಣದಿಂದಾಗಿ ಲಾಕ್‌ಡೌನ್ ಜಾರಿಯಾದ ಪ್ರಯುಕ್ತ ಏಪ್ರಿಲ್ ಮಾಹೆಯ ಬದಲಾಗಿ ಮೇ 2020ರ ಮಾಹೆಯಲ್ಲಿ Go to Meeting ಆಪ್ ಮೂಲಕ "ಆನ್ ಲೈನ್"ನಲ್ಲಿ ಯಶಸ್ವಿಯಾಗಿ ನಡೆಸಲಾಯಿತು.

ಎರಡನೇ ತಂಡದ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ ಕೋರ್ಸ್‌ನ್ನು ಬೆಂಗಳೂರು, ಶಿವಮೊಗ್ಗ, ರಾಯಚೂರು, ಮುಧೋಳ ಹಾಗೂ ಬೆಳಗಾವಿ ಒಟ್ಟು ಐದು ಕೇಂದ್ರಗಳಲ್ಲಿ ಸಂಪರ್ಕ ವರ್ಗ ಹಾಗೂ ಅಂತಿಮ ಪರೀಕ್ಷೆಯನ್ನು ನಡೆಸಲು ಉದ್ದೇಶಿಸಲಾಗಿತ್ತು.

ಪ್ರಸ್ತುತ ಈ ಐದೂ ಕೇಂದ್ರಗಳಲ್ಲಿ ಎರಡನೇ ಸಂಪರ್ಕ ವರ್ಗ ತರಗತಿಯನ್ನು ಆನ್‌ಲೈನ್ ಮೂಲಕ ಆಯೋಜಿಸಲಾಗಿದ್ದು, ಅಭ್ಯರ್ಥಿಗಳಿಗೆ ಆನ್‌ಲೈನ್ ತರಬೇತಿಯ ಬಗ್ಗೆ ಮಾಹಿತಿಯನ್ನು ನೀಡಲು ಅಭ್ಯರ್ಥಿಗಳ ವಾಟ್ಸ್ ಆಫ್ ಗ್ರೂಪ್‌ಗಳನ್ನು ರಚಿಸಿಕೊಳ್ಳಲಾಗಿದೆ. ಈ ಗ್ರೂಪ್‌ಗಳ ಮೂಲಕ ಆನ್‌ಲೈನ್ ತರಬೇತಿಗೆ ಅಗತ್ಯವಾದ ಆಫ್ ಬಗ್ಗೆ ಹಾಗೂ ಆನ್‌ಲೈನ್ ತರಬೇತಿಯ ದಿನಾಂಕ, ಸಮಯ, ಉಪನ್ಯಾಸಕರ ವಿವರ, ಅಧ್ಯಯನ ಸಾಹಿತ್ಯದ ವಿವರಗಳನ್ನು ಕಳುಹಿಸಲಾಗಿದೆ. ಆನ್‌ಲೈನ್ ತರಗತಿಯನ್ನು ನುರಿತ ಸಂಪನ್ಮೂಲ ವ್ಯಕ್ತಿಗಳಿಂದ ಆಯೋಜಿಸಲಾಗಿದೆ. ಉಪನ್ಯಾಸಕರು ಹಾಗೂ ಅಭ್ಯರ್ಥಿಗಳು ತಿಳಿಸಲಾದ ದಿನಾಂಕಗಳಂದು ಆನ್‌ಲೈನ್ ಮೂಲಕ ತರಗತಿಗೆ ಹಾಜರಾಗುವ ಮೂಲಕ ಎರಡನೇ ಸಂಪರ್ಕ ವರ್ಗವನ್ನು ಯಶಸ್ವಿಗೊಳಿಸಿದ್ದಾರೆ.

ದಿನಾಂಕ 09, 10 ಹಾಗೂ 11ನೇ ಮೇ 2020ರಂದು ಬೆಳಗಾವಿ ಹಾಗೂ ರಾಯಚೂರು ಕೇಂದ್ರದ ಅಭ್ಯರ್ಥಿಗಳಿಗಾಗಿ ಎರಡನೇ ಸಂಪರ್ಕ ವರ್ಗ ತರಗತಿಯನ್ನು ಆನ್‌ಲೈನ್ ಮೂಲಕ ಆಯೋಜಿಸಲಾಗಿತ್ತು ಈ ತರಗತಿಯಲ್ಲಿ ಒಟ್ಟು 112 ಅಭ್ಯರ್ಥಿಗಳು ಭಾಗವಹಿಸಿದ್ದರು.

ದಿನಾಂಕ 23, 24 ಹಾಗೂ 25ನೇ ಮೇ 2020ರಂದು ಬೆಂಗಳೂರು, ಶಿವಮೊಗ್ಗ ಹಾಗೂ ರಾಯಚೂರು ಕೇಂದ್ರದ ಅಭ್ಯರ್ಥಿಗಳಿಗಾಗಿ ಎರಡನೇ ಸಂಪರ್ಕ ವರ್ಗ ತರಗತಿಯನ್ನು ಆನ್‌ಲೈನ್ ಮೂಲಕ ಆಯೋಜಿಸಲಾಗಿತ್ತು ಈ ತರಗತಿಯಲ್ಲಿ ಒಟ್ಟು 152 ಅಭ್ಯರ್ಥಿಗಳು ಭಾಗವಹಿಸಿದ್ದರು.

ಸಂಯುಕ್ತ ಸಹಕಾರಿ ವತಿಯಿಂದ ಆಯೋಜಿಸಿದ ಎರಡನೇ ಸಂಪರ್ಕ ವರ್ಗ ಆನ್‌ಲೈನ್ ತರಗತಿಯಲ್ಲಿ ಉಪನ್ಯಾಸಕರು ಹಾಗೂ ಅಭ್ಯರ್ಥಿಗಳು ಭಾಗವಹಿಸಿ ಯಶಸ್ವಿಗೊಳಿಸಿದ್ದಾರೆ. ಈ ಸಂಪರ್ಕ ವರ್ಗಗಳು ಆನ್‌ಲೈನ್ ಮೂಲಕ ಪರಿಣಾಮಕಾರಿಯಾಗಿತ್ತೆಂದು ಅಭಿಪ್ರಾಯ ಸೂಚಿಸಿದರು.

# ಸಂಯುಕ್ತ ಸಹಕಾರಿಯ ಸಿಬ್ಬಂದಿಗಳಿಗಾಗಿ ಕೌಶಲ್ಯಾಭಿವೃದ್ಧಿ ಆನ್‌ಲೈನ್ ತರಬೇತಿ ಕಾರ್ಯಕ್ರಮ

ಕೊರೋನಾ ವೈರಸ್ ಭಾರತದಲ್ಲಿ ವೇಗವಾಗಿ ಹರಡುತ್ತಿದ್ದು, ನಮ್ಮ ರಾಜ್ಯದಲ್ಲಿ ಕೂಡ ವೈರಸ್ ಸೋಂಕಿತರ ಸಂಖ್ಯೆ ಹೆಚ್ಚುತ್ತಿದೆ. ಇದು ಒಂದು ಆಕಸ್ಮಿಕ ವಿಪತ್ತು ಎಂದು ಪರಿಗಣಿಸಿ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಮಾರ್ಚ್ 25ರಿಂದ ಅನ್ವಯವಾಗುವಂತೆ ದೇಶಾದ್ಯಂತ ಸಂಪೂರ್ಣ ಲಾಕ್‌ಡೌನ್ ಘೋಷಿಸಲಾಗಿದೆ. ಈ ಹಿನ್ನೆಲೆಯಲ್ಲಿ ಸಂಯುಕ್ತ ಸಹಕಾರಿಯ ಕಛೇರಿಗಳು ಕೂಡ ಮುಚ್ಚಲ್ಪಟ್ಟಿದ್ದು, ಆನ್‌ಲೈನ್ ಮೂಲಕ ತರಬೇತಿಗಳು ಜಾರಿಯಲ್ಲಿವೆ. ಸಂಯುಕ್ತ ಸಹಕಾರಿಯು ತನ್ನ ಸಿಬ್ಬಂದಿಗಳ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮದಡಿಯಲ್ಲಿ ಹಲವು ಆನ್‌ಲೈನ್ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ. ಮಾನ್ಯ ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಬಿ.ವಿ. ರವೀಂದ್ರನಾಥರವರಿಂದ ಲೆಕ್ಕಪರಿಶೋಧನೆಯ ಕುರಿತಾಗಿ ಒಟ್ಟು ಐದು ಅವಧಿಯ ಆನ್‌ಲೈನ್ ತರಬೇತಿ ಕಾರ್ಯಕ್ರಮವನ್ನು ದಿನಾಂಕ 12ನೇ ಮೇ 2020ರಿಂದ 18ನೇ ಮೇ 2020ರ ವರೆಗೆ ಆಯೋಜಿಸಲಾಗಿತ್ತು.

ದಿನಾಂಕ 12ನೇ ಮೇ 2020ರಂದು ಮೊದಲನೆಯ ಅವಧಿಯನ್ನು "ಸಹಕಾರ ಲೆಕ್ಕಪರಿಶೋಧನೆ ಶಾಸನಾತ್ಮಕ ಅಂಶಗಳು" ಕುರಿತಾದ ಉಪನ್ಯಾಸವನ್ನು, ದಿನಾಂಕ 13ನೇ ಮೇ 2020ರಂದು "ಸಹಕಾರಿ ಲೆಕ್ಕಪರಿಶೋಧನೆ ಆಡಳಿತಾತ್ಮಕ ಪ್ರಕ್ರಿಯೆಗಳು" ಕುರಿತಾದ ಉಪನ್ಯಾಸವನ್ನು, ದಿನಾಂಕ 14ನೇ ಮೇ 2020ರಂದು "ಸಹಕಾರಿ ಲೆಕ್ಕಪರಿಶೋಧನೆ ನಮೂನೆಗಳು/ಅಡಕಗಳು" ಕುರಿತಾದ ಉಪನ್ಯಾಸವನ್ನು, ದಿನಾಂಕ 15ನೇ ಮೇ 2020ರಂದು "ಸಹಕಾರಿ ಲೆಕ್ಕಪರಿಶೋಧನೆ ವರಧಿ ವಿಶ್ಲೇಷಣೆ – ವಿಮರ್ಶೆ" ಕುರಿತಾದ ಉಪನ್ಯಾಸವನ್ನು ಹಾಗೂ 18ನೇ ಮೇ 2020ರಂದು "ಸಹಕಾರಿ ಲೆಕ್ಕಪರಿಶೋಧನೆ ಅವ್ಯವಹಾರಗಳು: ಪತ್ತೆ, ವರದಿ" ಕುರಿತಾದ ಉಪನ್ಯಾಸವನ್ನು ಮಾನ್ಯ ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಬಿ.ವಿ. ರವೀಂದ್ರನಾಥರವರಿಂದ ಆಯೋಜಿಸಲಾಗಿತ್ತು. ಈ ಆನ್‌ಲೈನ್ ತರಬೇತಿ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಎಲ್ಲಾ ಸಿಬ್ಬಂದಿಗಳು ಭಾಗವಹಿಸಿದ್ದರು.

# ಕೋವಿಡ್-19 ನಿಂದ ಸಹಕಾರಿ ಕ್ಷೇತ್ರಕ್ಕೆ ಉಂಟಾಗುವ ಪರಿಣಾಮಗಳು ಹಾಗೂ ಪರಿಣಾಮಗಳಿಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ರಾಜ್ಯದ ಸೌಹಾರ್ದ ಸಹಕಾರಿಗಳೊಡನೆ ನಡೆದಿರುವ ಆನ್‌ಲೈನ್ ಸಂವಾದ ಕಾರ್ಯಕ್ರಮಗಳು

## ಬೆಂಗಳೂರು ವಿಭಾಗ

**ಚಿತ್ರದುರ್ಗ:** ದಿನಾಂಕ 05.05.2020 ರಂದು **ಚಿತ್ರದುರ್ಗ ಜಿಲ್ಲೆಯ** ಸೌಹಾರ್ದ ಸಹಕಾರಿಗಳಿಗಾಗಿ ಕೋವಿಡ್–19 ನಿಂದ ಸಹಕಾರ ಕ್ಷೇತ್ರಕ್ಕೆ ಉಂಟಾಗಿರುವ ಪರಿಣಾಮಗಳು ಹಾಗೂ ಪರಿಣಾಮಗಳಿಗೆ ಪರಿಹಾರೋಪಾಯಗಳು ಕುರಿತು ಆನ್‌ಲೈನ್ ತರಬೇತಿಯನ್ನು ಆಯೋಜಿಸಲಾಯಿತು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಎಸ್.ಆರ್. ಲಕ್ಷ್ಮೀಕಾಂತ ರೆಡ್ಡಿ ರವರು, ಮಾಜಿ ಸಮಾಜ ಕಲ್ಯಾಣ ಇಲಾಖೆ ಸಚಿವರು, ಹಾಲಿ ಚಿತ್ರದುರ್ಗ ಡಿಸಿಸಿ ಬ್ಯಾಂಕ್ ಅಧ್ಯಕ್ಷರು ಹಾಗೂ ಹೊಯ್ಸಳ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಡಿ. ಸುಧಾಕರ್ ರವರು ಭಾಗವಹಿಸಿದ್ದರು. ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ಹಾಗೂ ಬೆಂಗಳೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ ರವರು ಉಪಸ್ಥಿತರಿದ್ದರು, ಚಿತ್ರದುರ್ಗ ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜ ರವರು ಭಾಗವಹಿಸಿದ್ದರು. ಸಂವಾದ ಕಾರ್ಯಕ್ರಮದಲ್ಲಿ ಜಿಲ್ಲೆಯ ವಿವಿಧ ಸೌಹಾರ್ದ ಸಹಕಾರಿಗಳಿಂದ 30 ಪ್ರತಿನಿಧಿಗಳು ಭಾಗವಹಿಸಿದ್ದರು.

**ಬೆಂಗಳೂರು** : ದಿನಾಂಕ 21.05.2020 ರಂದು **ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಯ** ಸೌಹಾರ್ದ ಸಹಕಾರಿಗಳಿಗಾಗಿ ಕೋವಿಡ್–19 ನಿಂದ ಸಹಕಾರ ಕ್ಷೇತ್ರಕ್ಕೆ ಉಂಟಾಗಿರುವ ಪರಿಣಾಮಗಳು ಹಾಗೂ ಲಾಕ್‌ಡೌನ್ ನಂತರ ಸಹಕಾರಿಗಳು ಕೈಗೊಳ್ಳಬೇಕಾದ ಅಂಶಗಳ ಕುರಿತು ಆನ್‌ಲೈನ್ ತರಬೇತಿಯನ್ನು ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು, ಬೆಂಗಳೂರು ನಗರದ ನಿರ್ದೇಶಕರಾದ ಶ್ರೀ ಬಿ.ಎಸ್. ಗುಂಡೂರಾವ್ ರವರು, ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ರವರು ಹಾಗೂ ಬೆಂಗಳೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ ರವರು ಉಪಸ್ಥಿತರಿದ್ದರು, ಜಿಲ್ಲಾ ಸಂಯೋಜಕರಾದ ಶ್ರೀ ರಾಜೇಶ್ ಕೆ. ಎಂ ಹಾಗೂ ಶ್ರೀ ಅನಿಲ್ ಕುಮಾರ್ ರವರು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಮಾಜಿ ನಿರ್ದೇಶಕರಾದ ಶ್ರೀ ನಾಗೇಂದ್ರ ರವರು ಉಪಸ್ಥಿತರಿದ್ದರು. ಸಂವಾದ ಕಾರ್ಯಕ್ರಮದಲ್ಲಿ 110 ಪ್ರತಿನಿಧಿಗಳು ಭಾಗವಹಿಸಿದ್ದರು.

**ಶಿವಮೊಗ್ಗ:** ದಿನಾಂಕ 15.05.2020 ರಂದು **ಶಿವಮೊಗ್ಗ ಜಿಲ್ಲೆಯ** ಸೌಹಾರ್ದ ಸಹಕಾರಿಗಳಿಗಾಗಿ ಕೋವಿಡ್–19 ನಿಂದ ಸಹಕಾರ ಕ್ಷೇತ್ರಕ್ಕೆ ಉಂಟಾಗಿರುವ ಪರಿಣಾಮಗಳು ಹಾಗೂ ಲಾಕ್‌ಡೌನ್ ನಂತರ ಸಹಕಾರಿಗಳು ಕೈಗೊಳ್ಳಬೇಕಾದ ಅಂಶಗಳ ಕುರಿತು ಆನ್‌ಲೈನ್ ತರಬೇತಿಯನ್ನು ಆಯೋಜಿಸಲಾಯಿತು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಪ್ರಸನ್ನಕುಮಾರ್ ರವರು, ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ಹಾಗೂ ಬೆಂಗಳೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ ರವರು ಉಪಸ್ಥಿತರಿದ್ದರು, ಶಿವಮೊಗ್ಗ ಜಿಲ್ಲಾ ಸಂಯೋಜಕರಾದ ಶ್ರೀ ಶಶಿಕುಮಾರ ಎಸ್. ರವರು ಭಾಗವಹಿಸಿದ್ದರು. ಸಂವಾದ ಕಾರ್ಯಕ್ರಮದಲ್ಲಿ 64 ಪ್ರತಿನಿಧಿಗಳು ಭಾಗವಹಿಸಿದ್ದರು.

**ತುಮಕೂರು** : ದಿನಾಂಕ 28.05.2020 ರಂದು **ತುಮಕೂರು, ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯ** ಸೌಹಾರ್ದ ಸಹಕಾರಿಗಳಿಗಾಗಿ ಕೋವಿಡ್–19 ನಿಂದ ಸಹಕಾರ ಕ್ಷೇತ್ರಕ್ಕೆ ಉಂಟಾಗಿರುವ ಪರಿಣಾಮಗಳು ಹಾಗೂ ಲಾಕ್‌ಡೌನ್ ನಂತರ ಸಹಕಾರಿಗಳು ಕೈಗೊಳ್ಳಬೇಕಾದ ಅಂಶಗಳ ಕುರಿತು ಆನ್‌ಲೈನ್ ತರಬೇತಿಯನ್ನು ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ರವರು, ನಿರ್ದೇಶಕರಾದ ಶ್ರೀ ಬಿ. ಗಂಗಾಧರಯ್ಯನವರು, ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ರವರು, ಬೆಂಗಳೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ ರವರು ಹಾಗೂ ತುಮಕೂರು ಜಿಲ್ಲಾ ಒಕ್ಕೂಟದ ಅಧ್ಯಕ್ಷರಾದ ಮಾನ್ಯ ಶ್ರೀ ಲಕ್ಷ್ಮೀನಾರಾಯಣ ರವರು ಉಪಸ್ಥಿತರಿದ್ದರು, ತುಮಕೂರು ಜಿಲ್ಲಾ ಸಂಯೋಜಕರಾದ ಶ್ರೀ ಕುಶಾಲ್ ಹೆಚ್.ಎಂ ಹಾಗೂ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ.ಎಸ್. ರವರು ಭಾಗವಹಿಸಿದ್ದರು. ಸಂವಾದ ಕಾರ್ಯಕ್ರಮದಲ್ಲಿ 97 ಪ್ರತಿನಿಧಿಗಳು ಭಾಗವಹಿಸಿದ್ದರು.

## ಬೆಳಗಾವಿ ವಿಭಾಗ

**ಉತ್ತರ ಕನ್ನಡ: ದಿನಾಂಕ 18.05.2020 ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ** ಸೌಹಾರ್ದ ಸಹಕಾರಿಗಳಿಗೆ ಸಂಯುಕ್ತ ಸಹಕಾರಿಯ ಮಾನ್ಯ ಜಿಲ್ಲಾ ನಿರ್ದೇಶಕರ ನೇತೃತ್ವದಲ್ಲಿ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹ–ರಿಗೆ ಕೋವಿಡ್–19 ನಿಂದ ಸಹಕಾರಿ ಕ್ಷೇತ್ರಕ್ಕೆ ಆಗುತ್ತಿರುವ ಪರಿಣಾಮಗಳ ಕುರಿತು ಮತ್ತು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಮತ್ತು ಸಹಕಾರಿಯ ದೈನಂದಿನ ಚಟುವಟಿಕೆಗಳನ್ನು ನಡೆಸುವುದರ ಬಗ್ಗೆ ಆನ್‌ಲೈನ್ ಸಭೆಯನ್ನು ಹಮ್ಮಿಕೊಳಲಾಯಿತು. ಈ ಸಭೆಯಲ್ಲಿ 17 ಸೌಹಾರ್ದ ಸಹಕಾರಿಯ ಪ್ರತಿನಿಧಿಗಳು ಭಾಗವಹಿದ್ದರು.

**ಉತ್ತರ ಕನ್ನಡ ಜಿಲ್ಲೆಯ ಶಿರಸಿ ಮತ್ತು ಸಿದ್ದಾಪುರ ತಾಲ್ಲೂಕಿನ** ಸೌಹಾರ್ದ ಸಹಕಾರಿಗಳಿಗೆ ಸಂಯುಕ್ತ ಸಹಕಾರಿಯ ಮಾನ್ಯ ಜಿಲ್ಲಾ ನಿರ್ದೇಶಕರ ನೇತೃತ್ವದಲ್ಲಿ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹರಿಗೆ ಕೋವಿಡ್–19 ನಿಂದ ಸಹಕಾರಿ ಕ್ಷೇತ್ರಕ್ಕೆ ಆಗುತ್ತಿರುವ ಪರಿಣಾಮಗಳ ಕುರಿತು ಮತ್ತು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಮತ್ತು ಸಹಕಾರಿಯ ದೈನಂದಿನ ಚಟುವಟಿಕೆಗಳನ್ನು ನಡೆಸುವುದರ ಬಗ್ಗೆ ಆನ್‌ಲೈನ್ ಸಭೆಯನ್ನು ಹಮ್ಮಿಕೊಳಲಾಯಿತು. ಈ ಸಭೆಯಲ್ಲಿ 13 ಸೌಹಾರ್ದ ಸಹಕಾರಿಯ ಪ್ರತಿನಿಧಿಗಳು ಭಾಗವಹಿದರು.

**ದಿನಾಂಕ 02.05.2020 ರ** ಆನ್‌ಲೈನ ಮೂಲಕ **ಉತ್ತರ ಕನ್ನಡ ಜಿಲ್ಲೆಯ** ಸೌಹಾರ್ದ ಸಹಕಾರಿಗಳಿಗೆ ಸಂವಾದ ಕಾರ್ಯಕ್ರಮವು ಜರುಗಿರುತ್ತದೆ. 45 ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿದ್ದರು. ಈ ಸಂವಾದ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಸರಸ್ವತಿ ಎನ್ ರವಿ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಹಾಗೂ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆರವರು ಭಾಗವಹಿಸಿ ಸಹಕಾರಿಗಳು ವ್ಯಕ್ತಪಡಿಸಿದ ಸಮಸ್ಯೆಗಳಿಗೆ ಸಮಂಜಸವಾದ ಉತ್ತರಗಳನ್ನು, ಮಾರ್ಗದರ್ಶನವನ್ನು ನೀಡಿರುತ್ತಾರೆ.

ದಿನಾಂಕ 19.05.2020 ರಂದು **ಉತ್ತರ ಕನ್ನಡ ಜಿಲ್ಲೆಯ ಕುಮಟಾ, ಹೊನ್ನಾವರ ಹಾಗೂ ಭಟ್ಕಳ ತಾಲ್ಲೂಕಿನ** ಸೌಹಾರ್ದ ಸಹಕಾರಿಗಳಿಗೆ ಸಂಯುಕ್ತ ಸಹಕಾರಿಯ ಮಾನ್ಯ ಜಿಲ್ಲಾ ನಿರ್ದೇಶಕರ ನೇತೃತ್ವದಲ್ಲಿ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹರಿಗೆ ಕೋವಿಡ್–19 ನಿಂದ ಸಹಕಾರಿ ಕ್ಷೇತ್ರಕ್ಕೆ ಆಗುತ್ತಿರುವ ಪರಿಣಾಮಗಳ ಕುರಿತು ಮತ್ತು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಮತ್ತು ಸಹಕಾರಿಯ ದೈನಂದಿನ ಚಟುವಟಿಕೆಗಳನ್ನು ನಡೆಸುವುದರ ಬಗ್ಗೆ ಆನ್ ಲೈನ್ ಸಭೆಯನ್ನು ಹಮ್ಮಿಕೊಳಲಾಯಿತು. ಈ ಸಭೆಯಲ್ಲಿ 18 ಸೌಹಾರ್ದ ಸಹಕಾರಿಯ ಪ್ರತಿನಿಧಿಗಳು ಭಾಗವಹಿಸಿದರು.

**ಉತ್ತರ ಕನ್ನಡ ಜಿಲ್ಲೆಯ ಕಾರವಾರ, ಹಳಿಯಾಳ, ದಾಂಡೇಲಿ, ಜೋಯಿಡಾ, ಯಲ್ಲಾಪುರ ಹಾಗೂ ಮುಂಡಗೋಡ ತಾಲ್ಲೂಕಿನ** ಸೌಹಾರ್ದ ಸಹಕಾರಿಗಳಿಗೆ ಸಂಯುಕ್ತ ಸಹಕಾರಿಯ ಮಾನ್ಯ ಜಿಲ್ಲಾ ನಿರ್ದೇಶಕರ ನೇತೃತ್ವದಲ್ಲಿ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹರಿಗೆ ಕೋವಿಡ್– 19 ನಿಂದ ಸಹಕಾರಿ ಕ್ಷೇತ್ರಕ್ಕೆ ಆಗುತ್ತಿರುವ ಪರಿಣಾಮಗಳ ಕುರಿತು ಮತ್ತು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಮತ್ತು ಸಹಕಾರಿಯ ದೈನಂದಿನ ಚಟುವಟಿಕೆಗಳನ್ನು ನಡೆಸುವುದರ ಬಗ್ಗೆ ಆನ್ ಲೈನ್ ಸಭೆಯನ್ನು ಹಮ್ಮಿಕೊಳ್ಳಲಾಯಿತು. ಈ ಸಭೆಯಲ್ಲಿ 14 ಸೌಹಾರ್ದ ಸಹಕಾರಿಯ ಪ್ರತಿನಿಧಿಗಳು ಭಾಗವಹಿಸಿದರು.

---

**ಧಾರವಾಡ:** ದಿನಾಂಕ 02.05.2020 ಆನ್‌ಲೈನ ಮೂಲಕ **ಧಾರವಾಡ ಜಿಲ್ಲೆಯ** ಸೌಹಾರ್ದ ಸಹಕಾರಿಗಳಿಗೆ ಸಂವಾದ ಕಾರ್ಯಕ್ರಮವು ಜರುಗಿರುತ್ತದೆ. 40 ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿದ್ದರು. ಈ ಸಂವಾದ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಚಂದ್ರಕಾಂತ ಪಡಚಣ್ಣನವರ, ಮಾಜಿ ನಿರ್ದೇಶಕರಾದ ಶ್ರೀ ರವಿ ಎಲೇಗಾರ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಹಾಗೂ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆರವರು ಹಾಗೂ ಜಿಲ್ಲಾ ಸಂಯೋಜಕರಾದ ಶ್ರೀ ಬಸವರಾಜು ಎಸ್. ಟಿ. ಭಾಗವಹಿಸಿದ್ದರು.

---

**ಬೆಳಗಾವಿ:** ದಿನಾಂಕ 03.05.2020 ಆನ್‌ಲೈನ ಮೂಲಕ **ಬೆಳಗಾವಿ ಜಿಲ್ಲೆಯ** ಸೌಹಾರ್ದ ಸಹಕಾರಿಗಳಿಗೆ ಸಂವಾದ ಕಾರ್ಯಕ್ರಮವು ಜರುಗಿರುತ್ತದೆ. 103 ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿದ್ದರು. ಈ ಸಂವಾದ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಹಾಗೂ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆರವರು ಹಾಗೂ ಜಿಲ್ಲಾ ಸಂಯೋಜಕರಾದ ಶ್ರೀ ಬಸವರಾಜ್ ಹೊಂಗಲ, ವೃಷಭನಾಥ ಪರಪ್ಪನವರ, ಜವಾಹರ ಮುಗ್ಗನವರ ಭಾಗವಹಿಸಿದ್ದರು.

---

**ವಿಜಯಪುರ:** ದಿನಾಂಕ 12.05.2020 ಆನ್‌ಲೈನ ಮೂಲಕ **ವಿಜಯಪುರ ಜಿಲ್ಲೆಯ** ಸೌಹಾರ್ದ ಸಹಕಾರಿಗಳಿಗೆ ಸಂವಾದ ಕಾರ್ಯಕ್ರಮವು ಜರುಗಿರುತ್ತದೆ. 45 ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿದ್ದರು. ಈ ಸಂವಾದ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿದ್ರಾಮಪ್ಪ ಚ ಉಪ್ಪಿನ್, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಹಾಗೂ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆರವರು ಭಾಗವಹಿಸಿದ್ದರು.

**ಹಾವೇರಿ:** ದಿನಾಂಕ 03.05.2020 ಆನ್‌ಲೈನ ಮೂಲಕ **ಹಾವೇರಿ ಜಿಲ್ಲೆಯ** ಸೌಹಾರ್ದ ಸಹಕಾರಿಗಳಿಗೆ ಸಂವಾದ ಕಾರ್ಯಕ್ರಮವು ಜರುಗಿರುತ್ತದೆ. 63 ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿದ್ದರು. ಈ ಸಂವಾದ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಂ.ಬಿ.ಕಲಾಲ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಹಾಗೂ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆರವರು, ಜಿಲ್ಲಾ ಸಂಯೋಜಕರಾದ ಶ್ರೀ ಕಲ್ಮೇಶ್ ಎಸ್. ಎಂ ಭಾಗವಹಿಸಿದ್ದರು.

**ಗದಗ:** ದಿನಾಂಕ 18.05.2020 ಆನ್ ಲೈನ ಮೂಲಕ **ಗದಗ ಜಿಲ್ಲೆಯ** ಸೌಹಾರ್ದ ಸಹಕಾರಿಗಳಿಗೆ ಸಂವಾದ ಕಾರ್ಯಕ್ರಮವು ಜರುಗಿರುತ್ತದೆ. 32 ಪ್ರತಿನಿಧಿಗಳು ಸಕ್ರೀಯವಾಗಿ ಭಾಗವಹಿಸಿದ್ದರು. ಈ ಸಂವಾದ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಆರ್. ಎನ್. ದೇಶಪಾಂಡೆ,, ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಪಾಟೀಲ ಹಾಗೂ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆರವರು ಜಿಲ್ಲಾ ಸಂಯೋಜಕರಾದ ಶ್ರೀ ಬಸವರಾಜ್ ಎಸ್. ಟಿ. ಭಾಗವಹಿಸಿದ್ದರು.

## ಕಲಬುರಗಿ ವಿಭಾಗ



**ಬೀದರ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ, ಬೆಂಗಳೂರು ಪ್ರಾಂತೀಯ ಕಛೇರಿ ಕಲಬುರಗಿ ಹಾಗೂ ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ವತಿಯಿಂದ ಸಹಕಾರಿಗಳ ಅಧ್ಯಕ್ಷರ ಹಾಗೂ ಮುಖ್ಯ ಕಾರ್ಯನಿರ್ವಾಹಕರುಗಳಿಗೆ ಕೋವಿಡ್–19 ನಿಂದ ಸೌಹಾರ್ದ ಸಹಕಾರಿಗಳ ಮೇಲೆ ಆಗುತ್ತಿರುವ ಪರಿಣಾಮಗಳು ಮತ್ತು ಇದರಿಂದ ಹೊರಬರಲು ಇರುವ ಮಾರ್ಗೋಪಾಯಗಳ ಕುರಿತು ಸಂವಾದವನ್ನು ಆನ್‌ಲೈನ್ ಮೂಲಕ ಜಿಲ್ಲಾ ಒಕ್ಕೂಟದ ಕಛೇರಿಯಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ್ ಅವರ ಅಧ್ಯಕ್ಷತೆಯಲ್ಲಿ ಜರುಗಿಸಲಾಯಿತ್ತು.

ಕೋವಿಡ್ ವೈರಾಣೂವಿನಿಂದ ಇಡೀ ವಿಶ್ವವೇ ಸಂದಿಗ್ಧ ಪರಿಸ್ಥಿಯಲ್ಲಿದೆ ಲಾಕ್‌ಡೌನ್ ದಿಂದ ಇಡಿ ಆರ್ಥಿಕ ಚಟುವಟಿಕೆ, ಸಾಮಾಜಿಕ ಚಟುವಟಿಕೆ ಸ್ತಬ್ಧವಾಗಿದೆ ಅದರ ಪರಿಣಾಮ ಸಹಕಾರಿಗಳ ಮೇಲೆ ಉಂಟಾಗಿರುತ್ತದೆ. ಸಹಕಾರಿಗಳಾದ ನಾವು ಇಂದು ಮುಂಜಾಗ್ರತೆಯನ್ನು ವಹಿಸಿ ಸದಸ್ಯರ ಠೇವಣಿ ರಕ್ಷಿಸುವ ಮತ್ತು ನೀಡಿರುವ ಸಾಲಗಳನ್ನು ಬಡ್ಡಿ ಸಮೇತ ಪಡೆಯು ಮೂಲಕ ಸಹಕಾರಿಗಳನ್ನು ಉಳಿಸಿಕೊಳ್ಳಬೇಕಾಗಿದೆ ಇಂದು ನಾವು ಕಠಿಣ ಪರಿಸ್ಥಿತಿಯನ್ನು ಎದುರಿಸಲು ಸನ್ನದ್ಧರಾಗುವಂತೆ ಕರೆ ನೀಡಿದರು.

ಸಹಕಾರಿಗಳು ಯಾವಾಗಲೂ ಸಮಾಜ ಮುಖಿಗಳು ಸರ್ಕಾರ ಜನರು ಯಾವುದೇ ತೊಂದರೆ ಉಂಟಾದಲ್ಲಿ ಸಾಮಾಜಿಕ ಕಳಕಳಿಯಿಂದ ಕಾರ್ಯನಿರ್ವಹಿಸಬೇಕಾಗಿದೆ. ಸಹಕಾರಿಗಳು ತಾವು ವಾಸಿಸುವ ಸ್ಥಳದಲ್ಲಿ ಸದಸ್ಯರಿಗೆ ಮಾಸ್ಕ, ಸಾನಿಟೈಸರ್, ಬಡವರಿಗೆ ಆಹಾರ ನೀರು ನೀಡಬೇಕು ಶಕ್ತವಾಗಿರುವ ಸಹಕಾರಿಗಳು ಪ್ರಧಾನ ಮಂತ್ರಿ ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ ದೇಣಿಗೆ ನೀಡಲು ಮನವಿ ಮಾಡಿದರು.

ಜಿಲ್ಲೆಯಲ್ಲಿ ಕರೋನಾ ಭೀತಿ ಹೆಚ್ಚಾಗಿರುವ ಹಿನ್ನಲೆಯಲ್ಲಿ ಸಹಕಾರಿಗಳೂ ತಮ್ಮ ಕಛೇರಿಯಲ್ಲಿ ಸಾಮಾಜಿಕ ಅಂತರವನ್ನು ಕಾಯ್ದುಕೊಂಡು ವ್ಯವಹಾರ ಕೈಗೊಳ್ಳಬೇಕು ಎಂದು ತಿಳಿಸಿದರು. ಆನ ಸೇವಾ ಪತ್ತಿನ ಸೌಹಾರ್ದ ಸಹಕಾರಿ ನಿ., ಬೀದರ ನವರು ತನ್ನ ಸದಸ್ಯರುಗಳಿಗೆ ಮಾಸ್ಕ್ ಮತ್ತು ಸ್ಯಾನಿಟೈಸರ್ ವಿತರಿಸಿರುತ್ತಾರೆ, ಜಿಲ್ಲಾ ಒಕ್ಕೂಟವು ಬಸವಕಲ್ಯಾಣ ತಾಲ್ಲೂಕಿಗೆ 400 ಮಾಸ್ಕ್‌ಗಳನ್ನು ನೀಡಿದೆ ಎಂದು ತಿಳಿಸಿದರು. ಜಿಲ್ಲೆಯ ಅನೇಕ ಸಹಕಾರಿಗಳು ಅನೇಕ ಕಾರ್ಯಗಳನ್ನು ಮಾಡುವ ಮೂಲಕ ಮಾನವೀಯತೆ ಮೇರೆದಿರುತ್ತಾರೆ. ಎಂದು ಸ್ಮರಿಸಿದರು. ಜಿಲ್ಲೆಯ ಸೌಹಾರ್ದ ಸಹಕಾರಿಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಆಲಿಸಿ ಅವುಗಳಿಗೆ ಮಾರ್ಗೋಪಾಯಗಳನ್ನು ಸೂಚಿಸಿದರು.

ಈ ಆನ್ ಲೈನ್ ಸಂವಾದ ಕಾರ್ಯಕ್ರಮವನ್ನು ಜಿಲ್ಲಾ ಸಂಯೋಜಕರಾದ ಶ್ರೀ ವೀರಶಟ್ಟಿ ಸ್ವಾಗತಿಸಿದರು. ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್ ಪ್ರಸ್ತಾವಿಕ ನುಡಿ ನುಡಿದರು. ಒಕ್ಕೂಟದ ನಿರ್ದೇಶಕರಾದ ಶ್ರೀ ಶ್ರೀಕಾಂತ ಸ್ವಾಮಿ ವಂದಿಸಿದರು. ಸಭೆಯಲ್ಲಿ ಒಕ್ಕೂಟದ ಉಪಾಧ್ಯಕ್ಷರಾದ ಸಂಜೀವಕುಮಾರ ಪಾಟೀಲ್ ಉಪಸ್ಥಿತರಿದ್ದರು. ಸಂವಾದ ಕಾರ್ಯಕ್ರದಲ್ಲಿ ಬೀದರ ಜಿಲ್ಲೆಯ 42 ಸೌಹಾರ್ದ ಸಹಕಾರಿಗಳಿಂದ 55 ಜನ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ ಮುಖ್ಯ ಕಾರ್ಯನಿರ್ವಾಹಕರು ಭಾಗವಹಿಸಿ ಮಾಹಿತಿ ಪಡೆದುಕೊಂಡರು.

**ರಾಯಚೂರು :** ದಿನಾಂಕ: 08.05.2020ರಂದು ರಾಯಚೂರು ಜಿಲ್ಲೆಯ ಸಿಂಧನೂರು, ಮಸ್ಕಿ ಮತ್ತು ಲಿಂಗಸೂಗುರು ತಾಲ್ಲೂಕುಗಳ ಸೌಹಾರ್ದ ಸಹಕಾರಿಗಳಿಗಾಗಿ ಕೋವಿಡ್–19 ನಿಂದ ಸಹಕಾರ ಕ್ಷೇತ್ರಕ್ಕೆ ಆಗುತ್ತಿರುವ ಪರಿಣಾಮಗಳ ಕುರಿತು ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು, ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ರಾಯಚೂರು ಜಿಲ್ಲಾ ನಿರ್ದೇಶಕರಾದ ಶ್ರೀ ತಿಮ್ಮಯ್ಯ ಶೆಟ್ಟಿ ವಹಿಸಿ ಮಾತನಾಡಿ ಕೋವಿಡ್–19ನಿಂದ ಇಡೀ ದೇಶವೆ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದು ಅದರಲ್ಲಿ ಸಹಕಾರ ಕ್ಷೇತ್ರವು ಸಹ ಒಂದು ಈಗಾಗಲೇ ಸಹಕಾರಿ ಕ್ಷೇತ್ರಕ್ಕೆ ಆರ್ಥಿಕವಾಗಿ ಬಹಳಷ್ಟು ನಷ್ಟವಾಗಿದ್ದು ಮುಂದಿನ ದಿನಗಳನ್ನು ಆರ್ಥಿಕ ನಷ್ಟಕ್ಕೆ ಸೂಕ್ತ ಯೋಜನೆಯನ್ನು ಸಹಕಾರಿಗಳು ರೂಪಿಸಬೇಕೆಂದು ತಿಳಿಸಿದರು. ಮುಂದುವರೆದು ಸಹಕಾರಿಯು ಸಂಯುಕ್ತ ಸಹಕಾರಿಯು ನೀಡಿರುವ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ತಿಳಿಸಿದರು. ಸಹಕಾರಿಯು ಕಡ್ಡಾಯವಾಗಿ ಶೇ 20% ದಷ್ಟು ದ್ರವ್ಯಾಸ್ಥಿ ನಿರ್ವಹಣೆಯನ್ನು ಮಾಡಬೇಕೆಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಬಳ್ಳಾರಿ ಜಿಲ್ಲಾ ನಿರ್ದೇಶಕರಾದ ಶ್ರೀ ವಿಶ್ವನಾಥ ಸಿ. ಹಿರೇಮಠ ಮತ್ತು ಮಾನಿ ವೃತ್ತಿಪರ ನಿರ್ದೇಶಕರಾದ ಶ್ರೀ ರಾಜಶೇಖರ ಬಿ ಹಾಗೂ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೂಗಾರ ಇವರು ಉಪಸ್ಥಿತರಿದ್ದರು. ಈ ಸಭೆಯನ್ನು ಒಟ್ಟು 70 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿರುತ್ತಾರೆ. ಸ್ವಾಗತ, ನಿರೂಪಣೆ ಮತ್ತು ವಂದನಾರ್ಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ವೆಂಕಟೇಶ ರಾಠೋಡ ನೇರವೇರಿಸಿದರು.

ದಿನಾಂಕ: 08.05.2020ರಂದು ರಾಯಚೂರು ಜಿಲ್ಲೆಯ ದೇವದುರ್ಗ, ಸಿರವಾರ, ಮಾನವಿ ಮತ್ತು ರಾಯಚೂರು ತಾಲೂಕುಗಳ ಸೌಹಾರ್ದ ಸಹಕಾರಿಗಳಿಗಾಗಿ ಕೋವಿಡ್–19 ನಿಂದ ಸಹಕಾರ ಕ್ಷೇತ್ರಕ್ಕೆ ಆಗುತ್ತಿರುವ ಪರಿಣಾಮಗಳ ಕುರಿತು ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು, ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ರಾಯಚೂರು ಜಿಲ್ಲಾ ನಿರ್ದೇಶಕರಾದ ಶ್ರೀ ತಿಮ್ಮಯ್ಯ ಶೆಟ್ಟಿ ವಹಿಸಿ ಮಾತನಾಡಿ ಕೋವಿಡ್–19ನಿಂದ ಇಡಿ ದೇಶವೆ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದು ಅದರಲ್ಲಿ ಸಹಕಾರ ಕ್ಷೇತ್ರವು ಸಹ ಒಂದು ಈಗಾಗಲೇ ಸಹಕಾರಿ ಕ್ಷೇತ್ರಕ್ಕೆ ಆರ್ಥಿಕವಾಗಿ ಬಹಳಷ್ಟು ನಷ್ಟವಾಗಿದ್ದು ಮುಂದಿನ ದಿನಗಳನ್ನು ಆರ್ಥಿಕ ನಷ್ಟಕ್ಕೆ ಸೂಕ್ತ ಯೋಜನೆಯನ್ನು ಸಹಕಾರಿಗಳು ರೂಪಿಸಬೇಕೆಂದು ತಿಳಿಸಿದರು. ಮುಂದುವರೆದು ಸಹಕಾರಿಯು ಸಂಯುಕ್ತ ಸಹಕಾರಿಯು ನೀಡಿರುವ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ತಿಳಿಸಿದರು. ಸಹಕಾರಿಗಳು ಕಡ್ಡಾಯವಾಗಿ ಶೇ 20% ರಷ್ಟು ದ್ರವ್ಯಾಸ್ಥಿ ನಿರ್ವಹಣೆಯನ್ನು ಮಾಡಬೇಕೆಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಬಳ್ಳಾರಿ ಜಿಲ್ಲಾ ನಿರ್ದೇಶಕರಾದ ಶ್ರೀ ವಿಶ್ವನಾಥ ಸಿ. ಹಿರೇಮಠ ಮತ್ತು ಶ್ರೀ ರಾಜಶೇಖರ ಬಿ ಹಾಗೂ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೂಗಾರ ಇವರು ಉಪಸ್ಥಿತರಿದ್ದರು. ಈ ಸಭೆಯನ್ನು ಒಟ್ಟು 76 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿರುತ್ತಾರೆ. ಸ್ವಾಗತ, ನಿರೂಪಣೆ ಮತ್ತು ವಂದನಾರ್ಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ವೆಂಕಟೇಶ ರಾಠೋಡ ನೇರವೇರಿಸಿದರು.

**ಕಲಬುರಗಿ:** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ, ಪ್ರಾಂತೀಯ ಕಛೇರಿ ಕಲಬುರಗಿ ಇದರ ವತಿಯಿಂದ ಕಲಬುರಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಸಹಕಾರಿಗಳ ಅಧ್ಯಕ್ಷರ ಹಾಗೂ ಮುಖ್ಯಕಾರ್ಯ ನಿರ್ವಾಹಕರುಗಳಿಗೆ ಕೋವಿಡ್–19 ನಿಂದ ಸೌಹಾರ್ದ ಸಹಕಾರಿಗಳ ಮೇಲೆ ಆಗುತ್ತಿರುವ ಪರಿಣಾಮಗಳು ಅದರ ಬಗ್ಗೆ ಕೈಗೊಳ್ಳಬಹುದಾದ ಕ್ರಮಗಳ ಕುರಿತು. ಸಂವಾದವನ್ನು ಆನ್ ಲೈನ್ ಮೂಲಕ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ ಅವರ ಅಧ್ಯಕ್ಷತೆಯಲ್ಲಿ ಜರುಗಿಸಲಾಯಿತು.

ಕೋವಿಡ್–19 ಯಿಂದ ಸೌಹಾರ್ದ ಸಹಕಾರಿಯ ಮೇಲೆ ಆಗುತ್ತಿರುವ ಪರಿಣಾಮದಿಂದ ಸಹಕಾರಿಗಳು ಎದುರಿಸಬೇಕಾದ ಪರಿಣಾಮ ಮತ್ತು ಪರಿಹಾರವನ್ನು ಕುರಿತು ಶ್ರೀ ಬಿ.ವಿ ರವೀಂದ್ರನಾಥ ಲೆಕ್ಕ ಪರಿಶೋಧಕರಿಂದ ಉಪನ್ಯಾಸ ನೀಡಲಾಯಿತು.

ದಿನಾಂಕ: 07.05.2020ರಂದು ಕಲಬುರಗಿ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಕೋವಿಡ್–19 ನಿಂದ ಸಹಕಾರ ಕ್ಷೇತ್ರಕ್ಕೆ ಆಗುತ್ತಿರುವ ಪರಿಣಾಮಗಳ ಕುರಿತು ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು, ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಕಲಬುರಗಿ ಜಿಲ್ಲಾ ಮಾನ್ಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನರವರು ವಹಿಸಿ ಮಾತನಾಡಿ ಕೋವಿಡ್–19ನಿಂದ ಇಡೀ ದೇಶವೆ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದು ಅದರಲ್ಲಿ ಸಹಕಾರ ಕ್ಷೇತ್ರವು ಸಹ ಒಂದು ಈಗಾಗಲೇ ಸಹಕಾರಿ ಕ್ಷೇತ್ರಕ್ಕೆ ಆರ್ಥಿಕವಾಗಿ ಬಹಳಷ್ಟು ನಷ್ಟವಾಗಿದ್ದು ಮುಂದಿನ ದಿನಗಳನ್ನು ಆರ್ಥಿಕ ನಷ್ಟಕ್ಕೆ ಸೂಕ್ತ ಯೋಜನೆಯನ್ನು ಸಹಕಾರಿಗಳು ರೂಪಿಸಬೇಕೆಂದು ತಿಳಿಸಿದರು. ಮುಂದುವರೆದು ಸಹಕಾರಿಯು ಸಂಯುಕ್ತ ಸಹಕಾರಿಯು ನೀಡಿರುವ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ತಿಳಿಸಿದರು. ಸಹಕಾರಿಯು ಕಡ್ಡಾಯವಾಗಿ ಶೇ 20% ರಷ್ಟು ದ್ರವ್ಯಾಸ್ಥಿ ನಿರ್ವಹಣೆಯನ್ನು ಮಾಡಬೇಕೆಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಕಲಬುರಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ಮಾನ್ಯ ಅಧ್ಯಕ್ಷರಾದ ಶ್ರೀ ಚಂದ್ರಶೇಖರ ಪರಸರೆಡ್ಡಿರವರು ಹಾಗೂ ಬಸವೇಶ್ವರ ಸುದ್ದಿ ಮಹಾಮಂಡಳದ ಮಾನ್ಯ ನಿರ್ದೇಶಕರಾದ ಶ್ರೀ ಎಸ್ಎಸ್ ಪಾಟೀಲರವರು ಹಾಗೂ ಸಂಯುಕ್ತ ಸಹಕಾರಿಯ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೂಗಾರ ಇವರು ಉಪಸ್ಥಿತರಿದ್ದರು. ಈ ಸಭೆಯಲ್ಲಿ ಒಟ್ಟು 78 ಸೌಹಾರ್ದ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿರುತ್ತಾರೆ. ಪ್ರಾಸ್ತಾವಿಕ ಮಾತು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೂಗಾರ ಇವರು ನೇರವೇರಿಸಿದರು. ನಿರೂಪಣೆ ಮತ್ತು ವಂದನಾರ್ಪಣೆಯನ್ನು ಜಿಲ್ಲಾ ಸಂಯೋಜಕರಾದ ಶ್ರೀ ಓಂಕಾರ ನೇರವೇರಿಸಿದರು.

**ಬಳ್ಳಾರಿ:** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಕಲುಬುರಗಿ ಪ್ರಾಂತೀಯದ ಬಳ್ಳಾರಿ ಜಿಲ್ಲೆಯಲ್ಲಿ "ಕೋವಿಡ್–19 ರ ಪರಿಣಾಮದಿಂದ ಸೌಹಾರ್ದ ಸಹಕಾರಿಗಳು ಎದುರಿಸುತ್ತಿರುವ ಸಮಸ್ಯೆಗಳು" ಎಂಬ ವಿಷಯದ ಬಗ್ಗೆ ದಿನಾಂಕ 01.05.2020 ಆನ್‌ಲೈನ್‌ನಲ್ಲಿ ಸಂವಾದ ಕಾರ್ಯಕ್ರಮವನ್ನು ಆಯೋಜಿಸಿದ್ದು, ಈ ಸಂವಾದ ಕಾರ್ಯಕ್ರಮವು ಮೂರು ಹಂತದಲ್ಲಿ ನಡೆದು 62 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಈ ಕಾರ್ಯಗಾರವು ಬೆಳಗ್ಗೆ 11.00 ಗಂಟೆಗೆ ಸಿರುಗುಪ್ಪ, ಬಳ್ಳಾರಿ, ಕುರುಗೋಡು, ಸಂಡೂರು ತಾಲೂಕಿನ ಸಹಕಾರಿಗಳು, ಮಧ್ಯಾಹ್ನ 2.30 ಕ್ಕೆ ಹೊಸಪೇಟೆ ಹಾಗೂ ಕಂಪ್ಲಿ ತಾಲೂಕಿನ ಸಹಕಾರಿಗಳು ಹಾಗೂ ಸಂಜೆ 5.00 ಗಂಟೆಗೆ ಹಗರಿಬೊಮ್ಮನಹಳ್ಳಿ, ಹೂವಿನಹಡಗಲಿ, ಕೊಟ್ಟೂರು, ಕೂಡ್ಲಗಿ ಹಾಗೂ ಹರಪ್ಪನಹಳ್ಳಿ ತಾಲೂಕಿನ ಸಹಕಾರಿಗಳು ಭಾಗವಹಿಸಿ ಯಶಸ್ವಿಗೊಳಿಸಿದರು. ಈ ಸಂವಾದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಳ್ಳಾರಿ ಜಿಲ್ಲೆಯ ನಿರ್ದೇಶಕರಾದ ಶ್ರೀ ವಿಶ್ವನಾಥ ಚ. ಹಿರೇಮಠರವರು ವಹಿಸಿದ್ದರು ಹಾಗೂ ಪ್ರಾಂತೀಯ ಅಧಿಕಾರಿಗಳಾದ ಶ್ರೀ ರಾಜಶೇಖರವರು ಉಪಸ್ಥಿತರಿದ್ದರು. ಈ ಕಾರ್ಯಕ್ರಮದಲ್ಲಿ ಸೌಹಾರ್ದ ಸಹಕಾರಿಗಳು ವ್ಯಕ್ತಪಡಿಸಿದ ಸಮಸ್ಯೆಗಳಿಗೆ ಸಮಂಜಸವಾದ ಉತ್ತರವನ್ನು ನೀಡಿದರು. ಈ ಸಂವಾದ ಕಾರ್ಯಕ್ರಮವು ಯಶಸ್ವಿಯಾಗಲು ಸೂಕ್ತ ಮಾರ್ಗದರ್ಶನವನ್ನು ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್‌ರವರು ನೀಡಿದರು. ಲಾಕ್‌ಡೌನ್ ಸಂದರ್ಭ ಹಾಗೂ ಮುಂದಿನ ದಿನಗಳಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಮೇಲಾಗುವ ಪರಿಣಾಮಗಳನ್ನು ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸಹಕಾರಿಗಳು ವಿವರಿಸಿದರು.

---

**ಯಾದಗಿರಿ:** ದಿನಾಂಕ: 20.05.2020ರಂದು ಯಾದಗಿರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಕೋವಿಡ್–19 ನಿಂದ ಸಹಕಾರ ಕ್ಷೇತ್ರಕ್ಕೆ ಆಗುತ್ತಿರುವ ಪರಿಣಾಮಗಳ ಕುರಿತು ಆನಲೈನ್ ಮೂಲಕ ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರುಗಳಾದ ಶ್ರೀ ವೈ.ಟಿ ಪಾಟೀಲ ಇವರ ಅಧ್ಯಕ್ಷತೆಯಲ್ಲಿ ಶ್ರೀ ಸಂಜೀವ ಮಹಾಜನ, ಶ್ರೀ ಗುರುನಾಥ ಜ್ಯಾಂತಿಕರ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಮತ್ತು ಪ್ರಾಂತಿಯ ವ್ಯವಸ್ಥಾಪಕರ ಉಪಸ್ಥಿತಿಯಲ್ಲಿ ಕಾರ್ಯಕ್ರಮವು ಯಶಸ್ವಿಯಾಗಿ ನೆರವೇರಿಯಿತು. ಶ್ರೀ ಮಧುಕರ ಹೆಗಡೆ ಸನ್ನದು ಲೆಕ್ಕಪರಿಶೋಧಕರು ಇವರಿಂದ ಕೋವಿಡ–19ನಿಂದ ಸಹಕಾರಿಯ ಮೇಲೆ ಬೀರುವ ಪರಿಣಾಮ ಮತ್ತು ಪರಿಹಾರದ ಕುರಿತು ಉಪನ್ಯಾಸ ನೀಡಿದರು.

ಶ್ರೀ ಸಂಜೀವ ಮಹಾಜನ ಮಾನ್ಯ ನಿರ್ದೇಶಕರು ಮಾತಾನಾಡಿ ಕೋವಿಡ –19 ಒಂದು ಮಹಾಮಾರಿ ರೋಗ ಇದು ಇಡೀ ದೇಶಕ್ಕೆ ಆವರಿಸಿದ್ದು, ಸಹಕಾರಿಗಳು ಈ ರೋಗದಿಂದ ಸಹಕಾರಿಗಳ ಮೇಲೆ ಬಹಳ ಪರಿಣಾಮ ಬೀರುತ್ತದೆ. ಆದರೆ ಸಹಕಾರಿಗಳು ಎದೆಗುಂದದೆ ಸಹಕಾರಿಯನ್ನು ಮುಂದುವರಿಸಿಕೊಂಡು ಹೋಗಬೇಕು. ಸಾಲ ನೀಡುವ ಬಗ್ಗೆ ಮುಂಜಾಗ್ರತಾ ಕ್ರಮ ವಹಿಸಬೇಕು, ಸಾಲ ಪಡೆದವರಿಗೆ ಸಮಯಾವಕಾಶ ನೀಡಿ ಎಂದು ಹೇಳಿದರು. ಪ್ರತಿಯೊಂದು ಸಹಕಾರಿಗಳು ದ್ರವ್ಯಾಸ್ಥಿಯನ್ನು ನಿರ್ವಹಣೆ ಕಟ್ಟು ನಿಟ್ಟಾಗಿ ಪಾಲಿಸಬೇಕು. 2020–21ನೇ ವಾರ್ಷಿಕ ಸಾಲಿನಲ್ಲಿ ಲಾಭದ ಮೇಲೆ ಮತ್ತು ದುಡಿಯುವ ಬಂಡವಾಳದ ಮೇಲೆ ಪರಿಣಾಮ ಬೀರಬಹುದು. ಸಹಕಾರಿಯು ಉತ್ತಮ ರೀತಿಯಲ್ಲಿ ಬೆಳೆಸಬೇಕಾದರೆ ಮುಂಜಾಗ್ರತೆ ವಹಿಸಿ ಕಾರ್ಯನಿರ್ವಹಿಸಲು ಸಲಹೆ ನೀಡಿದರು.

ಶ್ರೀ ಗುರುನಾಥ ಜ್ಯಾಂತಿಕರ ಮಾತನಾಡಿ ಸಹಕಾರಿ ಸಂಸ್ಥೆಗಳು ಈ ಸಂದರ್ಭದಲ್ಲಿ ದ್ರವ್ಯಾಸ್ಥಿಯನ್ನು ನಿರ್ವಹಣೆ ಮಾಡಬೇಕು. ಉಳಿತಾಯ ಪಿಗ್ಮೀ ಠೇವಣಿ ಇತರೇ ಯಾವುದೇ ರೂಪದ ಸಣ್ಣ ಉಳಿತಾಯ ಮಾಡುವಂತಹ ಸಂದರ್ಭದಲ್ಲಿ ಜಾಗೃತಿ ವಹಿಸಬೇಕು. ಸಾಲ ವಸೂಲಾತಿ ಪ್ರಮಾಣವು ಕಡಿಮೆಯಾಗುವದರಿಂದ ಹೊಸ ಸಾಲ ನೀಡುವಾಗ ಮುನ್ನೆಚ್ಚರಿಕೆ ಕ್ರಮ ನೀಡಬೇಕು. ಕೋವಿಡ–19 ಮಹಾಮಾರಿ ವಿಶ್ವದ ಆರ್ಥಿಕತೆ ಮೇಲೆ ಗಂಭೀರ ಸ್ವರೂಪದ ಪರಿಣಾಮ ಬೀರುವುದರಿಂದ ಸಣ್ಣ ಮಟ್ಟ ಸಹಕಾರಿಗಳ ಮೇಲೆ ಪರಿಣಾಮ ಉಂಟಾಗುತ್ತದೆ. ಇದನ್ನು ತಪ್ಪಿಸಲು ಸಹಕಾರಿಯ ಖರ್ಚುವೆಚ್ಚಗಳನ್ನು ಕಡಿಮೆ ಮಾಡಬೇಕು, ಹಾಗೂ ಸಾಲಗಾರರಿಗೆ ಮತು ಠೇವಣಿದಾರರಿಗೆ ನಿರಂತರ ಸಂಪರ್ಕವಿಟ್ಟುಕೊಂಡು ಉತ್ತಮ ಬಾಂಧವ್ಯರೀತಿಯಲ್ಲಿ ವರ್ತಿಸಬೇಕು. ಪ್ರಸ್ತುತ ಸ್ಥಿತಿಯಲ್ಲಿ ಯಾರು ಗಾಬರಿಗೊಳ್ಳದೆ ಸಹಕಾರಿಯ ಕಾರ್ಯಚಟುವಟಿಕೆ ಕೈಗೊಳ್ಳುವಂತೆ ಸಲಹೆ ನೀಡಿದರು. ಹಾಗೂ ಸಹಕಾರಿಗಳಾದ ತಾವು ಸಾಮಾಜಿಕ ಜವಾಬ್ದಾರಿ ಹೊಂದಿದ್ದು ತಮ್ಮ ಸಹಕಾರಿ ವ್ಯವಹಾರ ಮಾಡುವ ಅಕ್ಕ–ಪಕ್ಕ ಸದಸ್ಯರಿಗೆ ಸಹಾಯ ಸೌಲಭ್ಯ ನೀಡಬೇಕು. ಮುಂದಿನ ದಿನಗಳಲ್ಲಿ ಪರಿಸ್ಥಿತಿ ತಿಳಿಗೊಂಡ ಮೇಲೆ ಉತ್ತಮ ಕಾರ್ಯಚಟುವಟಿಕೆ ಕೈಗೊಳ್ಳಬಹುದೆಂದರು.

ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ಇವರು ಮಾತಾನಾಡಿ ಸಹಕಾರಿಗಳಿಗೆ ಕೊವೀಡ–19ನಿಂದ ಸಹಕಾರಿಗಳು ಎದೆಗುಂದದೆ ಪ್ರತಿಯೊಂದು ಸಮಸ್ಯೆಗಳಿಗೆ ಸಂಯುಕ್ತ ಸಹಕಾರಿಯು ನಿಮ್ಮ ಜೊತೆಗಿರುತ್ತದೆ. ಸಂಯುಕ್ತ ಸಹಕಾರಿಯು ನಿರಂತರ ಮಾಹಿತಿ ಮತ್ತು ಮಾರ್ಗದರ್ಶನ ನೀಡುತ್ತದೆ. ಪ್ರತಿಯೊಂದು ವಿಷಯದ ಕುರಿತು ಸಹಕಾರಿಗಳಿಗೆ ತರಬೇತಿಯನ್ನು ನೀಡುತ್ತಾ ಬಂದಿದೆ. ಮುಂದೆಯು ಆನ್‌ಲೈನ್ ಮೂಲಕ ತರಬೇತಿಯನ್ನು ಏರ್ಪಡಿಸಿ ನಿಮ್ಮ ಸಮಸ್ಯೆಗಳಿಗೆ ಪರಿಹಾರ ನೀಡುವುದಾಗಿ ತಿಳಿಸಿದರು. ಈ ಸಂವಾದ ಕಾರ್ಯಕ್ರಮದಲ್ಲಿ 40 ಸೌಹಾರ್ದ ಸಹಕಾರಿಯ ಪ್ರತಿನಿಧಿಗಳು ಭಾಗವಹಿಸಿದರು.

---

**ಕೊಪ್ಪಳ** : ದಿನಾಂಕ 06.05.2020 ರಂದು ಬೆಳಗ್ಗೆ 10.30 ರಿಂದ 12 ಗಂಟೆಯ ವರೆಗೆ ಕೊಪ್ಪಳ ಜಿಲ್ಲೆ ಯಲಬುರ್ಗಾ, ಕುಕನೂರು ತಾಲ್ಲೂಕಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರು/ಮುಖ್ಯ ಕಾರ್ಯನಿರ್ವಾಹರುಗಳಿಗೆ "ಸೌಹಾರ್ದ ಸಹಕಾರಿಯ ಮೇಲೆ ಕೋವಿಡ–19ರ ಪರಿಣಾಮ ಮತ್ತು ಅದರ ಬಗ್ಗೆ ತೆಗೆದುಕೊಳ್ಳಬೇಕಾದ ಪರಿಣಾಮಕಾರಿ ಕ್ರಮಗಳು" ಕುರಿತು ಶ್ರೀ ಮಧುಕರ ಹೆಗಡೆ ಸನ್ನದು ಲೆಕ್ಕಪರಿಶೋಧಕರು ಇವರು ಆನ್‌ಲೈನ್ ಮುಖಾಂತರ ಉಪನ್ಯಾಸ ನೀಡಿದರು. ಈ ಸಂವಾದ ಕಾರ್ಯಕ್ರಮದಲ್ಲಿ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ ರವರು ಕೊಪ್ಪಳ ಜಿಲ್ಲೆಯ ಸೌಹಾರ್ದ

ಸಹಕಾರಿಗಳಿಗೆ ಸ್ವಾಗತವನ್ನು ಕೋರಿದರು. ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್ ಮತ್ತು ಕೊಪ್ಪಳ ಜಿಲ್ಲಾ ಸಂಯೋಜಕರಾದ ಶ್ರೀ ಪವನ ಎಮ್.ಆರ್ ಉಪಸ್ಥಿತರಿದ್ದರು. ಈ ಆನ್‌ಲೈನ ಕಾರ್ಯಕ್ರಮದಲ್ಲಿ 55 ಸೌಹಾರ್ದ ಸಹಕಾರಿಗಳಿಂದ 55 ಪ್ರತಿನಿಧಿಗಳು ಭಾಗವಹಿಸಿದರು.

ದಿನಾಂಕ 06.05.2020 ರಂದು ಮಧ್ಯಾಹ್ನ 12.00 ರಿಂದ 1.30ರ ವರೆಗೆ ಕೊಪ್ಪಳ ಜಿಲ್ಲೆಯ ಗಂಗಾವತಿ ಮತ್ತು ಕುಷ್ಟಗಿ ತಾಲ್ಲೂಕಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರು/ಮುಖ್ಯ ಕಾರ್ಯನಿರ್ವಾಹರುಗಳಿಗೆ "ಸೌಹಾರ್ದ ಸಹಕಾರಿಯ ಮೇಲೆ ಕೋವಿಡ-19ರ ಪರಿಣಾಮ ಮತ್ತು ಅದರ ಬಗ್ಗೆ ತೆಗೆದುಕೊಳ್ಳಬೇಕಾದ ಪರಿಣಾಮಕಾರಿ ಕ್ರಮಗಳು" ಕುರಿತು ಶ್ರೀ ಮಧುಕರ ಹೆಗಡೆ ಸನ್ನದು ಲೆಕ್ಕಪರಿಶೋಧಕರು ಇವರು ಆನಲೈನ್ ಮುಖಾಂತರ ಉಪನ್ಯಾಸ ನೀಡಿದರು. 35 ಪ್ರತಿನಿಧಿಗಳು ಭಾಗವಹಿಸಿದರು.

ದಿನಾಂಕ 06.05.2020 ರಂದು ಬೆಳಗ್ಗೆ ಮಧ್ಯಾಹ್ನ 3.00 ಗಂಟೆಯಿಂದ 4.30ರ ವರೆಗೆ ಕೊಪ್ಪಳ ಜಿಲ್ಲೆಯ ಗಂಗಾವತಿ ಹಾಗೂ ಕಾರಟಗಿ ತಾಲ್ಲೂಕಿನ ಸೌಹಾರ್ದ ಸಹಕಾರಿಯ ಅಧ್ಯಕ್ಷರು/ಮುಖ್ಯ ಕಾರ್ಯನಿರ್ವಾಹರುಗಳಿಗೆ "ಸೌಹಾರ್ದ ಸಹಕಾರಿಯ ಮೇಲೆ ಕೋವಿಡ-19ರ ಪರಿಣಾಮ ಮತ್ತು ಅದರ ಬಗ್ಗೆ ತೆಗೆದುಕೊಳ್ಳಬೇಕಾದ ಪರಿಣಾಮಕಾರಿ ಕ್ರಮಗಳು" ಕುರಿತು ಶ್ರೀ ಮಧುಕರ ಹೆಗಡೆ ಸನ್ನದು ಲೆಕ್ಕಪರಿಶೋಧಕರು ಇವರು ಆನಲೈನ್ ಮುಖಾಂತರ ಉಪನ್ಯಾಸ ನೀಡಿದರು. ಈ ಸಂವಾದ ಕಾರ್ಯಕ್ರಮದಲ್ಲಿ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ ರವರು ಹಾಗೂ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್ ಮತ್ತು ಕೊಪ್ಪಳ ಜಿಲ್ಲಾ ಸಂಯೋಜಕರಾದ ಶ್ರೀ ಪವನ ಎಮ್.ಆರ್ ಉಪಸ್ಥಿತರಿದ್ದರು. ಈ ಆನ್‌ಲೈನ ಕಾರ್ಯಕ್ರಮದಲ್ಲಿ 35 ಸೌಹಾರ್ದ ಸಹಕಾರಿಗಳಿಂದ 35 ಪ್ರತಿನಿಧಿಗಳು ಭಾಗಿಯಾಗಿದ್ದರು.

## ಮೈಸೂರು ವಿಭಾಗ

**ಮೈಸೂರು ಮತ್ತು ಕೊಡಗು:** ಮೈಸೂರು ಮತ್ತು ಕೊಡಗು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರಗಳಿಗೆ ಕೋವಿಡ್-19 ನಿಂದ ಸಹಕಾರಿ ಕ್ಷೇತ್ರಕ್ಕೆ ಆಗುತ್ತಿರುವ ಪರಿಣಾಮಗಳು ಮತ್ತು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸಂವಾದವನ್ನು ಆನ್‌ಲೈನ್ ಮೂಲಕ ದಿನಾಂಕ: 09.05.2019ರಂದು 3:00 ಗಂಟೆಗೆ ಆಯೋಜಿಸಲಾಗಿತ್ತು.

ಸದರಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾನ್ಯ ನಿರ್ದೇಶಕರಾದ ಶ್ರೀ ಹೆಚ್ ವಿ ರಾಜೀವ್‌ರವರು ವಹಿಸಿದ್ದರು. ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥರವರು, ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು, ಮಾನ್ಯ ಲೆಕ್ಕಪರಿಶೋಧಕರಾದ ಶ್ರೀ ಮಧುಕರ ಹೆಗಡೆರವರು ಹಾಗೂ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರರವರು ಉಪಸ್ಥಿತರಿದ್ದರು. ಸದರಿ ಸಭೆಯಲ್ಲಿ 48 ಸೌಹಾರ್ದ ಸಹಕಾರಿಗಳಿಂದ 59 ಪ್ರತಿನಿಧಿಗಳು ಭಾಗವಹಿಸಿದ್ದರು.

ಸ್ವಾಗತ ಭಾಷಣವನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರರವರು ನೆರವೇರಿಸಿದರು. ನಂತರ ಮಾನ್ಯ ನಿರ್ದೇಶಕರಾದ ಶ್ರೀ ಹೆಚ್ ವಿ ರಾಜೀವ್‌ರವರು ಕೋವಿಡ್-19 ನಿಂದ ಸಹಕಾರಿ ಕ್ಷೇತ್ರಕ್ಕೆ ತುಂಬಾ ಪರಿಣಾಮ ಉಂಟಾಗಿದೆ. ಸೌಹಾರ್ದ ಸಹಕಾರಿಗಳು ತಂತ್ರಜ್ಞಾನ ಉಪಯೋಗಿಸಿಕೊಂಡು ತಮ್ಮ ಕಾರ್ಯಚಟುವಟಿಕೆಗಳನ್ನು ಮಾಡಬೇಕು. ವಿಶ್ವವೇ ಪ್ರಸ್ತುತ ಆರ್ಥಿಕ ಮುಗ್ಗಟ್ಟಿನಿಂದ ಇರುವುದರಿಂದ ಸಹಕಾರಿಗಳು ತಮ್ಮ ಸದಸ್ಯರ ಮಾರ್ಚ್, ಏಪ್ರಿಲ್, ಮೇ ತಿಂಗಳುಗಳ ಸಾಲದ ಕಂತುಗಳನ್ನು ಸಮನಾಗಿ ಮುಂದಿನ ಮಾರ್ಚ್ 2020 ರವರೆಗೆ ಪಾವತಿಸಲು ಸಾಲಗಾರಿಗೆ ಅವಕಾಶ ನೀಡಬೇಕೆಂದು ತಿಳಿಸಿದರು.

ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥರವರು ಮಂಗಳೂರಿನ ಮಾತೃಭೂಮಿ ಸೌಹಾರ್ದ ಸಹಕಾರಿಯವರು ಕೋಲಾರದ ರೈತರಿಂದ ನೇರವಾಗಿ ತರಕಾರಿಗಳನ್ನು ಖರೀದಿಸಿ ಮಂಗಳೂರಿನ ವಿವಿಧ ಭಾಗಗಳಲ್ಲಿ ಪಿಗ್ಮಿ ಏಜೆಂಟ್‌ರ ಮೂಲಕ ಮಾರಾಟ ಮಾಡಿ ಒಂದು ಲಕ್ಷಕ್ಕಿಂತ ಹೆಚ್ಚು ಆದಾಯ ಗಳಿಸಿದ್ದಾರೆ. ಸಹಕಾರಿಗಳು ಹೊಸ ಸದಸ್ಯರನ್ನು ಹೆಚ್ಚಾಗಿ ಸೇರಿಸಿಕೊಳ್ಳಬೇಕು ಹಾಗೂ ಎಲ್ಲಾ ಸಹಕಾರಿಗಳು ಖರ್ಚುಗಳನ್ನು ಕಡಿಮೆ ಮಾಡಬೇಕು. ಸಾಲ ಮರುಪಾವತಿಯನ್ನು ವಾರಕ್ಕೆ ಒಂದು ಬಾರಿ ಪಾವತಿಸುವಂತೆ ಸದಸ್ಯರಲ್ಲಿ ಮನವಿ ಮಾಡಿಕೊಳ್ಳಬೇಕು ಮತ್ತು ಸದಸ್ಯರಿಗೆ ಒಡಿ ಸಾಲಗಳನ್ನು ನೀಡುವುದು ಸೂಕ್ತವಾಗಿರುತ್ತದೆ. ಆಡಳಿತ ಮಂಡಲಿ ಸಭೆಗಳನ್ನು ಆನ್‌ಲೈನ್ ಮೂಲಕ ಮಾಡುವಂತೆ ಹಾಗೂ ಸಹಕಾರಿಯ ಸದಸ್ಯರ ವಾಟ್ಸ್‌ಆಪ್ ಗ್ರೂಪ್‌ಗಳನ್ನು ಮಾಡುವಂತೆ ಸಲಹೆ ನೀಡಿದರು.

ಮಾನ್ಯ ಲೆಕ್ಕಪರಿಶೋಧಕರಾದ ಶ್ರೀ ಮಧುಕರ ಹೆಗಡೆರವರು ಸಹಕಾರಿಯ ಸದಸ್ಯರ ಸಾಲಗಳ 3 ತಿಂಗಳ ಕಂತುಗಳನ್ನು ಸಮಾನಾಗಿ ಮುಂದಿನ 3 ತಿಂಗಳು ಅಥವಾ 6 ತಿಂಗಳಿಗೆ ಪಾವತಿಸುವಂತೆ ತಿಳಿಸಿದರು. ನಂತರ ಆದಾಯ ತೆರಿಗೆಯನ್ನು ಫೈಲ್ ಮಾಡಲು ದಿನಾಂಕ:31.10.2020ರೊಳಗೆ ಮಾಡಬೇಕಾಗಿರುವುದರಿಂದ ಬೇಗನೆ ಲೆಕ್ಕಪರಿಶೋಧನೆ ಮಾಡಿಸುವುದು ಸೂಕ್ತವಾಗಿರುತ್ತದೆ. ಆದಾಯ ತೆರಿಗೆ ಸೆಕ್ಷನ್ 194ಎ ರಂತೆ ಸಹಕಾರಿಗಳು 50 ಕೋಟಿಗಿಂತ ಹೆಚ್ಚು ವಹಿವಾಟು ಮಾಡುವ ಸಹಕಾರಿಗಳು ತಮ್ಮ ಸದಸ್ಯರ ಠೇವಣಿಗೆ ಬಡ್ಡಿ ಪಾವತಿಸುವಾಗ ಟಿಡಿಎಸ್‌ನ್ನು 2020-21ನೇ ಸಾಲಿನಿಂದ ಕಡಿತ ಮಾಡಬೇಕಾಗುತ್ತದೆ ಎಂದು ತಿಳಿಸಿದರು.

**ಹಾಸನ ಮತ್ತು ಚಿಕ್ಕಮಗಳೂರು:** ದಿನಾಂಕ: 16.05.2020ರಂದು ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾರೊಂದಿಗೆ ಸಭೆಯನ್ನು "ವಿಡಿಯೋ ಕಾನ್ಫರೆನ್ಸ್" ನ ಮೂಲಕ ಚರ್ಚೆಯನ್ನು ನಡೆಸಲಾಯಿತು.

ಸದರಿ ಸಭೆಯ ಅಧ್ಯಕ್ಷತೆಯನ್ನು ಶ್ರೀ ಎಸ್.ಕೆ ಮಂಜುನಾಥ ರವರು, ಮಾನ್ಯ ನಿರ್ದೇಶಕರು, ಸಂಯುಕ್ತ ಸಹಕಾರಿ, ಬೆಂಗಳೂರು ಇವರು ವಹಿಸಿದ್ದರು.

ಸದರಿ ಸಭೆಯ ಸ್ವಾಗತ-ಪ್ರಾಸ್ತಾವಿಕವನ್ನು ಶ್ರೀ ಶಿವಕುಮಾರ್ ಬಿರಾದರ್, ಮೈಸೂರು ಪ್ರಾಂತೀಯ ವ್ಯವಸ್ಥಾಪಕರು ನೇರವೇರಿಸಿದರು. ಸದರಿ ಸಭೆಯಲ್ಲಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ್ ರವರು ಭಾಗವಹಿಸಿದ್ದು ಸಂಯುಕ್ತ ಸಹಕಾರಿಯ ನಿಲುವು, ಆಶಯಗಳ ಬಗ್ಗೆ ಹಾಗೂ ಸದಸ್ಯ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರುಗಳ ಪ್ರಶ್ನೆಗಳಿಗೆ ಸೂಕ್ತ ಉತ್ತರಗಳನ್ನು ನೀಡಿದರು. ಈ ಸಭೆಯಲ್ಲಿ ಪ್ರಾಂತೀಯ

ಕಛೇರಿಯ ಸಿಬ್ಬಂದಿಗಳು ಮತ್ತು ಎರಡು ಜಿಲ್ಲೆಗಳ 79 ಸಹಕಾರಿಗಳಿಂದ ಒಟ್ಟು 32 ಜನರು ಭಾಗವಹಿಸಿದ್ದರು.

ಶ್ರೀ ಎಸ್.ಕೆ ಮಂಜುನಾಥ ರವರು ಕೋವಿಡ್-19ದಿಂದ ಪ್ರಸ್ತುತ ಸಹಕಾರಿಗಳು ಆರ್ಥಿಕ ಸಂಕಷ್ಟ ಸಂದರ್ಭದಲ್ಲಿ ಎದುರಿಸುತ್ತಿರುವ ಸಮಸ್ಯೆಗಳು, ಒದಗಿರುವ ಅವಕಾಶಗಳ ಬಗ್ಗೆ ಸುಧೀರ್ಘವಾಗಿ ಮಾಹಿತಿಯನ್ನು ಹಂಚಿಕೊಂಡರು. ನಂತರದಲ್ಲಿ ಸಭೆಯಲ್ಲಿ ಹಾಜರಿದ್ದ ಸಹಕಾರಿಗಳ ಅಧ್ಯಕ್ಷರುಗಳು ಸ್ಥಳೀಯವಾಗಿ ಮಾಡಿರುವ ಸಾಮಾಜಿಕ ಸೇವಾ ಚಟುವಟಿಕೆಗಳ ಬಗ್ಗೆ ಮಾಹಿತಿಯನ್ನು ನೀಡಿದರು ಮತ್ತು ಸಮಸ್ಯೆಗಳ ಬಗ್ಗೆ ಚರ್ಚಿಸಿ ಪರಿಹಾರವನ್ನು ಪಡೆದರು. ಸಭೆಯ ಕೊನೆಯಲ್ಲಿ ಶ್ರೀ ಶಿವಕುಮಾರ್ ಬಿರಾದರ್ ವಂದರ್ನಾಪಣೆ ಮಾಡಿದರು.

---

**ದಕ್ಷಿಣಾ ಕನ್ನಡ:** ದಿನಾಂಕ: 14.05.2020ರಂದು ದಕ್ಷಿಣ ಕನ್ನಡ ಜಿಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರುಗಳು ಮತ್ತು ಮುಖ್ಯ ಪ್ರವರ್ತಕರ ಸಭೆಯನ್ನು "ವಿಡಿಯೋ ಕಾನ್ಫರೆನ್ಸ್"ನ ಮೂಲಕ ಆಯೋಜಿಸಲಾಗಿತ್ತು. ಸದರಿ ಸಭೆಯಲ್ಲಿ ಕರೊನಾ(ಕೋವಿಡ್-19) ಮಹಾಮಾರಿಯಿಂದ ಪ್ರಸ್ತುತ ಸಹಕಾರಿ ಕ್ಷೇತ್ರಕ್ಕೆ ಆಗುತ್ತಿರುವ ಪರಿಣಾಮಗಳ ಕುರಿತು ಮತ್ತು ಮುಂದಿನ ದಿನಗಳಲ್ಲಿ ಸಹಕಾರಿಗಳು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚೆಯನ್ನು ನಡೆಸಲಾಯಿತು.

ಸದರಿ ಸಭೆಯಲ್ಲಿ ಪ್ರಾಂತೀಯ ನಿರ್ದೇಶಕರಾದ ಶ್ರೀ ಎಸ್.ಕೆ ಮಂಜುನಾಥ ಇವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಸ್ತುತ ಕೋವಿಡ್-19ರ ಪರಿಸ್ಥಿತಿಯನ್ನು ಸೌಹಾರ್ದ ಸಹಕಾರಿಗಳು ಸಮರ್ಥವಾಗಿ ಎದುರಿಸಿದೆ. ಸೌಹಾರ್ದ ಸಹಕಾರಿಗಳು ಬದಲಾದ ಪರಿಸ್ಥಿತಿಗೆ ಅನುಗುಣವಾಗಿ ತನ್ನ ಸದಸ್ಯರಿಗೆ ಅಗತ್ಯವಿರುವ ಸೇವೆಯನ್ನು ಒದಗಿಸವಂತಾಗಬೇಕು. ಸಾವಯಾವ ಕೃಷಿಗೆ ಉತ್ತೇಜನ ನೀಡಬೇಕು. ಸೌಹಾರ್ದ ಸಹಕಾರಿಗಳು ಪತ್ತಿನ ಚಟುವಟಿಕೆಯ ಜೊತೆಗೆ ಇತರೆ ಚಟುವಟಿಕೆಗಳಿಗೆ ಅವಕಾಶ ಕಲ್ಪಿಸಬೇಕು ಎಂದು ತಿಳಿಸಿದರು.

ನಂತರದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ಮಾತನಾಡಿ ರಾಜ್ಯದ ಇತರೆ ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಉತ್ತಮ ಚಟುವಟಿಕೆಗಳ ಕುರಿತು ಮಾಹಿತಿ ನೀಡಿದರು. ಜಿಲ್ಲೆಯಲ್ಲಿ ಸೌಹಾರ್ದ ಸಹಕಾರಿಗಳು ನಡೆಸಿರುವ ವಿನೂತನ ಕಾರ್ಯಕ್ರಮಗಳ ವರದಿಯನ್ನು ಪಡೆದರು ಮತ್ತು ಪ್ರಶ್ನೋತ್ತರ ಅವಧಿಯನ್ನು ನಡೆಸಿಕೊಟ್ಟರು.

ಸಭೆಯ ಸ್ವಾಗತ/ವಂದನಾರ್ಪಣೆಯನ್ನು ಸೌಹಾರ್ದ ಜಿಲ್ಲಾ ಸಂಯೋಜ-ಕರಾದ ಶ್ರೀ ಗುರುಪ್ರಸಾದ ಬಂಗೇರ ಇವರು ನೇರವೇರಿಸಿದರು. ದಕ್ಷಿಣ ಕನ್ನಡ ಜಿಲ್ಲೆಯ ಅಧ್ಯಕ್ಷರುಗಳ ಸಭೆಯಲ್ಲಿ 70 ಸಹಕಾರಿಗಳಿಂದ ಒಟ್ಟು 74 ಪ್ರತಿನಿಧಿಗಳು ಭಾಗವಹಿಸಿದ್ದರು ದಕ್ಷಿಣ ಕನ್ನಡ ಜಿಲ್ಲೆಯ ಮುಖ್ಯ ಕಾರ್ಯನಿರ್ವಾಹಕರ ಸಭೆಯಲ್ಲಿ 74 ಸಹಕಾರಿಗಳಿಂದ ಒಟ್ಟು 80 ಪ್ರತಿನಿಧಿಗಳು ಭಾಗವಹಿಸಿದ್ದರು.

---

**ಮಂಡ್ಯ ಮತ್ತು ಚಾಮರಾಜನಗರ:** ದಿನಾಂಕ: 16.05.2020ರಂದು ಚಾಮರಾಜನಗರ ಮತ್ತು ಮಂಡ್ಯ ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾರೊಂದಿಗೆ ಸಭೆಯನ್ನು "ವಿಡಿಯೋ ಕಾನ್ಫರೆನ್ಸ್" ನ ಮೂಲಕ ಚರ್ಚೆಯನ್ನು ನಡೆಸಲಾಯಿತು.

ಸದರಿ ಸಭೆಯ ಅಧ್ಯಕ್ಷತೆಯನ್ನು ಶ್ರೀ ಎಸ್.ಕೆ ಮಂಜುನಾಥ ರವರು, ಮಾನ್ಯ ನಿರ್ದೇಶಕರು, ಸಂಯುಕ್ತ ಸಹಕಾರಿ, ಬೆಂಗಳೂರು ಇವರು ವಹಿಸಿದ್ದರು. ಸದರಿ ಸಭೆಯ ಸ್ವಾಗತ-ಪ್ರಾಸ್ತಾವಿಕವನ್ನು ಶ್ರೀ ಎಂ. ಚಂದ್ರಶೇಖರಯ್ಯ, ಸೌಹಾರ್ದ ಜಿಲ್ಲಾ ಸಂಯೋಜಕರು ಇವರು ನೇರವೇರಿಸಿದರು. ಈ ಸಭೆಯಲ್ಲಿ ಪ್ರಾಂತೀಯ ವ್ಯವಸ್ಥಾಪಕರು, ಪ್ರಾಂತೀಯ ಕಛೇರಿಯ ಸಿಬ್ಬಂದಿಗಳು ಮತ್ತು ಎರಡು ಜಿಲ್ಲೆಗಳ 29 ಸಹಕಾರಿಗಳಿಂದ ಒಟ್ಟು 42 ಜನರು ಭಾಗವಹಿಸಿದ್ದರು.

ಶ್ರೀ ಎಸ್.ಕೆ ಮಂಜುನಾಥ ರವರು ಕೋವಿಡ್-19ದಿಂದ ಪ್ರಸ್ತುತ ಸಹಕಾರಿಗಳು ಆರ್ಥಿಕ ಸಂಕಷ್ಟ ಸಂದರ್ಭದಲ್ಲಿ ಎದುರಿಸುತ್ತಿರುವ ಸಮಸ್ಯೆಗಳು, ಒದಗಿರುವ ಅವಕಾಶಗಳು ಬಗ್ಗೆ ಸುಧೀರ್ಘವಾಗಿ ಮಾಹಿತಿಯನ್ನು ಹಂಚಿಕೊಂಡರು. ನಂತರದಲ್ಲಿ ಸಭೆಯಲ್ಲಿ ಹಾಜರಿದ್ದ ಸಹಕಾರಿಗಳ ಅಧ್ಯಕ್ಷರುಗಳು ಸ್ಥಳೀಯವಾಗಿ ಮಾಡಿರುವ ಸಾಮಾಜಿಕ ಸೇವಾ ಚಟುವಟಿಕೆಗಳ ಬಗ್ಗೆ ಮಾಹಿತಿಯನ್ನು ನೀಡಿದರು ಮತ್ತು ಸಮಸ್ಯೆಗಳ ಬಗ್ಗೆ ಚರ್ಚಿಸಿ ಪರಿಹಾರವನ್ನು ಪಡೆದರು. ಸಭೆಯ ಕೊನೆಯಲ್ಲಿ ಶ್ರೀ ಎಂ. ಚಂದ್ರಶೇಖರಯ್ಯ ವಂದರ್ನಾಪಣೆ ಮಾಡಿದರು.

---

**ಉಡುಪಿ:** ಉಡುಪಿ ಜಿಲ್ಲೆಯ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳೊಂದಿಗೆ ದಿನಾಂಕ 13.05.2020 ರಂದು ಉಡುಪಿ ಜಿಲ್ಲೆಯ ಎಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರುಗಳು ಹಾಗು ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಆನ್‌ಲೈನ್ ಸಭೆಯನ್ನು ಆಯೋಜಿಸಲಾಗಿತ್ತು. ಸದರಿ ಸಭೆಗೆ ಮೈಸೂರು ಪ್ರಾಂತದ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಇದರ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ್ ಹಾಗು ಪ್ರಾಂತೀಯ ವ್ಯವಸ್ಥಾಕರಾದ ಶ್ರೀ ಶಿವಕುಮಾರ್ ಬಿರಾದರ್ ಹಾಗು ಜಿಲ್ಲಾ ಸಂಯೋಜಕರಾದ ಶ್ರೀ ವಿಜಯ್ ಬಿ.ಎಸ್ ಇವರುಗಳು ಭಾಗವಹಿಸಿದ್ದರು. ಸಹಕಾರಿಗಳ ಅಧ್ಯಕ್ಷರುಗಳಿಗಾಗಿ ಬೆಳಗ್ಗೆ 10.30 ರಿಂದ 11.30 ರವರೆಗೆ ಹಾಗೂ ಮುಖ್ಯಕಾರ್ಯನಿರ್ವಾಹಕರಿಗೆ 12.30 ರಿಂದ 1.30 ರವರೆಗೆ ಸಭೆಯನ್ನು ಆಯೋಜಿಸಲಾಯಿತು. ಅಧ್ಯಕ್ಷರುಗಳ ಸಭೆಯಲ್ಲಿ 81 ವಿವಿಧ ಸಹಕಾರಿಗಳ ಅಧ್ಯಕ್ಷರುಗಳು ಹಾಗು ಮುಖ್ಯಕಾರ್ಯನಿರ್ವಾಹಕರುಗಳ ಸಭೆಯಲ್ಲಿ 100 ಜನ ವಿವಿಧ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳು ಭಾಗವಹಿಸಿದ್ದರು. ಪ್ರಾಸ್ತವಿಕವಾಗಿ ಪ್ರಾಂತೀಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ ರವರು ಮಾತನಾಡಿ. ಕೋವಿಡ್-19ನಿಂದ ಸಹಕಾ-ರಿಗಳಿಗೆ ಆಗುತ್ತಿರುವ ತೊಂದರೆಗಳ ಬಗ್ಗೆ ವಿವರಿಸಿದರು ಹಾಗು ಕೊರೊನಾ ಹಲವು ಅವಕಾಶಗಳನ್ನು ಸಹಕಾರಿಗಳಿಗೆ ಮಾಡಿಕೊಟ್ಟಿದೆ. ಮುಂದಿನ ದಿನಗಳಲ್ಲಿ ಸಹಕಾರಿಗಳು ತಮ್ಮ ವ್ಯವಹಾರ ವಿಧಾನಗಳಲ್ಲಿ ಬದಲಾವಣೆಗಳನ್ನು ತರುವುದು ಹಾಗೂ ಹೊಸ ವ್ಯವಹಾರಗಳನ್ನು ಕೈಗೊಳ್ಳಲು ಸಲಹೆಯನ್ನು ನೀಡಿದರು. ವ್ಯವಸ್ಥಾಪಕ ನಿರ್ದೇಶಕರು ಮಾತನಾಡಿ ಸೌಹಾರ್ದ ಸಂಯುಕ್ತ ಸಹಕಾರಿಯ ಆಶಯಗಳ ಕುರಿತು ಹಾಗು ಸಹಕಾರಿಗಳಿಂದ ಬಂದಂತಹ ಪ್ರಶ್ನೆಗಳಿಗೆ ಉತ್ತರವನ್ನು ನೀಡಿರುತ್ತಾರೆ.

## ಪ್ರಶ್ನೋತ್ತರಗಳು

# ರಾಜ್ಯದಲ್ಲಿ ಕೋವೀಡ್-19 ಕಾರಣದಿಂದಾಗಿ ಸೌಹಾರ್ದ ಸಹಕಾರಿಗಳು ಅನುಭವಿಸುತ್ತಿರುವ ತೊಂದರೆಗಳನ್ನು ಗಮನಿಸಿ ಸಂಯುಕ್ತ ಸಹಕಾರಿಯು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಆನ್‌ಲೈನ್ ಮೂಲಕ ಸಂಪರ್ಕ ಸಭೆಗಳನ್ನು ನಡೆಸಲಾಯಿತು. ಈ ಸಂಪರ್ಕ ಸಭೆಗಳ ಸಂದರ್ಭದಲ್ಲಿ ಸೌಹಾರ್ದ ಸಹಕಾರಿಗಳು ಕೇಳಿರುವ ಪ್ರಶ್ನೆಗಳಿಗೆ ಉತ್ತರಗಳನ್ನು ರಾಜ್ಯದ ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ.

ವಿಶ್ವಭಾರತಿ ಸೌಹಾರ್ದ ಸಹಕಾರಿ ನಿ ಚಾಮರಾಜನಗರ. ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಶ್ರೀ ಪಾರ್ವತಿ ಸೌಹಾರ್ದ ಸಹಕಾರಿ ನಿ ಚಾಮರಾಜನಗರ

**ಪ್ರಶ್ನೆ 01 : ಸಹಕಾರಿಯು ಸೇವಾಸಿಂಧು ವ್ಯವಹಾರವನ್ನು ನಡೆಸಬಹುದೆ? ನಡೆಸಬಹುದಾದರೆ ಯಾರ ಅನುಮತಿ ಪಡೆಯಬೇಕು? ಸಂಯುಕ್ತ ಸಹಕಾರಿಯಿಂದ ತಾಂತ್ರಿಕ ಸಹಾಯ ಸಿಗುವುದೇ?**

**ಉತ್ತರ:** ಸೌಹಾರ್ದ ಸಹಕಾರಿಗಳು ಸೇವಾ ಸಿಂಧು ಯೋಜನೆಯನ್ನು ಪ್ರಾರಂಭಿಸಬಹುದಾಗಿದ್ದು ಇದಕ್ಕೆ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಕಂದಾಯ ಅಧಿಕಾರಿಗಳನ್ನು ಸಂಪರ್ಕಿಸಿ ಸೇವಾಸಿಂಧು ಯೋಜನೆಯನ್ನು ಸಹಕಾರಿಯು ಜಾರಿಗೊಳಿಸಲು ಅನುಮತಿ ಪಡೆದುಕೊಳ್ಳಬೇಕಾಗುತ್ತದೆ. ಪ್ರಸ್ತುತ ಸೇವಾ ಸಿಂಧು ಪಡೆಯಲ್ಲಿ 47 ಇಲಾಖೆಗಳು 451 ಸೇವೆಗಳು ಲಭ್ಯವಿರುತ್ತವೆ.

ಶ್ರೀ ಬ್ರಾಹ್ಮೀ ದುರ್ಗಾಪರಮೇಶ್ವರಿ ಸೌಹಾರ್ದ ಸಹಕಾರಿ ನಿ, ಸ್ವರ್ಣ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ.,

**ಪ್ರಶ್ನೆ 02 : ಸಹಕಾರಿಗಳಲ್ಲಿ ಸಾಲ ವಸೂಲಾತಿಗೆ ಸಂಯುಕ್ತ ಸಹಕಾರಿಯಿಂದ ಸಾಲ ವಸೂಲಾತಿ ಅಧಿಕಾರಿಗಳನ್ನು ನೇಮಿಸಬೇಕು?**

**ಉತ್ತರ** : ಸಂಯುಕ್ತ ಸಹಕಾರಿಯ ಕಿರಿಯ ಅಧಿಕಾರಿಗಳು ಹಾಗೂ ಮೇಲ್ಪಟ್ಟ ಅಧಿಕಾರಿಗಳನ್ನು ಸಹಕಾರಿಗಳ ಉಪ ನಿಬಂಧಕರು ಸಾಲ ವಸೂಲಾತಿ ಅಧಿಕಾರಿಗಳನ್ನಾಗಿ ನೇಮಿಸಲು ಅನುಮತಿಸುವಂತೆ ಸಹಕಾರ ಸಂಘಗಳ ನಿಬಂಧಕರಿಗೆ ಹಾಗೂ ಸರಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಪ್ರಸ್ತಾವನೆಗೆ ದೊರೆತ ನಂತರ ನಂತರ ಕ್ರಮವಿಡಲಾಗುವುದು.

ಕುಂದಾಪುರ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ.,

**ಪ್ರಶ್ನೆ 03 : ಸಹಕಾರಿಗಳ ಸಾಮಾನ್ಯ ಸಭೆಯ ದಿನಾಂಕ ಮುಂದೂಡುವ ಕುರಿತು ಮನವಿ ಮಾಡಿರುತ್ತಾರೆ. ಸಹಕಾರಿಗಳು ತನ್ನ ಸದಸ್ಯರ ದಿನನಿತ್ಯದ ಅಗತ್ಯ ವಸ್ತುಗಳ ವ್ಯವಹಾರವನ್ನು ನಡೆಸಲು ಸಂಬಂಧಪಟ್ಟ ವ್ಯಕ್ತಿಗಳ/ಮಳಿಗೆಗಳ ಬಗ್ಗೆ ಮಾಹಿತಿ ಒದಗಿಸುವುದು ಹಾಗೂ ಸಂಪರ್ಕ ಬೆಸೆಯಲು ಸಹಾಯ ಮಾಡಬಹುದೆ?**

**ಉತ್ತರ** : ಸಹಕಾರಿಗಳು ತನ್ನ ಸದಸ್ಯರ ದಿನನಿತ್ಯದ ಅಗತ್ಯ ವಸ್ತುಗಳ ವ್ಯವಹಾರವನ್ನು ನಡೆಸಲು ಸಂಬಂಧಪಟ್ಟ ವ್ಯಕ್ತಿಗಳ/ಮಳಿಗೆಗಳ ಬಗ್ಗೆ ಮಾಹಿತಿ ಒದಗಿಸುವುದು ಹಾಗೂ ಸಂಪರ್ಕ ಬೆಸೆಯಲು ಸಹಾಯ ಮಾಡಬಹುದಾಗಿದೆ.

ಶ್ರೀ ವೀರಭದ್ರ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ.,

**ಪ್ರಶ್ನೆ 4 : ಸಹಕಾರಿಗಳ ಚುನಾವಣೆ ಮುಂದೂಡಿರುವ ಬಗ್ಗೆ ಕೈಗೊಳ್ಳಬೇಕಾದ ಕ್ರಮಗಳು ಯಾವುವು?**

ಉತ್ತರ : ಸಹಕಾರಿಗಳ ಸಾಮಾನ್ಯ ಸಭೆಗಳನ್ನು ಮುಂದೂಡುವ ಬಗ್ಗೆ ಸಹಕಾರಿಗಳ ನಿಬಂಧಕರಿಗೆ ಹಾಗೂ ಸರಕಾರಕ್ಕೆ ಮನವಿ ಸಲ್ಲಿಸಲಾಗಿದೆ. ಸರಕಾರದಿಂದ ಉತ್ತರ ಬಂದ ನಂತರ ಸೂಕ್ತ ಕ್ರಮವಿಡಲು ತಿಳಿಸಲಾಗುವುದು. ಪ್ರಸ್ತುತ ಸರಕಾರ ಚುನಾವಣೆಗಳನ್ನು ಮುಂದೂಡಲಿಕ್ಕೆ ನಿರ್ಣಯ ತೆಗೆದುಕೊಂಡಿದೆ. ಈ ನಿರ್ಣಯವನ್ನು ಸರಕಾರ ಹಿಂಪಡೆದ ನಂತರ ಚುನಾವಣೆ ಪ್ರಕ್ರೀಯೆ ಯಾವ ಹಂತದಲ್ಲಿ ನಿಂತಿತ್ತೂ ಅಲ್ಲಿಂದ ಮುಂದುವರೆಯುತ್ತದೆ.

ಅಗ್ರಜ ಸೌಹಾರ್ದ ಸಹಕಾರಿ ನಿ., ಮಹಾದೇವ ಸೌಹಾರ್ದ ಪತ್ತಿನ ಸಹಕಾರಿ ನಿ., ಕಲಬುರಗಿ

**ಪ್ರಶ್ನೆ 05 : ಸಹಕಾರಿಗಳ ವಾರ್ಷಿಕ ಶುಲ್ಕ ಮತ್ತು ಶಿಕ್ಷಣ ನಿಧಿಯನ್ನು ಕಡಿಮೆ ಮಾಡಬಹುದೆ?**

ಉತ್ತರ : ಸಂಯುಕ್ತ ಸಹಕಾರಿಯ ಸಿಬ್ಬಂದಿಗಳ ವೇತನ ಮತ್ತು ಸಹಕಾರಿಗಳಿಗೆ ಒದಗಿಸುತ್ತಿರುವ ತರಬೇತಿಗಳಿಗೆ ಸೌಹಾರ್ದ ಸಹಕಾರಿಗಳು ಪಾವತಿಸುವ ವಾರ್ಷಿಕ ಶುಲ್ಕ ಮತ್ತು ಶಿಕ್ಷಣ ನಿಧಿ ಆಧಾರವಾಗಿರುತ್ತದೆ. ಶಿಕ್ಷಣ ಮೊತ್ತ ಸಹಕಾರಿಯು ಗಳಿಸುವ ಲಾಭದ 2 ಪ್ರತಿಶತ ಆಗಿರುತ್ತದೆ. ಇದು ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿಗಳ ಅಧಿನಿಯಮ 19978 ರ ಕಲಂ 10(2)xxi ರಲ್ಲಿ ತಿಳಿಸಲಾಗಿತ್ತು. ಕಡಿಮೆಗೊಳಿಸಲು ಅಥವಾ ಹೆಚ್ಚು ಮಾಡಲು ಅವಕಾಶವಿರುವುದಿಲ್ಲ. ವಾರ್ಷಿಕ ಶುಲ್ಕ ಪಾವತಿಸುವ ಕುರಿತು ಸಂಯುಕ್ತ ಸಹಕಾರಿಯ ಉಪವಿಧಿಯಲ್ಲಿ ತಿಳಿಸಲಾಗಿರುವ ಎಲ್ಲ ಸೌಹಾರ್ದ ಸಹಕಾರಿಗಳು ಅನುಮೋದಿಸಿರುವ ದರದಲ್ಲಿಯೇ ಇರುತ್ತವೆ.

ರೇಣಾ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ

**ಪ್ರಶ್ನೆ 06 : ಸಹಕಾರಿಯ ನಿರ್ದೇಶಕರೆ ಸಾಲವನ್ನು ಪಡೆದು ಸುಸ್ತಿದಾರಾಗಿರುವ ಕಾರಣ ಈ ಸಂದರ್ಭದಲ್ಲಿ ಯಾವ ಕ್ರಮಕೈಗೊಳ್ಳಬೇಕು?**

**ಉತ್ತರ** : ಸಾಲವನ್ನು ಪಡೆದು ಸುಸ್ಥಿಯಾಗಿರುವ ನಿರ್ದೇಶಕರು ಸಹಕಾರಿಯ ಸಹಕಾರಿಯ ನಿರ್ದೇಶಕರ ಸ್ಥಾನದಲ್ಲಿ ಮುಂದುವರೆಯಲು ಅನರ್ಹರಾಗಿರುತ್ತಾರೆ ಆದ್ದರಿಂದ ಆ ಕುರಿತು ಅನರ್ಹತೆಯ ಪ್ರಸ್ತಾವನೆಯನ್ನು ಈ ಕೂಡಲೇ ಸಂಯುಕ್ತ ಸಹಕಾರಿಗೆ ಸಲ್ಲಿಸುವುದು ಸೂಕ್ತ. ಮತ್ತು ಅಂತಹ ನಿರ್ದೇಶಕರ ಸಾಲ ವಸೂಲಾತಿಗಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿಗಳ ನಿಯಮ 1997 ಕಲಂ 39 ರಡಿ ದಾವೆಯನ್ನು ದಾಖಲು ಮಾಡುವುದು ಸೂಕ್ತವಾಗಿರುತ್ತದೆ.

**ಪ್ರಶ್ನೆ 07 : ಸಂಯುಕ್ತ ಸಹಕಾರಿಯಿಂದ ಆನ್‌ಲೈನ್ ಮಾರುಕಟ್ಟೆ ಕುರಿತು**

ತರಬೇತಿ ನೀಡಲಾಗುವುದೆಯೇ?

**ಉತ್ತರ** : ಸಂಯುಕ್ತ ಸಹಕಾರಿಯಿಂದ ಆನ್ ಲೈನ್ ಮಾರುಕಟ್ಟೆ ಬಗ್ಗೆ ತರಬೇತಿ ನೀಡುವ ಕುರಿತು ತಮ್ಮ ಸಲಹೆ ಉತ್ತಮವಾಗಿದ್ದು, ಪರಿಶೀಲಿಸಲಾಗುವುದು.

**ಸಂಗಮ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ**

**ಪ್ರಶ್ನೆ 8 : ಸದಸ್ಯರು ಈ ಸಮಯದಲ್ಲಿ ಸಾಲ ಮರುಪಾವತಿ ಕುರಿತಂತೆ ಸಂಯುಕ್ತ ಸಹಕಾರಿಯಿಂದ ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ಅನ್ವಯವಾಗುವಂತೆ ಸುತ್ತೋಲೆ ನೀಡಬಹುದೆ?**

**ಉತ್ತರ** : ಸಹಕಾರಿಯ ಸದಸ್ಯರು ಸಾಲವನ್ನು ಮರುಪಾವತಿಸುವಂತೆ ಸದಸ್ಯ ಸಹಕಾರಿಗಳ ಸದಸ್ಯರಿಗೆ ಅನ್ವಯವಾಗುವಂತೆ ಸಂಯುಕ್ತ ಸಹಕಾರಿಯ ಸುತ್ತೋಲೆಯನ್ನು ನೀಡಲಾಗುವುದಿಲ್ಲ. ಸಾಲ ವಸೂಲಾತಿಗೆ ಅಗತ್ಯವಾದ ತರಬೇತಿ ಮತ್ತು ಮಾರ್ಗದರ್ಶನ ನೀಡಲು ಸಂಯುಕ್ತ ಸಹಕಾರಿಯು ಸಾಲ ವಸೂಲಿಗೆ ಕ್ರಮವಿಡಲಾಗುವುದು.

**ಮರ್ಚೆಂಟ್ಸ್ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿ., ಚಾಮರಾಜನಗರ**

**ಪ್ರಶ್ನೆ 9 : ಸಹಕಾರಿಗಳ ಚುನಾವಣೆ ಮುಂದೂಡಿರುವ ಬಗ್ಗೆ ಕೈಗೊಳ್ಳಬೇಕಾದ ಕ್ರಮಗಳು ಯಾವುವು?**

**ಉತ್ತರ** : ಪ್ರಸ್ತುತ ಕೋವಿಡ್–19 ಕಾರಣದಿಂದಾಗಿ ಸಹಕಾರಿಯ ಚುನಾವಣಾ ಪ್ರಾಧಿಕಾರವು ಚುನಾವಣೆಯನ್ನು ಮುಂದೂಡಿರುತ್ತದೆ. ಚುನಾವಣಾ ಪ್ರಾಧಿಕಾರವು ಪರಿಸ್ಥಿತಿಯನ್ನು ಅವಲೋಕಿಸಿ ಚುನಾವಣೆಗೆ ಅನುವುಮಾಡಿಕೊಡುವ ಕುರಿತು ಸೂಕ್ತವಾಗಿ ನಿರ್ಧರಿಸುತ್ತದೆ. ಪ್ರಸ್ತುತ ಚುನಾವಣಾ ಪ್ರಕ್ರಿಯೆಯು ಯಾವ ಹಂತದಲ್ಲಿ ಸ್ಥಗಿತಗೊಂಡಿದೆಯೋ ಅದೇ ಹಂತದಿಂದ ಮುಂದಿನ ಪ್ರಕ್ರಿಯೆಯು ಮುಂದುವರೆಯುತ್ತದೆ.

**ಪ್ರಶ್ನೆ 10 : ಸದಸ್ಯರು 3 ತಿಂಗಳ ಕಾಲ ಮರುಪಾವತಿಸಲು ತಯಾರಿರದ ಕಾರಣ ಸಹಕಾರಿಯು ಕೈಗೊಳ್ಳಬೇಕಾದ ಕ್ರಮಗಳು ಯಾವುವು?**

**ಉತ್ತರ** : ಸದಸ್ಯರುಗಳು 3 ತಿಂಗಳುಗಳ ಕಾಲ ಸಾಲವನ್ನು ಮರುಪಾವತಿಸಲು ಸಿದ್ಧರಿಲ್ಲದಿದ್ದಲ್ಲಿ ಸದರಿ ಸಾಲಗಾರರಿಗೆ ವೈಯಕ್ತಿಕವಾಗಿ ಹೆಚ್ಚಿನ ಬಡ್ಡಿ ಪಾವತಿಸಬೇಕಾಗುವ ಮತ್ತು ಇದರಿಂದಾಗಿ ಆರ್ಥಿಕ ಹೊರೆಯಾಗುವ ವಿಷಯವನ್ನು ಮನವರಿಕೆ ಮಾಡಿಕೊಡುವುದು ಹಾಗೂ ಸದಸ್ಯರುಗಳೇ ಸಹಕಾರಿಯ ಮಾಲೀಕರಾಗಿವುದರಿಂದ ಪರೋಕ್ಷವಾಗಿ ಸಹಕಾರಿಯ ಆರ್ಥಿಕತೆಗೆ ಪೆಟ್ಟು ಬೀಳುವುದನ್ನು ತಿಳಿಸುವುದು ಸೂಕ್ತವಾಗಿರುತ್ತದೆ.

**ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ**

**ಪ್ರಶ್ನೆ 11 : ರಾಜ್ಯದ ಲೆಕ್ಕಪರಿಶೋಧಕರ ಪಟ್ಟಿಯಲ್ಲಿ ಚಾಮರಾಜನಗರ ಜಿಲ್ಲೆಯ ಲೆಕ್ಕಪರಿಶೋಧಕರ ಹೆಸರುಗಳನ್ನು ಸೇರಿಸಬಹುದೇ?**

**ಉತ್ತರ** : ರಾಜ್ಯದ ಲೆಕ್ಕಪರಿಶೋಧಕರ ಪಟ್ಟಿಯಲ್ಲಿ ಚಾಮರಾಜನಗರ ಜಿಲ್ಲೆಯ ಲೆಕ್ಕಪರಿಶೋಧಕರ ಹೆಸರುಗಳನ್ನು ಸೇರಿಸಲು ಅವಕಾಶವಿದೆ. ಈ ಬಗ್ಗೆ ಲೆಕ್ಕಪರಿಶೋಧಕರು ಸಹಕಾರಿ ಲೆಕ್ಕಪರಿಶೋಧನಾ ಇಲಾಖೆಯನ್ನು ಸಂಪರ್ಕಿಸಿ ಮುಂದಿನ ಕ್ರಮವಿಡಬಹುದಾಗಿದೆ.

**ಪ್ರಶ್ನೆ 12 : ಸಹಕಾರಿಯಿಂದ ಸಾಲ ವಸೂಲಾತಿಗಾಗಿ ನ್ಯಾಯಾಲಯದಲ್ಲಿ ದಾವಾ ಹೂಡಲಾಗಿದೆ ಈ ಕುರಿತು ಯಾವ ರೀತಿಯ ಕ್ರಮವಿಡುವುದು?**

**ಉತ್ತರ** : ಸಾಲ ವಸೂಲಾತಿಗಾಗಿ ಹೂಡಲಾದ ದಾವೆಯ ಕುರಿತಂತೆ ವಿಚಾರಣೆ ಪ್ರಾರಂಭವಾಗುವುದಕ್ಕೂ ಪೂರ್ವದಲ್ಲಿ ನ್ಯಾಯಾಲಯದಲ್ಲಿ ಉಭಯ ಪಕ್ಷಗಾರರಿಗೆ ನೋಟೀಸನ್ನು ನೀಡಲಾಗುತ್ತದೆ. ನಂತರದಲ್ಲಿ ವಿವಿಧ ಕಾನೂನು ಪ್ರಕ್ರಿಯೆಗಳನ್ನು ಅನುಸರಿಸಿ ನ್ಯಾಯಾಲಯವು ತೀರ್ಪನ್ನು ನೀಡುತ್ತದೆ. ಸದರಿ ತೀರ್ಪನ್ನು ತಾವು ಸಾಲಗಾರರ ವಿರುದ್ಧ ಅಮಲ್ಜಾರಿಗೊಳಿಸಬಹುದಾಗಿದೆ.

**ಸ್ನೇಹಜ್ಯೋತಿ ಮಹಿಳಾ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ**

**ಪ್ರಶ್ನೆ 13 : ಪ್ರಸ್ತುತ ಸಂದರ್ಭದಲ್ಲಿ ಸದಸ್ಯರಿಗೆ ನೂತನವಾಗಿ ಸಾಲ ನೀಡಿದಲ್ಲಿ ಮರುಪಾವತಿಗೆ ಸಮಸ್ಯೆ ಉಂಟಾಗುವುದೇ?**

**ಉತ್ತರ** : ಸಾಲಗಾರನ ಮರುಪಾವತಿ ಸಾಮರ್ಥ್ಯವನ್ನು ಹಾಗೂ ಈ ಹಿಂದೆ ಪಡೆದ ಸಾಲಗಳ ಮರುಪಾವತಿ ಗುಣಮಟ್ಟ ಗಮನಿಸಿ ಹಾಗೂ ಸೂಕ್ತ ಭದ್ರತೆ ಪಡೆದುಕೊಂಡು ಸಾಲವನ್ನು ನೀಡಿದ್ದಲ್ಲಿ ಮರುಪಾವತಿ ಸಮಸ್ಯೆ ಉದ್ಭವಿಸುವುದಿಲ್ಲ.

**ಪ್ರಶ್ನೆ 14 : ಸದಸ್ಯರು ಷೇರು ಮೊತ್ತವನ್ನು ವಾಪಾಸ್ಸು ಕೇಳಿದರೆ ನೀಡಬಹುದೇ?**

**ಉತ್ತರ:** ಸಹಕಾರಿಯು ಲಾಭದಲ್ಲಿ ಇದ್ದಲ್ಲಿ ಸದಸ್ಯರು ಷೇರು ಮೊತ್ತವನ್ನು ಕೇಳಿದಾಗ ವಾಪಸ್ಸು ನೀಡತಕ್ಕದ್ದು. ಒಂದು ವೇಳೆ ಸಹಕಾರಿಯು ನಷ್ಟದಲ್ಲಿ ಇದ್ದಲ್ಲಿ ನಷ್ಟದ ಪ್ರಮಾಣಕ್ಕೆ ಅನುಗುಣವಾಗಿ ಷೇರು ಮೊತ್ತವನ್ನು ಮರುಪಾವತಿಸಬೇಕಾಗುತ್ತದೆ.

**ಶಕ್ತಿ ಮಹಿಳಾ ಸೌಹಾರ್ದ ಸಹಕಾರಿ ನಿ., ಮಂಡ್ಯ.**

**ಪ್ರಶ್ನೆ 15 : ಸಹಕಾರಿಯು ಕೇವಲ ಇ–ಸ್ಟಾಂಪಿಂಗ್ ವ್ಯವಹಾರ ನಡೆಸಬಹುದೇ?**

**ಉತ್ತರ:** ಕೇವಲ ಇ–ಸ್ಟಾಂಪಿಂಗ್ ವ್ಯವಹಾರವನ್ನು ನಡೆಸಬಹುದು. ಆದರೆ ಇಂತಹ ಇ–ಸ್ಟಾಂಪಿಂಗ್ ವ್ಯವಹಾರವನ್ನು ಮುಂದುವರೆಸುವುದು ಸಂಯುಕ್ತ ಸಹಕಾರಿಯ ನೀತಿ ನಿರೂಪಣೆಯ ಮೇಲೆ ಆಧಾರಪಟ್ಟಿರುತ್ತದೆ. ಅಲ್ಲದೇ ಸಹಕಾರಿಯನ್ನು ಪ್ರಾರಂಭಿಸುವ ಉದ್ದೇಶವು ಸದಸ್ಯರ ಆರ್ಥಿಕ ಮಳಿಗೆ ಆಗಿರುತ್ತದೆಯೇ ಹೊರತು ಸದಸ್ಯೇತರರೊಂದಿಗೆ ವ್ಯವಹರಿಸಲು ಸಾಧ್ಯವಿರುವ ಇ–ಸ್ಟಾಂಪಿಂಗ್ ವ್ಯವಹಾರವಲ್ಲ.

**ಪ್ರಶ್ನೆ 16 : ಈ ಸಂದರ್ಭದಲ್ಲಿ ಮಹಾಸಭೆಯ ಅನುಮತಿ ಇಲ್ಲದ ಬೇರೆ ವ್ಯವಹಾರ ಪ್ರಾರಂಭಿಸಬಹುದೇ?**

**ಉತ್ತರ** : ಸಹಕಾರಿಯ ಉಪವಿಧಿಗಳಲ್ಲಿ ಸೂಕ್ತ ಪ್ರಾವಧಾನವಿದ್ದಲ್ಲಿ ಯಾವುದೇ ವ್ಯವಹಾರವನ್ನು ಪ್ರಾರಂಭಿಸಬಹುದು. ಆದರೆ ಅಂತಹ ವ್ಯವಹಾರಕ್ಕೆ ಸೂಕ್ತವಾದ ಬಜೆಟ್ ಪ್ರಾವಧಾನ ಕಲ್ಪಿಸಿಕೊಂಡಿರಬೇಕಾಗುತ್ತದೆ.

**ಕೆ.ಆರ್.ಪೇಟೆ ತಾಲ್ಲೂಕು ಶ್ರೀ ಶಿವಜ್ಯೋತಿ ಗಾಣಿಗರ ಸೌಹಾರ್ದ ಸಹಕಾರಿ ನಿ., ಕೆ.ಆರ್ ಪೇಟೆ.**

**ಪ್ರಶ್ನೆ 17 : ನೂತನವಾಗಿ ಪ್ರಾರಂಭವಾಗಿರುವುದರಿಂದ ಸದಸ್ಯರು ಸಾಲವನ್ನು ವಿಳಂಬವಾಗಿ ಮರುಪಾವತಿ ಮಾಡಿದ್ದಲ್ಲಿ ಯಾವ ರೀತಿ ಕ್ರಮಕೈಗೊಳ್ಳಬೇಕು?**

**ಉತ್ತರ** : ಸಹಕಾರಿಯು ನೂತನವಾಗಿ ಪ್ರಾರಂಭವಾಗಿರುವುದರಿಂದ ಸದಸ್ಯರಿಗೆ ಸಾಲ ನೀಡುವಾಗ ಸಾಲದ ಗುಣಮಟ್ಟ ಅಗತ್ಯತೆ ಮರುಪಾವತಿಯ ಸಾಮರ್ಥ್ಯಗಳನ್ನು ಪರಿಶೀಲಿಸಿದ ನಂತರ ಹಣಕಾಸಿನ ಲಭ್ಯತೆ ನಿಮ್ಮ ಸಹಕಾರಿಯ ಆರ್ಥಿಕ ಶಿಸ್ತು ಹಾಗು ವ್ಯವಸ್ಥೆಗಳಿಗೆ ಅನುಸರಿಸಿ ಸಾಲ ನೀಡುವ ಕ್ರಮವಿಡಬೇಕು.

**ಮಂಡ್ಯ ತಾಲ್ಲೂಕು ಶಾಮೀಯಾನ ಮಾಲೀಕರ ಸೌಹಾರ್ದ ಸಹಕಾರಿ ನಿ., ಮಂಡ್ಯ.**

**ಪ್ರಶ್ನೆ 18 : ಸಹಕಾರಿಗಳ ನೋಂದಣಿ ಸಂದರ್ಭದಲ್ಲಿ ವಿಳಂಬ ಆಗುತ್ತಿರುವ ಕಾರಣ ಸಂಯುಕ್ತ ಸಹಕಾರಿಯಿಂದ ಕಾನೂನಾತ್ಮಕ ಸಹಾಯ ದೊರೆಯಬಹುದೇ?**

**ಉತ್ತರ** : ನೋಂದಣಿ ಪ್ರಸ್ತಾವಣೆಯನ್ನು ಯಾವ ನಿಬಂಧಕರಿಗೆ ಸಲ್ಲಿಸಲಾಗಿದೆ ಎಂಬ ವಿವರವನ್ನು ಸಂಯುಕ್ತ ಸಹಕಾರಿಗೆ ನೀಡಿದ್ದಲ್ಲಿ, ಸಂಬಂಧಪಟ್ಟ ನಿಬಂಧಕರ ಗಮನಕ್ಕೆ ತಂದು ಸಮಸ್ಯೆಯ ಪರಿಹಾರಕ್ಕೆ ಪ್ರಯತ್ನಿಸಲಾಗುವುದು.

**ಹಾಸನ ಹಾಗೂ ಚಿಕ್ಕಮಂಗಳೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಸಾಮಾನ್ಯ ಪ್ರಶ್ನೆಗಳು**

**ಪ್ರಶ್ನೆ 19 : ಸಹಕಾರಿಯ ಲೆಕ್ಕಪರಿಶೋಧನೆ ಮಾಡಿಸಲು 1 ನವೆಂಬರ್ ರವರೆಗೆ ಮುಂದೂಡಿರುವುದರಿಂದ ಸಾಮಾನ್ಯ ಸಭೆಯನ್ನು ಮಾಡಲು ಅವಧಿ ವಿಸ್ತರಿಸಲಾಗಿದೆಯ?**

**ಉತ್ತರ** : ಪ್ರಸ್ತುತ ಸಾಮಾನ್ಯ ಸಭೆಯ ದಿನಾಂಕವನ್ನು ಸರ್ಕಾರವು ವಿಸ್ತರಿಸಿರುವುದಿಲ್ಲ. ಆದರೆ ಲೆಕ್ಕ ಪರಿಶೋಧನಾ ವರದಿಯನ್ನು ಸಲ್ಲಿಸಲು ನವಂಬರ್ 1 ರವರೆಗೆ ದಿನಾಂಕ ವಿಸ್ತರಣೆ ಆಗಿರುವುದರಿಂದ ಸಾಮಾನ್ಯ ಸಭೆಯನ್ನು ನಡೆಸಲು ದಿನಾಂಕವನ್ನು ವಿಸ್ತರಿಸುವಂತೆ ಸಂಯುಕ್ತ ಸಹಕಾ–ರಿಯಿಂದ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ.

**ಪ್ರಶ್ನೆ 20 : ನಬಾರ್ಡನಿಂದ ಸಾಲ ಸೌಲಭ್ಯ ಲಭ್ಯವಿದೆಯ?**

**ಉತ್ತರ** : ನಬಾರ್ಡನಿಂದ ನೇರವಾಗಿ ಸೌಹಾರ್ದ ಸಹಕಾರಿಗಳು ಸಾಲ ಪಡೆಯಲು ಪ್ರಸ್ತುತ ಅವಕಾಶವಿರುವುದಿಲ್ಲ. ಆದರೆ ಇದರ ಹೊರತಾಗಿ ನಬಾರ್ಡ ಫೈನಾನ್ಸ್ ಮತ್ತು ಎನ್.ಸಿ.ಡಿ.ಸಿ ಗಳಿಂದ ಸಾಲ ಪಡೆಯಲು ಅವಕಾಶವಿರುತ್ತದೆ. ಈ ಕುರಿತು ಹೆಚ್ಚಿನ ವಿವರಗಳಿಗಾಗಿ ಸಂಯುಕ್ತ ಸಹಕಾರಿಯನ್ನು ಸಂಪರ್ಕಿಸಿ.

**ಪ್ರಶ್ನೆ 21 : ಸಹಕಾರಿಯ ಆಡಳಿತ ಮಂಡಳಿಯ ಸಭೆಯನ್ನು ನಡೆಸುವ ಬಗ್ಗೆ?**

**ಉತ್ತರ** : ಸಹಕಾರಿಯ ಆಡಳಿತ ಮಂಡಳಿಯ ಸಭೆಯನ್ನು ಸಹಕಾರಿಯ ಉಪವಿಧಿಗಳ ಪ್ರಕಾರ ಕನಿಷ್ಟ 2 ತಿಂಗಳಿಗೊಮ್ಮೆ ನಡೆಸಬೇಕಾಗುತ್ತದೆ.

**ಪ್ರಶ್ನೆ 22 : ಸೌಹಾರ್ದ ಸಂಯುಕ್ತ ಸಹಕಾರಿ ಸದಸ್ಯ ಸಹಕಾರಿಗಳಿಗೆ ಆರ್ಥಿಕ ಸಹಾಯ ಮಾಡಲು ಸಾಧ್ಯವಿದೆಯೆ?**

**ಉತ್ತರ** : ಸಂಯುಕ್ತ ಸಹಕಾರಿಯು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ ರಡಿ ರಚಿತವಾಗಿರುವ ಶಾಸನಬದ್ಧ ಸಂಸ್ಥೆಯಾಗಿರುತ್ತದೆ. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 ರ ಕಲಂ 53(7) ರಲ್ಲಿ ಸಂಯುಕ್ತ ಸಹಕಾರಿಯು ನಿರ್ವಹಿಸಬೇಕಾದ ಪ್ರಕಾರ್ಯಗಳ ಕುರಿತು ತಿಳಿಸಲಾಗಿರುತ್ತದೆ. ಈ ಪ್ರಾವಧಾನದ ಹೊರತಾಗಿ ಇನ್ನಾವುದೇ ಪ್ರಕಾರ್ಯಗಳನ್ನು ನಿರ್ವಹಿಸಲು ಅವಕಾಶವಿರುವುದಿಲ್ಲ. ಈ ಪ್ರಾವಧಾನಗಳ ಅಡಿಯಲ್ಲಿ ಸಂಯುಕ್ತ ಸಹಕಾರಿಯು ಸದಸ್ಯ ಸಹಕಾರಿಗಳಿಗೆ ಆರ್ಥಿಕ ಸಹಾಯ ಮಾಡಲು ಅವಕಾಶವಿರುವುದಿಲ್ಲ.

**ಪ್ರಶ್ನೆ 23 : ಸರ್ಕಾರ ಸೌಹಾರ್ದ ಸಹಕಾರಿಗಳಿಗೆ ವಿಶೇಷ ಪ್ಯಾಕೇಜ್ ನೀಡಬಹುದೆ?**

**ಉತ್ತರ** : ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 ರ ಕಲಂ 17 ರಡಿಯಲ್ಲಿ ಸೌಹಾರ್ದ ಸಹಕಾರಿಗಳು ಸರಕಾರದಿಂದ ಅಥವಾ ಸರಕಾರದ ಖಾತ್ರಿಯಿಂದ ಯಾವುದೇ ಸಾಲ, ಸಹಾಯ ಧನ, ಅನುದಾನ ಅಥವಾ ಯಾವುದೇ ರೂಪದಲ್ಲಿ ಆರ್ಥಿಕ ನೆರವನ್ನು ಪಡೆಯಲು ಸಾಧ್ಯವಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಸೌಹಾರ್ದ ಸಹಕಾರಿಗಳು ತಮ್ಮ ಸ್ವಂತ ಆರ್ಥಿಕ ಶಕ್ತಿಯ ಆಧಾರದ ಮೇಲೆ ಸಂಸ್ಥೆಗಳನ್ನು ಬೆಳೆಸಬೇಕೆ ವಿನಃ ಸರ್ಕಾರದಿಂದ ಪ್ಯಾಕೇಜ ಪಡೆಯುವುದು ಸೌಹಾರ್ದ ಸಹಕಾರಿಗಳ ಸ್ವಾಯತ್ತತೆ, ಸ್ವಯಂ ಆಡಳಿತ ಮತ್ತು ಸ್ವಯಂ ನಿಯಂತ್ರಣದ ಧ್ಯೇಯ ವ್ಯಾಖ್ಯೆಗೆ ವಿರುದ್ಧವಾಗಿರುತ್ತದೆ.

**ಪ್ರಶ್ನೆ 24 : ಲಾಕ್‌ಡೌನ್ ತಿಂಗಳ ಸಾಲದ ವಸೂಲಾತಿಯ ಬಗೆ ಹಾಗೂ ಸಾಲದ ಮೇಲಿನ ಬಡ್ಡಿಯನ್ನು ಮನ್ನ ಮಾಡಲು ಸಾಧ್ಯವಿದೆಯೆ?**

**ಉತ್ತರ** : ಸೌಹಾರ್ದ ಸಹಕಾರಿಗಳಲ್ಲಿ ಸಾಲ ಬಡ್ಡಿ ಮನ್ನಾಗೆ ಅವಕಾಶವಿರುವುದಿಲ್ಲ. ಲಾಕಡೌನ್ ಸಮಯದಲ್ಲಿ ಸದಸ್ಯರ ತೊಂದರೆಯನ್ನು ಗಮನಿಸಿ ಬಡ್ಡಿ ವಸೂಲಾತಿಯನ್ನು ಕೆಲವು ಸಮಯದವರೆಗೆ ಮುಂದೂಡಬಹುದು.

**ಪ್ರಶ್ನೆ 25 : ಆದಾಯ ತೆರಿಗೆ ರಿಟರ್ನ ಮಾಡಲು ಅವಧಿ ವಿಸ್ತರಿಸಲಾಗಿದೆಯೆ?**

**ಉತ್ತರ** : ಆದಾಯ ತೆರಿಗೆ ರಿಟರ್ನ ಸಲ್ಲಿಸಲು ನವಂಬರ್ 30 ರ ವರೆಗೆ ಕಾಲಾವಕಾಶ ವಿಸ್ತರಿಸಲಾಗಿದೆ.

**ಪ್ರಶ್ನೆ 26 : ಸದಸ್ಯ ಸಹಕಾರಿಗಳ ಸಿಬ್ಬಂದಿ ವೇತನ ನೀಡಲು ಮೀಸಲು ನಿಧಿಯ ಹಣವನ್ನು ನೀಡಲು ಅವಕಾಶವಿದೆಯೆ?**

**ಉತ್ತರ** : ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004 ರ ನಿಯಮ, 7(1)(ಎ) ರನ್ವಯ ಮೀಸಲು ನಿಧಿಯನ್ನು ಸಹಕಾರಿಯ ಯಾವುದೇ ವ್ಯವಹಾರಕ್ಕೆ ಬಳಸತಕ್ಕದ್ದಲ್ಲ. ಹಾಗೂ ಇದರಲ್ಲಿ ಯಾವುದೇ ಪಾಲು ಸದಸ್ಯರಿಗೆ ಸಲ್ಲತಕ್ಕದ್ದಲ್ಲ ಎಂದು ಹೇಳಲಾಗುತ್ತದೆ. ಮುಂದುವರೆದು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ, 7(1)(ಬಿ) ರಲ್ಲಿ ಮೀಸಲು ನಿಧಿಯನ್ನು ಯಾವ ಉದ್ದೇಶಕ್ಕಾಗಿ ಬಳಸಬಹುದು ಎಂದು ಸ್ಪಷ್ಟವಾಗಿ ಹೇಳಲಾಗಿರುತ್ತದೆ. ಸದರಿ ಉದ್ದೇಶಗಳನ್ನು ಹೊರತುಪಡಿಸಿ ಇನ್ನಾವುದೇ ಉದ್ದೇಶಗಳಿಗೆ ಮೀಸಲು ನಿಧಿಯನ್ನು ಬಳಸುವಂತಿಲ್ಲ. ಈ ಹಿನ್ನೆಲೆಯಲ್ಲಿ ಸದಸ್ಯ ಸಹಕಾರಿಗಳ ಸಿಬ್ಬಂದಿಗಳಿಗೆ ವೇತನ ನೀಡಲು ಮೀಸಲು ನಿಧಿಯನ್ನು ಉಪಯೋಗಿಸುವಂತಿಲ್ಲ.

**ಪ್ರಶ್ನೆ 27 : ಆರ್ಥಿಕ ನಷ್ಟ ಅನುಭವಿಸುತ್ತಿರುವ ಸೌಹಾರ್ದ ಸಹಕಾರಿಗಳಿಗೆ ಸರ್ಕಾರದ ಸಹಾಯಧನ ದೊರೆಯುವ ಸಾಧ್ಯತೆ ಇದೆಯೆ?**

**ಉತ್ತರ** : ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 ರ ಕಲಂ 17ರನ್ವಯ ಸೌಹಾರ್ದ ಸಹಕಾರಿಗಳು ಸರ್ಕಾರದಿಂದ ಅಥವಾ ಸರ್ಕಾರದ ಖಾತರಿಯಿಂದ ಯಾವುದೇ ಸಾಲ, ಸಹಾಯಧನ, ಅನುದಾನ ಅಥವಾ ಯಾವುದೇ ರೂಪದಲ್ಲಿ ಆರ್ಥಿಕ ನೆರವನ್ನು ಪಡೆಯುವಂತಿಲ್ಲ. ಆದ್ದರಿಂದ ಸೌಹಾರ್ದ ಸಹಕಾರಿಗಳಿಗೆ ಸರ್ಕಾರದಿಂದ ಯಾವುದೇ ಸಹಾಯಧನ ದೊರೆಯುವ ಸಾಧ್ಯತೆಗಳು ಇರುವುದಿಲ್ಲ.

**ಹಲಾಪೂರ ಪತ್ತಿನ ಸೌಹಾರ್ದ ಸಹಕಾರಿ ನಿ.,, ಮಸ್ಕಿ**

**ಪ್ರಶ್ನೆ 28 : ಕಡಿಮೆ ಖರ್ಚು ಮಾಡುವ ವಿಧಾನಗಳನ್ನು ತಿಳಿಸಿ**

**ಉತ್ತರ** : ಸಹಕಾರಿಯು ಆರ್ಥಿಕ ಸೋರಿಕೆಯನ್ನು ಗುರುತಿಸಿ ಮತ್ತು ಹೆಚ್ಚು ವೆಚ್ಚವಾಗುತ್ತಿರುವ ಬಾತ್ತುಗಳನ್ನು ಗುರುತಿಸಿ ಆರ್ಥಿಕ ಸೋರಿಕೆಯನ್ನು ತಡೆಗಟ್ಟಲು ಕಾರ್ಯ ಯೋಜನೆಯನ್ನು ರೂಪಿಸುವುದು ಮತ್ತು ಕಡಿಮೆ ವೆಚ್ಚ

ಮಾಡಬಹುದಾದ ಬಾತ್ತುಗಳ ಬಗ್ಗೆ ಸೂಕ್ತವಾಗಿ ನಿಯಮಗಳನ್ನು ರೂಪಿಸಿಕೊಂಡಲ್ಲಿ ಸಹಕಾರಿಯ ವೆಚ್ಚವು ಕಡಿಮೆಯಾಗುತ್ತದೆ.

**ಪ್ರಶ್ನೆ 29 : 20% ಕಡಿಮೆ ದ್ರವ್ಯಾಸ್ಥಿ ಹೊಂದಿದ ಸಹಕಾರಿಗಳಿಗೆ ಸಂಯುಕ್ತ ಸಹಕಾರಿಯು ಆರ್ಥಿಕ ಸಹಾಯ ಮಾಡುವುದು.**

**ಉತ್ತರ** : ಸಂಯುಕ್ತ ಸಹಕಾರಿಯು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ ರಡಿ ರಚಿತವಾಗಿರುವ ಶಾಸನಬದ್ಧ ಸಂಸ್ಥೆಯಾಗಿರುತ್ತದೆ. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 ರ ಕಲಂ 53(7) ರಲ್ಲಿ ಸಂಯುಕ್ತ ಸಹಕಾರಿಯು ನಿರ್ವಹಿಸಬೇಕಾದ ಪ್ರಕಾರ್ಯಗಳ ಕುರಿತು ತಿಳಿಸಲಾಗಿರುತ್ತದೆ. ಈ ಪ್ರಾವಧಾನದ ಹೊರತಾಗಿ ಇನ್ನಾವುದೇ ಪ್ರಕಾರ್ಯಗಳನ್ನು ನಿರ್ವಹಿಸಲು ಅವಕಾಶವಿರುವುದಿಲ್ಲ. ಈ ಪ್ರಾವಧಾನಗಳ ಅಡಿಯಲ್ಲಿ ಸಂಯುಕ್ತ ಸಹಕಾರಿಯು ಸದಸ್ಯ ಸಹಕಾರಿಗಳಿಗೆ ಆರ್ಥಿಕ ಸಹಾಯ ಮಾಡಲು ಅವಕಾಶವಿರುವುದಿಲ್ಲ.

**ಜನನಿ ಶ್ರೀ ಪತ್ತಿನ ಸೌಹಾರ್ದ ಸಹಕಾರಿ ನಿ., ಮಸ್ಕಿ**

**ಪ್ರಶ್ನೆ 30 : ಸಂಯುಕ್ತ ಸಹಕಾರಿಯು ಬೇಡುವ ಮಾಹಿತಿಯನ್ನು ಇ–ಮೇಲ್ ಮೂಲಕ ಕಳುಹಿಸಲು ಅನುವು ಮಾಡಿಕೊಡಬೇಕೆಂದು ತಿಳಿಸಿದರು.**

ಉತ್ತರ : ಸಂಯುಕ್ತ ಸಹಕಾರಿಯ ತಾಂತ್ರಿಕತೆಯನ್ನು ಅಳವಡಿಸಿಕೊಂಡು ಕಾರ್ಯನಿರ್ವಹಿಸಲು ಹೆಚ್ಚು ಆಸಕ್ತಿಯನ್ನು ಹೊಂದಿದ್ದು, ಈಗಾಗಲೇ ಸದಸ್ಯ ಸಹಕಾರಿಗಳಿಗೆ ವರ್ಷಾಂತ್ಯದ ಆರ್ಥಿಕ ಮಾಹಿತಿಯನ್ನು ಮಿಂಚಂಚೆ ಮೂಲಕ ಸಲ್ಲಿಸಲು ತಿಳಿಲಾಗಿದೆ. ಮುಂದಿನ ದಿನಗಳಲ್ಲಿಯೂ ಸಹ ಸದಸ್ಯ ಸಹಕಾರಿಗಳು ಸಂಯುಕ್ತ ಸಹಕಾರಿಗೆ ಸಲ್ಲಿಸಬೇಕಾದ ಮಾಹಿತಿಗಳನ್ನು ಮಿಂಚಂಚೆ (ಇ–ಮೇಲ್) ಮುಖಾಂತರ ಸಲ್ಲಿಸಲು ಅವಕಾಶವಿರುತ್ತದೆ.

**ಮುದಗಲ್ ಪತ್ತಿನ ಸೌಹಾರ್ದ ಸಹಕಾರಿ ನಿ., ಮುದಗಲ್**

**ಪ್ರಶ್ನೆ 31 : ವರ್ಷ್ಯಾಂತದ ಮಾಹಿತಿಯನ್ನು ಈಗಾಗಲೇ ಕಳುಹಿಸಿದ್ದು ಸ್ವೀಕೃತಿಯನ್ನು ಸಂಯುಕ್ತ ಸಹಕಾರಿ ನೀಡಬೇಕೆಂದು ತಿಳಿಸಿದರು**

**ಉತ್ತರ** : ವರ್ಷಾಂತ್ಯದ ಮಾಹಿತಿಯ ಸ್ವೀಕೃತಿಯನ್ನು ಕಳುಹಿಸಲಾಗುವುದು.

**ಸಿರಿ ಸಂಜೀವಿನಿ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿರವಾರ, ಗುಲ್ಬರ್ಗಾ ಮಹಿಳಾ ಸೌಹಾರ್ದ ಸಹಕಾರಿ ನಿ., ಕಲಬುರಗಿ.**

**ಪ್ರಶ್ನೆ 32 : ಸಾಲ ವಸೂಲಾತಿಯ ಬಗ್ಗೆ ಸೂಕ್ತ ಮಾರ್ಗದರ್ಶನವನ್ನು ನೀಡಿ.**

**ಉತ್ತರ** : ಸಾಲ ವಸೂಲಾತಿಗಾಗಿ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004ರ ನಿಯಮ 11 ರಿಂದ 28 ರ ವರೆಗೆ ವಿವರವಾಗಿ ಹೇಳಲಾಗಿದ್ದು, ಈ ಕುರಿತು ಸಂಯುಕ್ತ ಸಹಕಾರಿಯು ಮಾಹಿತಿ ಕೈಪಿಡಿಯನ್ನು ಸಿದ್ಧಪಡಿಸಿದ್ದು, ತಾವುಗಳು ಅದನ್ನು ಪಡೆದುಕೊಳ್ಳಬಹುದಾಗಿದೆ.

**ಭೂಮಿ ಪತ್ತಿನ ಸೌಹಾರ್ದ ಸಹಕಾರಿ ನಿ., ರಾಯಚೂರು.**

**ಪ್ರಶ್ನೆ 33 : ಠೇವಣಿ ಮೇಲೆ ನೀಡಬಹುದಾದ ಗರಿಷ್ಠ ಬಡ್ಡಿದರಗಳ ಬಗ್ಗೆ ಮಾಹಿತಿ ನೀಡಿ.**

**ಉತ್ತರ** : ಸೌಹಾರ್ದ ಸಹಕಾರಿಗಳು ಠೇವಣಿ ನಿಯಮಗಳನ್ನು ರಚಿಸಿಕೊಂಡು, ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಅನುಮೋದನೆ ಪಡೆದು ಅದರಂತೆ ಠೇವಣಿಗಳ ಮೇಲೆ ಬಡ್ಡಿಯನ್ನು ನಿಗದಿಪಡಿಸಬಹುದಾಗಿದೆ.

**ವಿವೇಕ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿರವಾರ**

**ಪ್ರಶ್ನೆ 34 : 20% ದ್ರವ್ಯಾಸ್ತಿ ನಿರ್ವಹಣೆ ಮಾಡಿದಾಗ್ಯೂ ಸಹ ಹೆಚ್ಚಿನ ಠೇವಣಿ ಮರುಪಾವತಿಸುವ ಪ್ರಸಂಗ ಬಂದಲ್ಲಿ ಹೇಗೆ ನಿರ್ವಹಿಸುವುದು.**

ಉತ್ತರ : ನಿರ್ವಹಿಸಿರುವ ದ್ರವ್ಯಾಸ್ಥಿಗಿಂತಲೂ ಹೆಚ್ಚಿಗೆ ಠೇವಣಿ ಮರುಪಾವತಿ ಪ್ರಸಂಗ ಉದ್ಭವಿಸಿದ್ದಲ್ಲಿ, ಷೇರು ಸಂಗ್ರಹಣೆಗೆ ಒತ್ತು ನೀಡಿ ಷೇರು ಹಣವನ್ನು ಮತ್ತು ಕಡಿಮೆ ಅವಧಿಯ ಠೇವಣಿಗಳನ್ನು ಮರುಪಾವತಿಗೆ ಬಳಸಬಹುದಾಗಿರುತ್ತದೆ.

**ಕಮಲಾಪುರ ಸೌಹಾರ್ದ ಪತ್ತಿನ ಸಹಕಾರಿ ನಿ., ಕಲಬುರಗಿ**

**ಪ್ರಶ್ನೆ 35 : ಸಾಲ ವಸೂಲಾತಿ ಮಾಡಲು ತೊಂದರೆಯಾಗುತ್ತಿದ್ದು ಸದಸ್ಯರು ಬಡ್ಡಿ ಕೆಳಬೇಡಿ ಅನ್ನುತ್ತಿದ್ದಾರೆ ಇದರ ಬಗ್ಗೆ ಮಾಹಿತಿ ನೀಡಿ.**

**ಉತ್ತರ** : ಸದಸ್ಯರ ಸಾಲ ವಸೂಲಾತಿ ಈ ಲಾಕ್ ಡೌನ್ ಸಮಯದಲ್ಲಿ ಕಷ್ಟವಾಗುತ್ತದೆ. ಆಡಳಿತ ಮಂಡಳಿಯವರು ಸೂಕ್ತ ನಿರ್ದಾರ ತೆಗೆದುಕೊಂಡು ಕೆಲ ಸಮಯದ ವರೆಗೆ ಬಡ್ಡಿಯನ್ನು ಮುಂದೂಡಬಹುದು.

## ಡಿಸಿಬಿಎಂ ಕೋರ್ಸ್‌ನ ಬಹು ಆಯ್ಕೆಯ ಪ್ರಶ್ನೆಗಳು ಹಾಗೂ ಉತ್ತರಗಳ ಪುಸ್ತಕ ಲಭ್ಯ

ಸಂಯುಕ್ತ ಸಹಕಾರಿ ವತಿಯಿಂದ ಆಯೋಜಿಸಿರುವ 2ನೇ ತಂಡದ ಡಿಸಿಬಿಎಂ ಕೋರ್ಸ್ 6 ವಿಷಯಗಳ "ಬಹು ಆಯ್ಕೆಯ ಪ್ರಶ್ನೆಗಳು ಹಾಗೂ ಉತ್ತರಗಳು" (Multiple Choice Questions and Answers) ಪುಸ್ತಕ ಲಭ್ಯವಿರುತ್ತದೆ. ಪುಸ್ತಕದ ಮೊತ್ತ ರೂ. 300/–, ಕೋರಿಯರ್ ಮೊತ್ತ ರೂ. 50/–, ಒಟ್ಟು ಮೊತ್ತ ರೂ. 350/–ಗಳಾಗುತ್ತದೆ ಹಾಗೂ ಪುಸ್ತಕ ಖರೀದಿಸುವ ಅಭ್ಯರ್ಥಿಗಳು ಈ ಕೆಳಗಿನ ಖಾತೆಗೆ ಹಣ ವರ್ಗಾಯಿಸಬಹುದು.

BANK AND BRANCH NAME : IDBI BANK, MALLESWARAM, BANGALURU
A/C HOLDER NAME : KARNATAKA STATE SOUHARDA FEDERAL COOPERATIVE LIMITED BENGALURU
A/C NO : 0243102000014173
IFSC CODE : IBKL0000243

ಸೂಚನೆ : ಹಣ ವರ್ಗಾವಣೆ ಮಾಡಿದ ಅಭ್ಯರ್ಥಿಗಳು ಈ ಕೆಳಗಿನ ಮಾಹಿತಿಯನ್ನು umesha@souharda.coop ಇಮೇಲ್ ಐಡಿಗೆ ಅಥವಾ 9448032552 (ಉಮೇಶ್) ಇವರಿಗೆ whats app ಮೂಲಕ ಕಳುಹಿಸುವುದು.

1. ಅಭ್ಯರ್ಥಿಯ ಹೆಸರು :
2. ಸೌಹಾರ್ದ ಸಹಕಾರಿಯ ಹೆಸರು, ವಿಳಾಸ :
3. ಹಣ ವರ್ಗಾವಣೆ ಮಾಡಿದ ದಿನಾಂಕ, ಮೊತ್ತ, ರೆಫರನ್ಸ್ ನಂಬರ್ :

ಗಮನಿಸಿ : ಈ ಮೇಲ್ಕಂಡ ಪುಸ್ತಕವು ಬೇಕಾದಲ್ಲಿ ಅಭ್ಯರ್ಥಿಗಳು ಶ್ರೀ ಉಮೇಶ್ 8884460282 ಹಾಗೂ 080–23378377–80 ಇವರನ್ನು ಸಂಪರ್ಕಿಸಬಹುದು.

# ಬೆಳಗಾವಿ ಹಾಗೂ ಮುಧೋಳ ಕೇಂದ್ರದ ಡಿಸಿಬಿಎಂ 3ನೇ ಸಂಪರ್ಕ ವರ್ಗದ ವೇಳಾಪಟ್ಟಿ ದಿನಾಂಕ 13.06.2020 ರಿಂದ 15.06.2020 ರವರೆಗೆ

| ವಿಷಯಗಳ ವಿವರ | ದಿನಾಂಕ | ಸಮಯ | ಬೋಧಿಸಬೇಕಾದ ವಿಷಯ | ಸಂಪನ್ಮೂಲ ವ್ಯಕ್ತಿಗಳ ಹೆಸರು |
|---|---|---|---|---|
| ವಿಷಯ 01 : ಸಹಕಾರ ಪರಿಸರ ಹಾಗೂ ಆಡಳಿತ ನಿರ್ವಹಣೆ | 13.06.2020 | ಬೆಳಿಗ್ಗೆ 10.00 ರಿಂದ 11.30 ರವರೆಗೆ | "ಅಧ್ಯಾಯ – 5 ಸಾಮಾನ್ಯ ಆಡಳಿತ ಅಧ್ಯಾಯ – 6 ಸಹಕಾರ ಆಡಳಿತ | ಶ್ರೀ ಭಾಸ್ಕರ ಹೆಗಡೆ ಕಾಗೇರಿ |
| ವಿಷಯ 02 : ಸಹಕಾರಿ ಪತ್ತು ನಿರ್ವಹಣೆ | 13.06.2020 | ಮಧ್ಯಾಹ್ನ 12.00 ರಿಂದ 01.30ರ ವರೆಗೆ | ಅಧ್ಯಾಯ – 5 ದೀರ್ಘಾವಧಿ ಸಾಲ ವ್ಯವಸ್ಥೆ ಮತ್ತು ನಬಾರ್ಡ್‌ನ ಪ್ರಾಮುಖ್ಯತೆ– ಹಿನ್ನೆಲೆ, ರಚನೆ, ಪ್ರಾಥಮಿಕ ಸಹಕಾರ ಕೃಷಿ ಅಭಿವೃದ್ಧಿ ಬ್ಯಾಂಕ್‌ಗಳು, ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್, ಅಧ್ಯಾಯ 06: ಪಟ್ಟಣ ಸಹಕಾರ ಬ್ಯಾಂಕ್‌ಗಳು ಅಧ್ಯಾಯ 07: ಪತ್ತಿನ (ಕೃಷಿಯೇತರ) ಸಹಕಾರ ಸಂಘಗಳು | ಶ್ರೀ ಶಶಿಧರ ಎಲೆ |
| ವಿಷಯ 03 : ಬ್ಯಾಂಕಿಂಗ್ ಮೂಲ ಮಾಹಿತಿ | 14.06.2020 | ಬೆಳಿಗ್ಗೆ 10.00 ರಿಂದ 11.30 ರವರೆಗೆ | ಅಧ್ಯಾಯ 05 : ಕ್ರೆಡಿಟ್ ನಿರ್ವಹಣೆ– ಬ್ಯಾಂಕುಗಳು ಸಾಲ ನೀಡಿಕೆಯಲ್ಲಿ ಅನುಸರಿಸುವ ತತ್ವಗಳು, ಸಾಲದ ವಿಧಗಳು, ನಾನ್ ಫರ್‌ಫಾಮಿಂಗ್ ಅಸೆಟ್, ಅಧ್ಯಾಯ 06: ಹೂಡಿಕೆ ನಿರ್ವಹಣೆ – ಅರ್ಥವಿವರಣೆ, ವಹಿವಾಟು ನಿರ್ವಹಣೆ ಸೂತ್ರ, ಹೂಡಿಕೆಗಳ ವರ್ಗೀಕರಣ ಮತ್ತು ಮೌಲೀಕರಣ, ಆಸ್ತಿ ಜವಾಬ್ದಾರಿ ನಿರ್ವಹಣೆ ಅಧ್ಯಾಯ 07: ಆಪತ್ತು ನಿರ್ವಹಣೆ – ಕ್ರೆಡಿಟ್ ರಿಸ್ಕ್ ನಿರ್ವಹಣೆ, ಕಾರ್ಯ ನಿರ್ವಹಣ ದಾಮಾಶೆ, ಅಧ್ಯಾಯ 08: ವ್ಯವಸ್ಥೆ ಮತ್ತು ನಿಯಂತ್ರಣಗಳು, ಅಧ್ಯಾಯ 09 : ಮಹತ್ವದ ಹಣಕಾಸು ಸಂಸ್ಥೆಗಳು | ಶ್ರೀ ಎಸ್.ಜಿ.ಕುಲಕರ್ಣಿ |
| ವಿಷಯ 04 : ಸಹಕಾರ ಕಾಯ್ದೆಗಳು, ಬ್ಯಾಂಕಿಂಗ್ ಕಾಯ್ದೆಗಳು ಇತರೆ ಅನ್ವಯಿಸುವ ಕಾಯ್ದೆಗಳು | 14.06.2020 | ಮಧ್ಯಾಹ್ನ 12.00 ರಿಂದ 01.30ರ ವರೆಗೆ | "ಅಧ್ಯಾಯ 05 : ಸಂಬಂಧಿತ ಕಾನೂನು (ಮುಖ್ಯಾಂಶಗಳು) ಭಾರತದ ಕರಾರು ಅಧಿನಿಯಮ– ನಷ್ಟ ಭರ್ತಿ (ಕ್ಷತಿ ಪೂರ್ತಿ) ಮತ್ತು ಖಾತರಿ (ಇಂಡೆಮ್ನಿಟಿ ಅಂಡ್ ಗ್ಯಾರಂಟಿ), ಸರಕು ಮಾರಾಟ ಅಧಿನಿಯಮ, ಬಳಕೆದಾರ ಹಿತರಕ್ಷಣಾ ಅಧಿನಿಯಮ, 1986, ವಿಮೆ, ಸೈಬರ್ ಕಾನೂನು ಮತ್ತು ಮಾಹಿತಿ ತಂತ್ರಜ್ಞಾನ ಅಧಿನಿಯಮ, ಬ್ಯಾಂಕರರ ಪುಸ್ತಕ (ಸಾಕ್ಷ್ಯ) ಅಧಿನಿಯಮ, 1891, ಭಾರತದ ಸ್ಟಾಂಪ್ ಅಧಿನಿಯಮ, ದಿವಾಳಿತನ ಮತ್ತು ನಿರ್ಗತಿಕತೆಯ ಸಂಹಿತೆ" | ಶ್ರೀ ಜಿ.ಎಸ್. ರವೀಂದ್ರ |
| ವಿಷಯ 05 : ಲೆಕ್ಕ ಪತ್ರಗಳು ಹಾಗೂ ಲೆಕ್ಕ ಪರಿಶೋಧನೆ | 15.06.2020 | ಮಧ್ಯಾಹ್ನ 03.00 ರಿಂದ 04.30ರ ವರೆಗೆ | "ಅಧ್ಯಾಯ 6 : ಲೆಕ್ಕಪರಿಶೋಧನೆ – ಲೆಕ್ಕಪರಿಶೋಧನೆಯ ಅರ್ಥ, ವ್ಯಾಖ್ಯಾಯನ, ಲೆಕ್ಕಪರಿಶೋಧನೆಯ ವಿಧಗಳು, ಭಾರತೀಯ ರಿಸರ್ವ್ ಬ್ಯಾಂಕ್(RBI) ನಿಂದ ಮಾಡಲ್ಪಡುವ ತಪಾಸಣೆ, | ಶ್ರೀ ಸುನೀಲ್ ಪತ್ತಾರ್ |
| ವಿಷಯ 06 : ಮಾಹಿತಿ ತಂತ್ರಜ್ಞಾನ | 15.06.2020 | ಸಂಜೆ 05.00 ರಿಂದ 06.30ರ ವರೆಗೆ | "ಅಧ್ಯಾಯ 07 : ವ್ಯವಹಾರಪ್ರಕ್ರಿಯೆ ಮರುರಚನೆ – ಬ್ಯಾಂಕ್‌ಗಳ ಬಿಪಿಆರ್ ಅನುಸರಣೆಯ ಸಾರಾಂಶ, ಬಿಪಿಆರ್ ಮತ್ತು ಮಾಹಿತಿ ತಂತ್ರಜ್ಞಾನ ಅಧ್ಯಾಯ 8 : ಇ–ಕಾಮರ್ಸ್ ಸರ್ವಿಸ್ ಅಧ್ಯಾಯ 09 : ಎಲೆಕ್ಟ್ರಾನಿಕ್ ಬ್ಯಾಂಕಿಗ್‌ನಲ್ಲಿ ಸುರಕ್ಷತೆ ಅಧ್ಯಾಯ 10:ಕಂಪ್ಯೂಟರ್ ಬೆಂಬಲಿತ ಬ್ಯಾಂಕಿಂಗ್‌ನಲ್ಲಿ ಕುತಂತ್ರ | ಶ್ರೀ ಅಮೃತ ಜೋಶಿ |

## ಬೆಂಗಳೂರು, ಶಿವಮೊಗ್ಗ ಹಾಗೂ ರಾಯಚೂರು ಕೇಂದ್ರದ ಡಿಸಿಬಿಎಂ 3ನೇ ಸಂಪರ್ಕ ವರ್ಗದ ವೇಳಾಪಟ್ಟಿ ದಿನಾಂಕ 27.06.2020 ರಿಂದ 29.06.2020 ರವರೆಗೆ

| ವಿಷಯಗಳ ವಿವರ | ದಿನಾಂಕ | ಸಮಯ | ಭೋದಿಸಬೇಕಾದ ವಿಷಯ | ಸಂಪನ್ಮೂಲ ವ್ಯಕ್ತಿಗಳ ಹೆಸರು |
|---|---|---|---|---|
| ವಿಷಯ 01 : ಸಹಕಾರ ಪರಿಸರ ಹಾಗೂ ಆಡಳಿತ ನಿರ್ವಹಣೆ | 27.06.2020 | ಬೆಳಿಗ್ಗೆ 10.00 ರಿಂದ 11.30 ರವರೆಗೆ | "ಅಧ್ಯಾಯ – 5 ಸಾಮಾನ್ಯ ಆಡಳಿತ<br>ಅಧ್ಯಾಯ – 6 ಸಹಕಾರ ಆಡಳಿತ | ಶ್ರೀಮತಿ ಭಾರತಿ |
| ವಿಷಯ 02 : ಸಹಕಾರಿ ಪತ್ತು ನಿರ್ವಹಣೆ | 27.06.2020 | ಮಧ್ಯಾಹ್ನ 12.00 ರಿಂದ 01.30ರ ವರೆಗೆ | ಅಧ್ಯಾಯ – 5 ದೀರ್ಘಾವಧಿ ಸಾಲ ವ್ಯವಸ್ಥೆ ಮತ್ತು ನಬಾರ್ಡ್‌ನ ಪ್ರಾಮುಖ್ಯತೆ– ಹಿನ್ನೆಲೆ, ರಚನೆ, ಪ್ರಾಥಮಿಕ ಸಹಕಾರ ಕೃಷಿ ಅಭಿವೃದ್ಧಿ ಬ್ಯಾಂಕ್‌ಗಳು, ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್<br>ಅಧ್ಯಾಯ 06: ಪಟ್ಟಣ ಸಹಕಾರ ಬ್ಯಾಂಕ್‌ಗಳು<br>ಅಧ್ಯಾಯ 07: ಪತ್ತಿನ (ಕೃಷಿಯೇತರ) ಸಹಕಾರ ಸಂಘಗಳು | ಶ್ರೀ ವೈ. ವಿ. ಗುಂಡೂರಾವ್ |
| ವಿಷಯ 06 : ಮಾಹಿತಿ ತಂತ್ರಜ್ಞಾನ | 28.06.2020 | ಬೆಳಿಗ್ಗೆ 10.00 ರಿಂದ 11.30 ರವರೆಗೆ | "ಅಧ್ಯಾಯ 07 : ವ್ಯವಹಾರಪ್ರಕ್ರಿಯೆ ಮರುರಚನೆ – ಬ್ಯಾಂಕ್‌ಗಳ ಬಿಪಿಆರ್ ಅನುಸರಣೆಯ ಸಾರಾಂಶ, ಬಿಪಿಆರ್ ಮತ್ತು ಮಾಹಿತಿ ತಂತ್ರಜ್ಞಾನ, ಅಧ್ಯಾಯ 8 : ಇ–ಕಾಮರ್ಸ್ ಸರ್ವಿಸ್<br>ಅಧ್ಯಾಯ 09 : ಎಲೆಕ್ಟ್ರಾನಿಕ್ ಬ್ಯಾಂಕಿಗ್‌ನಲ್ಲಿ ಸುರಕ್ಷತೆ<br>ಅಧ್ಯಾಯ 10:ಕಂಪ್ಯೂಟರ್ ಬೆಂಬಲಿತ ಬ್ಯಾಂಕಿಂಗ್‌ನಲ್ಲಿ ಕುತಂತ್ರ | ಶ್ರೀ ಜಿ.ಎಸ್. ರವೀಂದ್ರ |
| ವಿಷಯ 04 : ಸಹಕಾರ ಕಾಯ್ದೆಗಳು, ಬ್ಯಾಂಕಿಂಗ್ ಕಾಯ್ದೆಗಳು ಇತರೆ ಅನ್ವಯಿಸುವ ಕಾಯ್ದೆಗಳು | 28.06.2020 | ಮಧ್ಯಾಹ್ನ 12.00 ರಿಂದ 01.30ರ ವರೆಗೆ | "ಅಧ್ಯಾಯ 05 : ಸಂಬಂಧಿತ ಕಾನೂನು (ಮುಖ್ಯಾಂಶಗಳು) ಭಾರತದ ಕರಾರು ಅಧಿನಿಯಮ– ನಷ್ಟ ಭರ್ತಿ (ಕ್ಷತಿ ಪೂರ್ತಿ) ಮತ್ತು ಖಾತರಿ (ಇಂಡೆಮ್ನಿಟಿ ಅಂಡ್ ಗ್ಯಾರಂಟಿ), ಸರಕು ಮಾರಾಟ ಅಧಿನಿಯಮ, ಬಳಕೆದಾರ ಹಿತರಕ್ಷಣಾ ಅಧಿನಿಯಮ, 1986, ವಿಮೆ, ಸೈಬರ್ ಕಾನೂನು ಮತ್ತು ಮಾಹಿತಿ ತಂತ್ರಜ್ಞಾನ ಅಧಿನಿಯಮ, ಬ್ಯಾಂಕರರ ಪುಸ್ತಕ (ಸಾಕ್ಷ್ಯ) ಅಧಿನಿಯಮ, 1891, ಭಾರತದ ಸ್ಟಾಂಪ್ ಅಧಿನಿಯಮ, ದಿವಾಳಿತನ ಮತ್ತು ನಿರ್ಗತಿಕತೆಯ ಸಂಹಿತೆ" | ಶ್ರೀ ಜಿ.ಎಸ್. ರವೀಂದ್ರ |
| ವಿಷಯ 05 : ಲೆಕ್ಕ ಪತ್ರಗಳು ಹಾಗೂ ಲೆಕ್ಕ ಪರಿಶೋಧನೆ | 29.06.2020 | ಮಧ್ಯಾಹ್ನ 03.00 ರಿಂದ 04.30ರ ವರೆಗೆ | "ಅಧ್ಯಾಯ 6 : ಲೆಕ್ಕಪರಿಶೋಧನೆ – ಲೆಕ್ಕಪರಿಶೋಧನೆಯ ಅರ್ಥ, ವ್ಯಾಖ್ಯಾಯನ, ಲೆಕ್ಕಪರಿಶೋಧನೆಯ ವಿಧಗಳು, ಭಾರತೀಯ ರಿಸರ್ವ್ ಬ್ಯಾಂಕ್ (RBI) ನಿಂದ ಮಾಡಲ್ಪಡುವ ತಪಾಸಣೆ, | ಶ್ರೀ ಬಿ.ವಿ.ರವೀಂದ್ರನಾಥ |
| ವಿಷಯ 03 : ಬ್ಯಾಂಕಿಂಗ್ ಮೂಲ ಮಾಹಿತಿ | 29.06.2020 | ಸಂಜೆ 05.00 ರಿಂದ 06.30ರ ವರೆಗೆ | ಅಧ್ಯಾಯ 05 : ಕ್ರೆಡಿಟ್ ನಿರ್ವಹಣೆ– ಬ್ಯಾಂಕುಗಳು ಸಾಲ ನೀಡಿಕೆಯಲ್ಲಿ ಅನುಸರಿಸುವ ತತ್ವಗಳು, ಸಾಲದ ವಿಧಗಳು, ನಾನ್ ಫರ್‌ಫಾಮಿಂಗ್ ಅಸೆಟ್,<br>ಅಧ್ಯಾಯ 06: ಹೂಡಿಕೆ ನಿರ್ವಹಣೆ – ಅರ್ಥವಿವರಣೆ, ವಹಿವಾಟು ನಿರ್ವಹಣೆ ಸೂತ್ರ, ಹೂಡಿಕೆಗಳ ವರ್ಗೀಕರಣ ಮತ್ತು ಮೌಲೀಕರಣ, ಆಸ್ತಿ ಜವಾಬ್ದಾರಿ ನಿರ್ವಹಣೆ<br>ಅಧ್ಯಾಯ 07: ಆಪತ್ತು ನಿರ್ವಹಣೆ – ಕ್ರೆಡಿಟ್ ರಿಸ್ಕ್ ನಿರ್ವಹಣೆ, ಕಾರ್ಯ ನಿರ್ವಹಣ ದಾಮಾಶೆ, ಅಧ್ಯಾಯ 08: ವ್ಯವಸ್ಥೆ ಮತ್ತು ನಿಯಂತ್ರಣಗಳು<br>ಅಧ್ಯಾಯ 09 : ಮಹತ್ವದ ಹಣಕಾಸು ಸಂಸ್ಥೆಗಳು | ಶ್ರೀ ಎಸ್.ಜಿ. ಕುಲಕರ್ಣಿ |

## ಡಿಸಿಬಿಎಂ ಮೂರನೇ ಸಂಪರ್ಕ ವರ್ಗ ತರಗತಿ (ಆನ್‌ಲೈನ್) ಹೆಚ್ಚುವರಿ ತರಗತಿ : ಬೆಂಗಳೂರು, ರಾಯಚೂರು, ಶಿವಮೊಗ್ಗ, ಬೆಳಗಾವಿ ಹಾಗೂ ಮುಧೋಳ ಕೇಂದ್ರ – ದಿನಾಂಕ 20 ಜೂನ್ 2020

| ವಿಷಯಗಳ ವಿವರ | ದಿನಾಂಕ | ಸಮಯ | ಬೋಧಿಸಬೇಕಾದ ವಿಷಯ | ಸಂಪನ್ಮೂಲ ವ್ಯಕ್ತಿಗಳ ಹೆಸರು |
|---|---|---|---|---|
| ಸಹಕಾರ ಕಾಯ್ದೆಗಳು – ಬ್ಯಾಂಕಿಂಗ್ ಕಾಯ್ದೆಗಳು ಹಾಗೂ ಇತರೆ ಅನ್ವಯಿಸುವ ಕಾಯ್ದೆಗಳು | 20.06.2020 | ಮಧ್ಯಾಹ್ನ 03.00 ರಿಂದ ಸಂಜೆ 05.00ರ ವರೆಗೆ | ದಾಖಲಾತಿಗಳ ನಿರ್ವಹಣೆ, ಸಾಲ ವಸೂಲಾತಿ | ಶ್ರೀ ಹೆಚ್.ಎಸ್. ನಾಗರಾಜಯ್ಯ ಮತ್ತು ಶ್ರೀ ಎಸ್.ಜಿ.ಜೋಶಿ |
| ಸಹಕಾರ ಕಾಯ್ದೆಗಳು – ಬ್ಯಾಂಕಿಂಗ್ ಕಾಯ್ದೆಗಳು ಹಾಗೂ ಇತರೆ ಅನ್ವಯಿಸುವ ಕಾಯ್ದೆಗಳು | 20.06.2020 | ಸಂಜೆ 05.00ರಿಂದ 06.30ರ ವರೆಗೆ | ಸಂವಿಧಾನದ ಅರ್ಥ, ಆಶಯ, ಪ್ರಾಮುಖ್ಯತೆ ಹಾಗೂ ಪ್ರಮುಖ ಅಂಶಗಳು | ಶ್ರೀ ಶರಣಗೌಡ ಜಿ. ಪಾಟೀಲ ಮತ್ತು ಶ್ರೀ ಮಹಂತಪ್ಪ |

## ಸಹಕಾರ ಹಾಗೂ ಬ್ಯಾಂಕಿಂಗ್ ಮೆನೆಜ್‌ಮೆಂಟ್ ಡಿಪ್ಲೋಮಾ (ಡಿಸಿಬಿಎಂ) ಕೋರ್ಸ್‌ನ ಪರೀಕ್ಷಾ ವೇಳಾಪಟ್ಟಿ

ಪರೀಕ್ಷಾ ದಿನಾಂಕ : 10, 11 ಹಾಗೂ 12ನೇ ಜುಲೈ 2020ರವರೆಗೆ / Examination Dates : 10, 11 and 12th July 2020. ಸ್ಥಳ : ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ, ಬೆಂಗಳೂರು (ಕೇಂದ್ರ –01), ಆಲ್ ಇಂಡಿಯಾ ಇನ್ಸಿಟ್ಯೂಟ್ ಆಫ್ ಲೋಕಲ್ ಸೆಲ್ಫ್ ಗೌರ್ನಮೆಂಟ್, ಬೆಳಗಾವಿ (ಕೇಂದ್ರ –02), ವಿಜಯ ಪತ್ತಿನ ಸೌಹಾರ್ದ ಸಹಕಾರಿ ನಿ., ಮುಧೋಳ (ಕೇಂದ್ರ–03), ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., ಶಿವಮೊಗ್ಗ (ಕೇಂದ್ರ –04), ಕೃಷಿ ವಿಶ್ವವಿದ್ಯಾಲಯ, ರಾಯಚೂರು (ಕೇಂದ್ರ–05)

| ಕ್ರಮ ಸಂಖ್ಯೆ | ವಿಷಯ | ದಿನಾಂಕ | ಸಮಯ |
|---|---|---|---|
| 1 | ಸಹಕಾರ ಪರಿಸರ ಹಾಗೂ ಆಡಳಿತ ನಿರ್ವಹಣೆ<br>Cooperative Environment and General management | 10.07.2020 | ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 01.00ರ ವರೆಗೆ |
| 2 | ಸಹಕಾರಿ ಪತ್ತು ನಿರ್ವಹಣೆ<br>Cooperative Credit System | 10.07.2020 | ಮಧ್ಯಾಹ್ನ 2.00 ರಿಂದ ಸಂಜೆ 05.00ರ ವರೆಗೆ |
| 3 | ಬ್ಯಾಂಕಿಂಗ್ ಮೂಲ ಮಾಹಿತಿ<br>Basics of Banking Operation | 11.07.2020 | ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 01.00ರ ವರೆಗೆ |
| 4 | ಸಹಕಾರ ಕಾಯ್ದೆಗಳು, ಬ್ಯಾಂಕಿಂಗ್ ಕಾಯ್ದೆಗಳು ಇತರೆ ಅನ್ವಯಿಸುವ ಕಾಯ್ದೆಗಳು<br>Cooperative Laws, Banking Laws and Other Allied Laws | 11.07.2020 | ಮಧ್ಯಾಹ್ನ 2.00 ರಿಂದ ಸಂಜೆ 05.00ರ ವರೆಗೆ |
| 5 | ಲೆಕ್ಕ ಪತ್ರಗಳು ಹಾಗೂ ಲೆಕ್ಕ ಪರಿಶೋಧನೆ<br>Accounting and Audit | 12.07.2020 | ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 01.00ರ ವರೆಗೆ |
| 6 | ಮಾಹಿತಿ ತಂತ್ರಜ್ಞಾನ<br>Information Technology | 12.07.2020 | ಮಧ್ಯಾಹ್ನ 2.00 ರಿಂದ ಸಂಜೆ 05.00ರ ವರೆಗೆ |
| ಸೂಚನೆ : ಲಾಕ್‌ಡೌನ್ ಮುಂದುವರಿಕೆಯಾದಲ್ಲಿ ಹಾಗೂ ಸರ್ಕಾರದ ವಿಶೇಷ ಸೂಚನೆಗಳು ಯಾವುದಾದರೂ ಬಂದಲ್ಲಿ ಪರೀಕ್ಷಾ ದಿನಾಂಕಗಳು ಬದಲಾವಣೆಯಾಗುವ ಸಾಧ್ಯತೆ ಇರುತ್ತದೆ. | | | |

# ಸಹಕಾರ ಸಂಸ್ಥೆಗಳ ಆಡಳಿತ ಮಂಡಲಿಯಲ್ಲಿನ ಖಾಲಿಬಿದ್ದ/ಆಕಸ್ಮಿಕವಾಗಿ ತೆರವಾಗಿರುವ ಪದಾಧಿಕಾರಿಗಳ ಸ್ಥಾನಗಳಿಗೆ ಚುನಾವಣೆ ನಡೆಸುವ ಕುರಿತು ಸುತ್ತೋಲೆ

ಕರ್ನಾಟಕ ಸರ್ಕಾರ

ಸಹಕಾರ ಚುನಾವಣಾ ಪ್ರಾಧಿಕಾರ

ಸಂಖ್ಯೆ: ಸಚುಪ್ರಾ/ಬೆಂ-ಸುತ್ತೋಲೆ/70/2020.

3ನೇ ಮಹಡಿ, ಟಿ ಟಿ ಎಂ ಸಿ 'ಎ' ಬ್ಲಾಕ್,
ಶಾಂತಿನಗರ, ಬೆಂಗಳೂರು-560 027
ದಿನಾಂಕ: 02.06.2020

## ಸುತ್ತೋಲೆ

ವಿಷಯ : ಸಹಕಾರ ಸಂಘಗಳ ಆಡಳಿತ ಮಂಡಲಿಯಲ್ಲಿನ ಖಾಲಿಬಿದ್ದ/ಆಕಸ್ಮಿಕವಾಗಿ ತೆರವಾಗಿರುವ ಪದಾಧಿಕಾರಿಗಳ ಸ್ಥಾನಗಳಿಗೆ ಚುನಾವಣೆ ನಡೆಸಲು ಕ್ರಮ ವಹಿಸುವ ಕುರಿತು.

ಉಲ್ಲೇಖ : 1.ಪ್ರಾಧಿಕಾರದ ಸುತ್ತೋಲೆ ಸಂಖ್ಯೆ: ಸಚುಪ್ರಾ/ ಆಡಳಿತ/ ಚುನಾವಣೆ/ ಕೊರೋನಾ/2020, ದಿನಾಂಕ:26.03.2020.
2.ಪ್ರಾಧಿಕಾರದಿಂದ ಸರ್ಕಾರಕ್ಕೆ ಬರೆದ ಪತ್ರದ ಸಂಖ್ಯೆ: ಸಚುಪ್ರಾ/ಬೆಂ/ಉನಿ/2020. ದಿನಾಂಕ: 19-05-2020.
3. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಶಿಂಷಾ ಸಹಕಾರ ಬ್ಯಾಂಕ್ ನಿಯಮಿತ, ಮದ್ದೂರು ಇವರ ಪತ್ರ ದಿನಾಂಕ 22.05.2020.
4. ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್ ನೌಕರರ ಪತ್ತಿನ ಸಹಕಾರ ಸಂಘ ನಿ., ಧಾರವಾಡ ಇವರ ಪತ್ರ ದಿನಾಂಕ 04.05.2020.
5.ಸಹಕಾರ ಸಂಘಗಳ ಉಪನಿಬಂಧಕರು, ಮಂಡ್ಯ ಜಿಲ್ಲೆ, ಮಂಡ್ಯ ಇವರ ಪತ್ರ ಸಂಖ್ಯೆ : ಡಿಆರ್‌ವೈ/ಎ9/ಚುನಾವಣೆ/2020-21 ದಿನಾಂಕ 20.05.2020.
6. ಸಹಾಯಕ ನಿಬಂಧಕರು, ಪಾಂಡವಪುರ ಉಪವಿಭಾಗ, ಪಾಂಡವಪುರ ಇವರ ಪತ್ರ ಸಂಖ್ಯೆ : ಎಆರ್-40/ಇಎಲ್‌ಎನ್/ಸಿಆರ್/2019-20 ದಿನಾಂಕ:23.03.2020.

*****

ರಾಜ್ಯದಲ್ಲಿ ಕೊರೋನಾ ವೈರಸ್ ಹರಡುತ್ತಿರುವ ಸಂಬಂಧ ಪ್ರಾಧಿಕಾರದಿಂದ ಉಲ್ಲೇಖ(1)ರಲ್ಲಿ ಸುತ್ತೋಲೆಯನ್ನು ಹೊರಡಿಸಿ ಸಹಕಾರ ಸಂಘಗಳ/ಸಹಕಾರಿ ಬ್ಯಾಂಕುಗಳ ಆಡಳಿತ ಮಂಡಲಿ ನಿರ್ದೇಶಕರ ಹಾಗೂ ಪದಾಧಿಕಾರಿಗಳ ಚುನಾವಣಾ ಸಂಬಂಧ ಸರ್ಕಾರದ ನಿರ್ದೇಶನಗಳನ್ನು ಪಾಲಿಸುವಂತೆ ತಿಳಿಸಲಾಗಿರುತ್ತದೆ.

ಮುಂದುವರೆದು ಉಲ್ಲೇಖ(2)ರಲ್ಲಿ ಪ್ರಾಧಿಕಾರದ ಉಲ್ಲೇಖ(1)ರ ಸುತ್ತೋಲೆಯನ್ನು ಹೊರಡಿಸುವ ಪೂರ್ವದಲ್ಲಿ ಅಂದರೆ ದಿನಾಂಕ:26.03.2020ಕ್ಕೆ ಮೊದಲು ಸಹಕಾರ ಸಂಘಗಳ/ಸಹಕಾರಿ ಬ್ಯಾಂಕುಗಳ ಆಡಳಿತ ಮಂಡಲಿ ನಿರ್ದೇಶಕರ ಸ್ಥಾನಕ್ಕೆ ಚುನಾವಣೆ ನಡೆದು ಪದಾಧಿಕಾರಿಗಳ ಚುನಾವಣೆಗಳನ್ನು ನಡೆಸಲು ಬಾಕಿಯಿರುವ ಹಾಗೂ ಖಾಲಿಬಿದ್ದ ಅಥವಾ ಆಕಸ್ಮಿಕವಾಗಿ ತೆರವಾಗಿರುವ ಪದಾಧಿಕಾರಿಗಳ ಸ್ಥಾನಗಳನ್ನು ಮಾತ್ರ ಭರ್ತಿ ಮಾಡಲು ಕ್ರಮಕೈಗೊಂಡಿರುವ ಬಗ್ಗೆ ಸರ್ಕಾರದ ಗಮನಕ್ಕೆ ತರಲಾಗಿದೆ.

ಉಲ್ಲೇಖ(3) ರಿಂದ (6)ರವರೆಗಿನ ಸಂಘದ ಆಡಳಿತ ಮಂಡಲಿಗಳಲ್ಲಿ ಆಕಸ್ಮಿಕವಾಗಿ ತೆರವಾದ ಮತ್ತು ಖಾಲಿಬಿದ್ದ ಪದಾಧಿಕಾರಿಗಳ ಚುನಾವಣೆಯು ಜರುಗಲು ಬಾಕಿಯುಳಿದಿರುತ್ತದೆ. ಇದರಿಂದಾಗಿ ಬ್ಯಾಂಕಿನ ಬೈಲಾ ಪ್ರಕಾರ ಯಾವುದೇ ಸಾಲ ಮಂಜೂರಾತಿ ಇನ್ನಿತರ ಚಟುವಟಿಕೆಗಳು ಜರುಗದೇ ಇರುವುದರಿಂದ ಬ್ಯಾಂಕಿಗೆ ತುಂಬಾ ತೊಂದರೆ ಉಂಟಾಗಿರುತ್ತದೆಂದು ತಿಳಿಸುತ್ತಾ, ಪದಾಧಿಕಾರಿಗಳ ಚುನಾವಣೆಯನ್ನು ಜರುಗಿಸಿ ಬ್ಯಾಂಕಿನ ವ್ಯವಹಾರ ನಡೆಸಲು ಅನುವು ಮಾಡಿಕೊಡಬೇಕೆಂದು ಕೋರಿರುತ್ತಾರೆ.

ಕರ್ನಾಟಕ ರಾಜ್ಯ ಆರೋಗ್ಯ ಇಲಾಖೆಯು ಕೋವಿಡ್-19ರ ಸಂಬಂಧ ಆಗಿಂದಾಗ್ಗೆ ಹೊರಡಿಸುತ್ತಿರುವ ಆದೇಶ/ ಸುತ್ತೋಲೆ/ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲನೆ ಮಾಡಿ, ಈಗಾಗಲೇ ಆಡಳಿತ ಮಂಡಲಿ ಚುನಾವಣೆ ನಡೆದಿದ್ದು ಪದಾಧಿಕಾರಿಗಳ ಚುನಾವಣೆ ಮಾತ್ರ ಬಾಕಿ ಇದ್ದಲ್ಲಿ ಮತ್ತು ಖಾಲಿಬಿದ್ದ/ಆಕಸ್ಮಿಕವಾಗಿ ತೆರವಾದ ಪದಾಧಿಕಾರಿಗಳ ಸ್ಥಾನಗಳಿಗೆ ಮಾತ್ರ ಚುನಾವಣಾ ಪ್ರಕ್ರಿಯೆಯನ್ನು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ನಡೆಸಲು ಅನುಮತಿಸಿದೆ.

1. ಪದಾಧಿಕಾರಿಗಳ ಚುನಾವಣೆಗೆ ನಿರ್ದೇಶಕರುಗಳು ಮಾತ್ರ ಹಾಜರಿರಬೇಕು.
2. ಸಾಮಾಜಿಕ ಅಂತರವನ್ನು ಕಾಯ್ದುಕೊಂಡು ಪದಾಧಿಕಾರಿಗಳ ಚುನಾವಣೆಯನ್ನು ನಡೆಸಬೇಕು.
3. ಪದಾಧಿಕಾರಿಗಳ ಆಯ್ಕೆಯ ಸಂಬಂಧ ಸಂಭ್ರಮಾಚರಣೆಯನ್ನು ಮಾಡತಕ್ಕದ್ದಲ್ಲ.

(ಎ.ಸಿ.ದಿವಾಕರ್)
ಕಾರ್ಯದರ್ಶಿ
ಸಹಕಾರ ಚುನಾವಣಾ ಪ್ರಾಧಿಕಾರ,
ಬೆಂಗಳೂರು.

# ಫೆಡರಲ್ ಸಹಕಾರ ಸಂಘಗಳ ಆಡಳಿತ ಮಂಡಳಿಗಳ ಸಾಮಾನ್ಯ ಚುನಾವಣೆಯನ್ನು ನಡೆಸುವ ಕುರಿತು ಸುತ್ತೋಲೆ.

## ಸಹಕಾರ ಚುನಾವಣಾ ಪ್ರಾಧಿಕಾರ

ಟಿ.ಟಿ.ಎಂ.ಸಿ. ಕಟ್ಟಡ, 3ನೇ ಮಹಡಿ, ಎ-ಬ್ಲಾಕ್, ಶ್ರೀಕೆಂಗಲ್‌ಹನುಮಂತಯ್ಯ ರಸ್ತೆ, ಶಾಂತಿ ನಗರ, ಬೆಂಗಳೂರು-27.

e-mail : coeckarnataka@gmail.com
Phone : 080-22220066 / 29709014

ಸಂಖ್ಯೆ:ಸಚುಪ್ರಾ/ಆಡಳಿತ/ಚುನಾವಣೆ/ಕೊರೋನಾ/2020 ದಿನಾಂಕ 04.06.2020

ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ
ಫೆಡರಲ್ ಸಹಕಾರ ಸಂಘಗಳ ಚುನಾವಣಾಧಿಕಾರಿಗಳು.

ಮಾನ್ಯರೆ,

ವಿಷಯ : ಫೆಡರಲ್ ಸಹಕಾರ ಸಂಘಗಳ ಆಡಳಿತ ಮಂಡಳಿಗಳ ಸಾಮಾನ್ಯ ಚುನಾವಣೆಯನ್ನು ನಡೆಸುವ ಬಗ್ಗೆ.

ಉಲ್ಲೇಖ : 01) ಈ ಕಛೇರಿಯ ಸಮಸಂಖ್ಯೆಯ ಸುತ್ತೋಲೆ ದಿನಾಂಕ 26.03.2020.
02) ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ಸಹಕಾರ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ : ಸಿಒ/32/ಸಿಎಲ್‌ಎಂ/2020 ದಿನಾಂಕ 02.06.2020.

★★★★★

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, CORONA VIRUS / COVID-19 ಸಾಂಕ್ರಾಮಿಕ ರೋಗದ ಹಿನ್ನಲೆಯಲ್ಲಿ ಎಲ್ಲಾ ಸಹಕಾರ ಸಂಘಗಳ/ಸಹಕಾರಿಗಳ ಚುನಾವಣೆಗಳನ್ನು ಮತ್ತು ಚುನಾವಣೆಯ ಎಲ್ಲಾ ಪ್ರಕ್ರಿಯೆಗಳನ್ನು ಮುಂದೂಡಿ ಉಲ್ಲೇಖ(1)ರ ಸುತ್ತೋಲೆಯನ್ನು ಹೊರಡಿಸಲಾಗಿತ್ತು.

ಫೆಡರಲ್ ಸಹಕಾರ ಸಂಘಗಳ ಚುನಾವಣೆಯಲ್ಲಿ ಸಹಕಾರ ಸಂಘಗಳ ಪ್ರತಿನಿಧಿಗಳು ಮಾತ್ರ ಭಾಗವಹಿಸುವುದರಿಂದ, ಈ ಸಂಖ್ಯೆ ಕಡಿಮೆ ಇರುವುದರಿಂದ ಮತ್ತು ಸರ್ಕಾರವು ಉಲ್ಲೇಖ(2)ರಲ್ಲಿ ಫೆಡರಲ್ ಹಾಗೂ ಅಪೆಕ್ಸ್ ಸಹಕಾರ ಸಂಘಗಳ ಚುನಾವಣಾ ಪ್ರಕ್ರಿಯೆಯಲ್ಲಿ ಸದಸ್ಯ ಸಂಘಗಳ ಪ್ರತಿನಿಧಿಗಳು ಮಾತ್ರ ಭಾಗವಹಿಸುವುದರಿಂದ ಹಾಗೂ ಪ್ರತಿನಿಧಿಗಳ ಸಂಖ್ಯೆ ಕಡಿಮೆ ಇರುವುದರಿಂದ ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳಲು ಯಾವುದೇ ತೊಂದರೆ ಇರದ ಕಾರಣ, ಫೆಡರಲ್ ಹಾಗೂ ಅಪೆಕ್ಸ್ ಸಹಕಾರ ಸಂಘಗಳ ಆಡಳಿತ ಮಂಡಳಿಯ ಅವಧಿಯು ಮುಕ್ತಾಯಗೊಳ್ಳುವ ಸಂದರ್ಭಕ್ಕನುಸಾರವಾಗಿ ಚುನಾವಣೆ ನಡೆಸಲು ಸಮ್ಮತಿಸಿ ಸೂಕ್ತ ಕ್ರಮತೆಗೆದುಕೊಳ್ಳಲು ತಿಳಿಸಲಾಗಿರುತ್ತದೆ.

ಆದುದರಿಂದ, ಉಲ್ಲೇಖ(1)ರ ಈ ಕಛೇರಿಯ ಸುತ್ತೋಲೆಯಂತೆ ಫೆಡರಲ್ ಸಹಕಾರ ಸಂಘಗಳ ಚುನಾವಣೆಯ ಎಲ್ಲಾ ಪ್ರಕ್ರಿಯೆಗಳನ್ನು ಯಾವ ಹಂತದಲ್ಲಿ ನಿಲ್ಲಿಸಲಾಗಿತ್ತೋ, ಅಲ್ಲಿಂದ ಮುಂದುವರೆಸಿ ಆಡಳಿತ ಮಂಡಳಿಯ ಮತ್ತು ಪದಾಧಿಕಾರಿಗಳ ಚುನಾವಣೆಗಳನ್ನು ಪೂರ್ಣಗೊಳಿಸಲು ಈ ಮೂಲಕ ತಿಳಿಸಲಾಗಿದೆ.

ತಮ್ಮ ವಿಶ್ವಾಸಿ,
4/6
(ಡಾ: ಎನ್.ಎಸ್. ಚನ್ನಪ್ಪಗೌಡ)
ಆಯುಕ್ತರು,
ಸಹಕಾರ ಚುನಾವಣಾ ಪ್ರಾಧಿಕಾರ,
ಬೆಂಗಳೂರು.

# TDS RATE CHART FROM 01.04.2020 TO 31.03.2021

**TDS RATE CHART from 01.04.2020 to 31.03.2021**

| Section | Nature of payment | Threshold Limit (Rs) | Rates applicable from 01.04.20 to 13.05.20 | Rates applicable from 14.05.20 to 31.03.21 |
|---|---|---|---|---|
| 193 | Interest on securities | 10000 | 10% | 7.50% |
| 194 | Dividend | 5000 | 10% | 7.50% |
| 194A | Interest other than interest on securities- Banks, co-op societies* and Post Office | 40000 50000* | 10% | 7.50% |
| 194A | Interest other than interest on securities- Others | 5000 | 10% | 7.50% |
| 194B | Winnings from lotteries, crossword puzzles | 10000 | 30% | 30% |
| 194C | Payment to Contractors- Individual and HUF | 30000* 100000* | 1% | 0.75% |
| 194C | Payment to Contractors- Other than Individual and HUF | 30000* 100000* | 2% | 1.50% |
| 194D | Insurance Commission | 15000 | 5% | 3.75% |
| 194DA | Payment in respect of Life Insurance | 100000 | 5% | 3.75% |
| 194EE | Payment in respect of deposit under NSS | 2500 | 10% | 7.50% |
| 194G | Commission on sale of lottery tickets | 15000 | 5% | 3.75% |
| 194H | Commission and Brokerage | 15000 | 5% | 3.75% |
| 194I | Rent of Immovable Property | 240000 | 10% | 7.50% |
| 194I | Rent of Plant and Machinery | 240000 | 2% | 1.50% |
| 194IA | Payment for acquistion of imovable property | 5000000 | 1% | 0.75% |
| 194IB | Payment of rent by certain individual or HUF | Exeeding 50000 P.M | 5% | 3.75% |
| 194IC | Payment for joint development property | - | 10% | 7.50% |
| 194J | Royalty towards sale, distribution or exhibition of cinematographic films | 30000 | 2% | 1.50% |
| 194J | Professional payment for business of operation of call Centre | 30000 | 2% | 1.50% |
| 194J | fees for technical services (other than professional services) | 30000 | 2% | 1.50% |
| 194J | Professional Charges | 30000 | 10% | 7.50% |
| 194M | Payment to contractor, commission agent, broker or professional by certain individuals or HUF | 5000000 | 5% | 3.75% |
| 194N | Previous 3 years ROI filed cases | Exeeding 10000000 | 2% | 2% |
| 194N | Previous 3 years ROI not filed cases (From 1.07.2020) | 2000000 to 10000000 | 2% | 2% |
| 194N | Previous 3 years ROI not filed cases (From 1.07.2020) | Exeeding 10000000 | 5% | 5% |
| 194O | TDS on E-commerce Paticipants | - | 1% | 0.75% |

Note: Threshold limit of Rs.50000/- applicable for senior citizens u/s 194A
Co-operative societies having turnover of more than Rs.50 crore during the preceding Financial Year is liable to deduct tax at source from 01.04.2020
Under section 194C TDS affected if single payment is Rs.30000 or for aggregate amount of Rs.100000 during the year

# ಕೋರೊನಾ ವೈರಸ್ (ಕೋವೀಡ್-19) ಲಾಕ್‌ಡೌನ್ ಸಮಯದಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ಸಾಮಾಜಿಕ ಕಾರ್ಯ ಚಟುವಟಿಕೆಗಳು



**ಬೀದರ :** ಕೋವಿಡ್-19 ಲಾಕ್‌ಡೌನ್ ಸಮಯದಲ್ಲಿ ದಿನಾಂಕ 11.05.2020ರಂದು ಬೀದರ ನಗರದ ಸೌಹಾರ್ದ ಸಹಕಾರಿಗಳ ಸಿಬ್ಬಂದಿಗಳಿಗೆ ಆಡಳಿತ ಮಂಡಳಿ ಸದಸ್ಯರುಗಳಿಗೆ ಮತ್ತು ಸಾರ್ವಜನಿಕರಿಗೆ ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ವತಿಯಿಂದ ಮಾಸ್ಕ್ ಮತ್ತು ಸ್ಯಾನಿಟೈಸರ್ ವಿತರಿಸಲಾಯಿತು. ಒಕ್ಕೂಟದ ಜಿಲ್ಲಾ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ್ ಮಾತನಾಡಿ, ಸಹಕಾರಿಯ ಸಿಬ್ಬಂದಿಗಳು ತಮ್ಮ ದಿನನಿತ್ಯದ ವ್ಯವಹಾರ ಸದಸ್ಯರೊಂದಿಗೆ ಕೈಗೊಳ್ಳುವ ಮುನ್ನ ಮಾಸ್ಕ್ ಮತ್ತು ಸ್ಯಾನಿಟೈಸರ್ ಕಡ್ಡಾಯವಾಗಿ ಉಪಯೋಗಿಸತಕ್ಕದು ಹಾಗೂ ಸಾಮಾಜಿಕ ಅಂತರ ಕಾಯ್ದುಕೊಂಡು ವ್ಯವಹಾರ ಕೈಗೊಳ್ಳಲು ಮನವಿ ಮಾಡಿದರು.

**ಬೀದರ :** ಕೋವಿಡ್-19 ಲಾಕ್‌ಡೌನ್ ಸಮಯದಲ್ಲಿ ಬೀದರ ನಗರದ ನೌಬಾದನಲ್ಲಿ ಬೀದಿಬದಿ ವಾಸಿಸುವ ಅಲೆಮಾರಿಗಳಿಗೆ ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತೀಕರ್ ಹಾಗೂ ನಿರ್ದೇಶಕರಾದ ಶ್ರೀ ಶ್ರೀಕಾಂತ ಸ್ವಾಮಿ ಸೋಲಪೂರ ಅವರ ನೇತೃತ್ವದಲ್ಲಿ ಗುಡಿಸಲುಗಳಿಗೆ ತೆರಳಿ ಮಾಸ್ಕಗಳನ್ನು ವಿತರಿಸಿ ಅವುಗಳ ಉಪಯೋಗಿಸುವಂತೆ ಮಾರ್ಗದರ್ಶನ ಮಾಡಲಾಯಿತು. ಮಹಾಮಾರಿ ಕರೋನಾ ದೇಶದಿಂದ ಮುಕ್ತ ಮಾಡಲು ಸಾಮಾಜಿಕ ಅಂತರ ಸುಚ್ಚಿತ್ವದ ಕಾಪಾಡಿಕೊಳ್ಳುವಂತೆ ಮನವಿ ಮಾಡಲಾಯಿತ್ತು. ಈ ಮಾಸ್ಕ್ ವಿತರಣಾ ಸಮಯದಲ್ಲಿ ಸಂಯುಕ್ತ ಸಹಕಾರಿಯ ಜಿಲ್ಲಾ ಸಂಯೋಜಕರಾದ ವೀರಶಟ್ಟಿ ಕೆ, ರವಿ, ಸಹಕಾರಿಯ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ವಿಜಯಪುರ :** ದಿ. ಜುಮನಾಳ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಜುಮನಾಳ ಸದರಿ ಸಹಕಾರಿಯಿಂದ ಕೋವೀಡ್-19 ಲಾಕ್‌ಡೌನ್ ಸಮಯದಲ್ಲಿ ಬಡಕೂಲಿ ಕಾರ್ಮಿಕರಿಗೆ, ನಿರಾಶ್ರಿತರಿಗೆ ಹಾಗೂ ನಮ್ಮ ಗ್ರಾಮದ 60 ಕುಟುಂಬಗಳಿಗೆ ದಿನ ನಿತ್ಯದ ಆಹಾರ ಸಾಮಾಗ್ರಿಗಳನ್ನು ಹಾಗೂ 500 ಮಾಸ್ಕಗಳನ್ನು ವಿತರಿಸಲಾಯಿತು ಹಾಗೂ ಆಶಾ ಕಾರ್ಯರ್ತಕರ್ತರು, ವೈದ್ಯರು, ಪೋಲೀಸ್ ಸಿಬ್ಬಂದಿ, ಪಂಚಾಯತ್ ಸ್ವಚ್ಛತಾ ಸಿಬ್ಬಂದಿಗಳಿಗೆ ರೂ. 1000 ಹಾಗೂ ಎನ್ 95 ಮಾಸ್ಕ್ ಹಾಗೂ ಹ್ಯಾಂಡ್‌ಗ್ಲೋಸ್ ಜೊತೆಗೆ ಶಾಲು ಓದಿಸಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಯಮನಪ್ಪ ಸಾತಿಹಾಳ ಹಾಗೂ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.

**ಸಿರವಾರ:** ವಿವೇಕ್ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿರವಾರ ಸಹಕಾರಿಯಿಂದ ಹಮ್ಮಿಕೊಂಡಿದ್ದ ದೇಶದ್ಯಾಂತ ಕೊರೋನ ಲಾಕ್‌ಡೌನ್ ನಿಂದಾಗಿ ದೇಶದ ಜನರ ಆರೋಗ್ಯ, ಜೀವ ರಕ್ಷಿಸುವಲ್ಲಿ ಮುಖ್ಯಪಾತ್ರ ವಹಿಸಿದ ಪೋಲಿಸ್ ಇಲಾಖೆಯವರಿಗೆ, ಆರೋಗ್ಯ ಇಲಾಖೆ ಸಿಬ್ಬಂದಿ ವರ್ಗದವರಿಗೆ, ರೋಗಿಗಳಿಗೆ, ಹಾಗೂ ಪೌರಕಾರ್ಮಿಕರಿಗೆ, ನಿರಾಶ್ರಿತರಿಗೆ ಆಹಾರ ಪಾಕೀಟುಗಳನ್ನು ವಿತರಣೆ ಮಾಡಲಾಯಿತು.



**ಬೆಳಗಾವಿ:** ಶ್ರೀ ದುರದುಂಡೇಶ್ವರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ದುರದುಂಡಿ ವತಿಯಿಂದ 6 ಜನ ಆಶಾ ಕಾರ್ಯಕರ್ತೆಯರಿಗೆ ಪ್ರೋತ್ಸಾಹ ಧನ ನೀಡಿ ಗೌರವಿಸಲಾಯಿತು.



**ಬಳ್ಳಾರಿ:** ದಿನಾಂಕ 20.03.2020 ರಂದು ಶ್ರೀ ವಿಷ್ಣುವಿಲಾಸ್ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ, ಸಿರುಗುಪ್ಪ ಬಳ್ಳಾರಿ ಜಿಲ್ಲೆ ಕೋವಿಡ್–19 ಲಾಕ್‌ಡೌನ್ ಸಮಯದಲ್ಲಿ ಸಾಮಾಜಿಕ ಕಾರ್ಯಚಟುವಟಿಕೆಯನ್ನು ಸಹಕಾರಿ ವತಿಯಿಂದ ಸಿರುಗುಪ್ಪ ತಾಲ್ಲೂಕ ತರಕಾರಿ ಮಾರುಕಟ್ಟೆಯ ವ್ಯಾಪಾರಿಗಳಿಗೆ ಉಚಿತ ಮಾಸ್ಕ್ ಮತ್ತು ಕೊರೋನಾ ವೈರಸ್ ಜನಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ತರಕಾರಿ ಮಾರುಕಟ್ಟೆಯ ವ್ಯಾಪಾರಿಗಳಿಗೆ ಉಚಿತ ಮಾಸ್ಕ್‌ಯನ್ನು ಸಹಕಾರಿಯ ನಿರ್ದೇಶಕರು ಮತ್ತು ಸಿಬ್ಬಂದಿ ಮತ್ತು ಸದಸ್ಯರು ವಿತರಿಸಿದರು.




**ಬೋರಗಾಂವ:** ಶ್ರೀ ಅರಿಹಂತ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ,. ಬೋರಗಾಂವ ಸಹಕಾರಿಯ ಅಧ್ಯಕ್ಷರಾದ ಶ್ರೀ ರಾವಸಾಹೇಬ ಪಾಟೀಲ ಹಾಗೂ ಆಡಳಿತ ಮಂಡಳಿ ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಅಶೋಕ ಬಂಕಾಪುರೆ ಮತ್ತು ಸಿಬ್ಬಂದಿ ವರ್ಗದವರಿಂದ ಚಿಕ್ಕೋಡಿಯ ಸಹಕಾರಿ ಸಂಘಗಳ ಸಹಾಯಕ ನಿಬಂಧಕರಾದ ಬಿ.ಎಸ್ ಮಂಟೂರವರ ಸಮ್ಮುಖದಲ್ಲಿ ನಡೆದ ಕಾರ್ಯಕ್ರಮದಲ್ಲಿ ಬೋರಗಾಂವದ 17 ಜನ ಆಶಾ ಕಾರ್ಯಕರ್ತೆಯರಿಗೆ ಪ್ರತಿಯೊಬ್ಬರಿಗೂ 3000 ರಂತೆ ಒಟ್ಟು 51,000 ಮೊತ್ತದ ಪ್ರೋತ್ಸಾಹ ಧನ ಚೆಕ್ ನೀಡಿ ಗೌರವಿಸಲಾಯಿತು.



**ಬೆಳಗಾವಿ :** ಶ್ರೀ ಮಹಾಲಕ್ಷ್ಮೀ ಪತ್ತಿನ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ ಸಹಕಾರಿಯಿಂದ 2 ಜನ ಆಶಾ ಕಾರ್ಯಕರ್ತೆಯರಿಗೆ ತಲಾ 3,000 ಸಾವಿರದಂತೆ ಒಟ್ಟು 6,000 ಮೊತ್ತದ ಗೌರವ ಧನದ ಚೆಕ್ ನೀಡಿ ಗೌರವಿಸಲಾಯಿತು.



**ಬೆಳಗಾವಿ:** ಶ್ರೀ ಮಲ್ಲಿಕಾರ್ಜುನ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ ಅಥಣಿ ಸಹಕಾರಿಯಿಂದ 10 ಜನ ಆಶಾ ಕಾರ್ಯಕರ್ತೆಯರಿಗೆ ತಲಾ 3,000 ಸಾವಿರದಂತೆ ಒಟ್ಟು 30,000 ಮೊತ್ತದ ಪ್ರೋತ್ಸಾಹ ಧನದ ಚೆಕ್ ನೀಡಿ ಗೌರವಿಸಲಾಯಿತು.



**ಬೆಳಗಾವಿ :** ಹುಕ್ಕೇರಿ ಬಸವೇಶ್ವರ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ನಿ,. ಹುಕ್ಕೇರಿ ವತಿಯಿಂದ ಕೋವಿಡ್–19 ಲಾಕ್‌ಡೌನ್ ಸಮಯದಲ್ಲಿ ಸಂಕಷ್ಟಕ್ಕೆ ಒಳಗಾದ ಜನರಿಗೆ ಹಣ್ಣು ಹಂಪಲಗಳನ್ನು ವಿತರಣೆ ಮಾಡುವುದರ ಮೂಲಕ ಸಹಾಯ ಮಾಡಲಾಯಿತು.




**ಬೆಳಗಾವಿ :** ಶ್ರೀ ಮಹಿಳಾ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೆಳಗಾವಿ ಸಹಕಾರಿಯಿಂದ 10 ಜನ ಆಶಾ ಕಾರ್ಯಕರ್ತರಿಗೆ ತಲಾ ರೂ. 3000/– ದಂತೆ ಒಟ್ಟು 30.000/– ಚೆಕ್ ನೀಡಿ ಗೌರವಿಸಲಾಯಿತು.



**ಬೈಂದೂರು:** ಶ್ರೀ ರಾಮ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್‌ನಿಂದ ಬೈಂದೂರು ಭಾಗದ ಗೂಡ್ಸ್ ರಿಕ್ಷಾ ಚಾಲಕರಿಗೆ ತಹಶಿಲ್ದಾರ್ ಬಸಪ್ಪ ಪೂಜಾರ್ ಇವರು ಆಹಾರ ಸಾಮಾಗ್ರಿಗಳ ಕಿಟ್ ವಿತರಿಸಲಾಯಿತು ಹಾಗೂ ಬೈಂದೂರು ಸಮುದಾಯ ಆರೋಗ್ಯ ಕೇಂದ್ರದ ನರ್ಸ್‌ಗಳು ಹಾಗೂ ವಿವಿಧ ದರ್ಜೆ ನೌಕರರಿಗೆ ಸಂಸ್ಥೆಯ ಅಧ್ಯಕ್ಷ ಎಸ್. ರಾಜು ಪೂಜಾರಿ ಇವರು ಆಹಾರ ಸಾಮಾಗ್ರಿಗಳ ಕಿಟ್ ವಿತರಿಸಿದರು. ಸಹಕಾರಿ ಅಧ್ಯಕ್ಷರು ಮಾತನಾಡಿ ಕೋರೋನಾದಂತಹ ಮಾರಕ ಖಾಯಿಲೆಯನ್ನು ತಡೆಗಟ್ಟುವಲ್ಲಿ ಆರೋಗ್ಯ ಸಿಬ್ಬಂದಿಗಳ ಶ್ರಮ ದೊಡ್ಡದಿದೆ. ಸರಕಾರದೊಂದಿಗೆ ಅವಿರತವಾಗಿ ಸೇವೆಯಲ್ಲಿ ತೊಡಗಿಕೊಂಡು ಜನರನ್ನು ಸುರಕ್ಷಿತವಾಗಿಡುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿರುತ್ತಾರೆ.



**ಇಂಗಳಿ :** ಶ್ರೀ ಮಹಾಲಕ್ಷ್ಮಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ ಹೊಸ ಇಂಗಳಿ ಸಹಕಾರಿಯ ಆಡಳಿತ ಮಂಡಳಿ ಹಾಗೂ ಸಿಬ್ಬಂದಿಗಳ ವತಿಯಿಂದ ಆಶಾ ಕಾರ್ಯಕರ್ತೆಯರಿಗೆ 3000/– ರೂಪಾಯಿ ಮೊತ್ತದ ಪ್ರೋತ್ಸಾಹ ಧನದ ಚೆಕ್ ನೀಡಿ ಗೌರವಿಸಲಾಯಿತು.



ಲಕ್ಷ್ಮೀ ಕ್ರೆಡಿಟ್ ಸೌಹಾರ್ದ ಸಹಕಾರಿ ಮಾಂಜರಿ, ಶಿವಾಜಿ ಕ್ರೆಡಿಟ್ ಸೌಹಾರ್ದ ಸಹಕಾರಿ ಮಾಂಜರಿ, ಶಾಂತಿಸಾಗರ ಸೌಹಾರ್ದ ಸಹಕಾರಿ ಮಾಂಜರಿ, ಸಮ್ಮೇದ ಸೌಹಾರ್ದ ಸಹಕಾರಿ ಮಾಂಜರಿ ಸಹಕಾರಿಗಳು ಆಶಾ ಕಾರ್ಯಕರ್ತೆಯರಿಗೆ ಪ್ರೋತ್ಸಾಹ ಧನದ ಚೆಕ್ ನೀಡಲಾಯಿತು.



**ಬೆಳಗಾವಿ:** ದಿನಾಂಕ 01–06–2020ರಂದು ಬೆಳಗಾವಿ ಪ್ರಾಂತೀಯ ಕಛೇರಿಯಲ್ಲಿ ಶಿವಲಿಂಗ ಸೌಹಾರ್ದ ಸಹಕಾರಿಯಿಂದ ಆಶಾ ಕಾರ್ಯಕರ್ತೆಯಾದ ಶ್ರೀಮತಿ ಭಿಮಾಂಬಿಕಾ ಇವರಿಗೆ 3000/– ರೂ. ಗಳ ಚೆಕನ್ನು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ ಹಾಗೂ ಶ್ರೀ ಶಂಕರ್, ಸಿಡಿಒ ಬೆಳಗಾವಿ ಇವರಿಂದ ವಿತರಿಸಲಾಯಿತು. ಅದೇ 0 0ರೀತಿ ಶ್ರೀ ಅಹಿಂಸಾ ಸಹಕಾರಿಯಿಂದ ಶ್ರೀಮತಿ ಅಂಜನಾ ಇವರಿಗೆ ರೂ.3000 ಹಾಗೂ ಮಂಗೈ ಸಹಕಾರಿಯಿಂದ ಆಶಾ ಕಾರ್ಯಕರ್ತೆಗೆ ರೂ. 3000 ಗಳ ಪ್ರೋತ್ಸಾಹ ಧನ ನೀಡಿ ಗೌರವಿಸಲಾಯಿತು



**ಪಾವಗಡ:** ದಿನಾಂಕ 21.04.2020ರಂದು ಪಾವಗಡ ನಗರದ ಆರ್ಥಿಕವಾಗಿ ದುರ್ಬಲ, ಅಸಹಾಯಕ ಕುಟುಂಬಗಳಿಗೆ ಕರೋನಾ ಹಿನ್ನೆಲೆಯಲ್ಲಿ ಯಾವುದೇ ಸೌಲಭ್ಯಗಳು ಸಿಗದೇ ಅತ್ಯಂತ ತೊಂದರೆಯಲ್ಲಿದ್ದ ಒಟ್ಟು 70 ಕುಟುಂಬಗಳಿಗೆ ಶ್ರೀಮಾತಾ ವಿವಿದೋದ್ದೇಶ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ ಇವರಿಂದ ದಿನಬಳಕೆಯ ವಸ್ತುಗಳು ಮತ್ತು ದಿನಸಿಯನ್ನು ವಿತರಿಸಲಾಯಿತು.



**ಕಮತನೂರ:** ದಿನಾಂಕ 28.05.2020ರಂದು ಶ್ರೀ ಬಸವೇಶ್ವರ ಅ. ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಕಮತನೂರ ಸಹಕಾರಿಯಿಂದ ಆಶಾ ಕಾರ್ಯಕರ್ತೆ–ರಿಗೆ ಗೌರವ ಧನ ನೀಡಲಾಯಿತು.



**ಬೆಲ್ಲದ ಬಾಗೇವಾಡಿ:** ದಿನಾಂಕ 28.05.2020 ರಂದು ಆದಿನಾಥ ವಿವಿಧ ಉದ್ದೇಶ ಸೌಹಾರ್ದ ಸಹಕಾರಿ ನಿ. ಬೆಲ್ಲದ ಬಾಗೇವಾಡಿ ಸಹಕಾರಿ ವತಿಯಿಂದ ಆಶಾ ಕಾರ್ಯಕರ್ತರಿಗೆ ಕೋವಿಡ್-19 ಗೌರವ ಧನ ನೀಡಿ ಅಭಿನಂದಿಸಿದರು.



**ಬೆಳಗಾವಿ:** ಕಟಕೋಳ ಸಿದ್ರಾಯಜ್ಜನವರ ಸೌಹಾರ್ದ ಸಹಕಾರಿ ನಿ., ಸಹಕಾರಿಯಿಂದ ತ್ರಿವಿಧ ದಾಸೋಹಿ ಕಟಕೋಳ ಸಿದ್ರಾಯಜ್ಜನವರ 3ನೇ ವರ್ಷದ ಪುಣ್ಯಾರಾದನೆ ನಿಮಿತ್ಯ ಕೋವಿಡ್-19 ಹಗಲಿರಳು ಶ್ರಮಿಸುತ್ತಿರುವ ಪೋಲೀಸ್ ಇಲಾಖೆಯ ಸಿಬ್ಬಂದಿಗೆ ಊಟದ ವ್ಯವಸ್ಥೆಯನ್ನು ಮಾಡಲಾಯಿತು. ಈ ಸಂದರ್ಭದಲ್ಲಿ ಯರಗಟ್ಟಿ ಠಾಣೆಯ ಎಎಸ್ಐ ಮಲ್ಲೂರ ಹಾಗೂ ಪೋಲೀಸ್ ಸಿಬ್ಬಂದಿ ಉಪಸ್ಥಿತರಿದ್ದರು.



**ಧಾರವಾಡ:** ಮಿಲ್ಲತ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಧಾರವಾಡ ಸದರಿ ಸಹಕಾರಿ ವತಿಯಿಂದ ಕೋವೀಡ್-19 ಲಾಕ್‌ಡೌನ್ ಸಮಯದಲ್ಲಿ ರೂ. 4,00,000/- ಮೌಲ್ಯದ ಆಹಾರಧಾನ್ಯದ ಕಿಟ್‌ಗಳನ್ನು 510 ಫಲಾನುಭವಿಗಳಿಗೆ ವಿತರಣೆ ಮಾಡಲಾಯಿತು.

---

**ಬೆಳಗಾವಿ :** ಶ್ರೀ ಮಲ್ಲಿಕಾರ್ಜುನ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ ಬೆನಾಡಿ ಸಹಕಾರಿಯಿಂದ 2 ಜನ ಆಶಾ ಕಾರ್ಯಕರ್ತೆಯರಿಗೆ ತಲಾ 3,000 ಸಾವಿರದಂತೆ ಒಟ್ಟು 6,000 ಮೊತ್ತದ ಗೌರವ ಧನದ ಚೆಕ್ ನೀಡಿ ಗೌರವಿಸಲಾಯಿತು.



**ಅಂಕೋಲಾ:** ಶ್ರೀ ರಾಮ ಪರಿಸರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಅಂಕೋಲಾ ಸದರಿ ಸಹಕಾರಿ ವತಿಯಿಂದ ಕೋವೀಡ್-19 ಲಾಕ್‌ಡೌನ್ ಸಮಯದಲ್ಲಿ ಅಂಕೋಲಾ ತಾಲ್ಲೂಕಿನ 114 ಅಶಾಕಾರ್ಯಕರ್ತರಿಗೆ ರೂ. 1000/- ಗೌರವಧನ ವಿತರಣೆ ಮಾಡಲಾಯಿತು ಹಾಗೂ 500 ಜನರಿಗೆ ಮಾಸ್ಕ್ ಮತ್ತು ಸಾನಿಟೈಸರ್ ವಿತರಿಸಲಾಯಿತು ಮತ್ತು 30,000/- ರೂಗಳ ಔಷಧಿಯನ್ನು ಬಡವರಿಗೆ ವಿತರಿಸಲಾಯಿತು.



**ಶಿವಮೊಗ್ಗ :** ಬಲಿಜ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ ಶಿವಮೊಗ್ಗ ಸದರಿ ಸಹಕಾರಿಯ ಮಾಜಿ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರಾದ ಪಿ ರಘುಕುಮಾರ್ ರವರು ಕೋವಿಡ್-19 ಲಾಕ್‌ಡೌನ್ ಸಮಯದಲ್ಲಿ ಸಹಕಾರಿಯ ಪರವಾಗಿ ತಮ್ಮ ಸ್ವಂತ ಖರ್ಚಿನಿಂದ ದಿನಾಂಕ 02-05-2020 ರ ಶನಿವಾರದಂದು ಸಹಕಾರಿಯ ಸದಸ್ಯರುಗಳಲ್ಲಿ ಬಡ ಕುಟುಂಬ ವರ್ಗದ 50 ಜನರಿಗೆ ದಿನಸಿ ಪದಾರ್ಥಗಳನ್ನು ವಿತರಿಸಿದರು.



**ಬೆಳಗಾವಿ :** ದಿನಾಂಕ 27-05-20200 ರಂದು ಬಸವೇಶ್ವರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ, ಬೈಲಹೊಂಗಲ ಇದರ ಅಧ್ಯಕ್ಷರಾದ ಶ್ರೀ ಬಿ ಎಸ್ ಕಿವಡಸಣ್ಣವರ ಇವರು ಕೋರೋನಾ ವಾರಿಯರ ಆಶಾ ಕಾರ್ಯಕರ್ತೆ ಶ್ರೀಮತಿ ಮೀನಾಕ್ಷಿ ಬಸಯ್ಯ ಹೀರೇಮಠ ಇವರಿಗೆ ರೂ. 3000/- ಸಹಾಯಧನದ ಚೆಕ್ಕನ್ನು ನೆಗಿನಹಾಳ ಶಾಖೆಯಲ್ಲಿ ನೀಡಿದರು.

# ಕೋರೊನಾ ವೈರಸ್ (ಕೋವೀಡ್-19) ವಿರುದ್ಧ ಹೋರಾಡಲು ರಾಜ್ಯದ ಸೌಹಾರ್ದ ಸಹಕಾರಿಗಳ ವತಿಯಿಂದ ಪ್ರಧಾನ ಮಂತ್ರಿ ಹಾಗೂ ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ ನೀಡಿರುವ ಧೇಣಿಗೆ



**ಪುತ್ತೂರು :** ಪ್ರಸ್ತುತ ಜಾಗತಿಕವಾಗಿ ಹಬ್ಬಿರುವ ಕೋವಿಡ್–19 ಕೊರೊನಾ ವೈರಸ್ ಪರಿಣಾಮದಿಂದಾಗಿ ಲಾಕ್‌ಡೌನ್ ಸಮಸ್ಯೆಯಿಂದ ಸಂಕಷ್ಟಕ್ಕೀಡಾಗಿರುವ ಜನರಿಗೆ ಟ್ರಸ್ಟ್ ವತಿಯಿಂದ ಆಹಾರ ಸಾಮಾಗ್ರಿಗಳ ಕಿಟ್‌ಗಳನ್ನು ವಿತರಿಸಿದ್ದು. 2,500 ಮಾಸ್ಕ್‌ಗಳನ್ನು, 5 ಬಗೆಯ ತರಕಾರಿ ಬೀಜಗಳ 600 ಪೊಟ್ಟಣಗಳನ್ನು ವಿತರಿಸಲಾಗಿದೆ.

ಕೇಂದ್ರ ಮತ್ತು ರಾಜ್ಯ ಸರಕಾರಗಳು ಪ್ರಸ್ತುತ ಪರಿಸ್ಥಿತಿಯನ್ನು ಸಮರ್ಥವಾಗಿ ನಿಭಾಯಿಸುವ ನಿಟ್ಟಿನಲ್ಲಿ ಹಲವಾರು ಕಾರ್ಯಸೂಚಿಗಳು ಹಾಗೂ ನಿರ್ದೇಶನಗಳನ್ನು ನೀಡುವುದರೊಂದಿಗೆ "ಲಾಕ್‌ಡೌನ್, ಸೀಲ್‌ಡೌನ್, ಕ್ವಾರಂಟೈನ್" ನಂತಹ ಮುಂಜಾಗ್ರತಾ ಕಾರ್ಯಗಳನ್ನೂ ಮಾಡುತ್ತಿದೆ. ಇದರ ಪರಿಣಾಮವಾಗಿ ಒಂದೆಡೆ ಉತ್ತಮ ಆರೋಗ್ಯ ವ್ಯವಸ್ಥೆ ರೂಪುಗೊಳ್ಳುತ್ತಿದ್ದರೆ ಮತ್ತೊಂದೆಡೆ ದೇಶದ ಆರ್ಥಿಕ ವ್ಯವಸ್ಥೆಯ ಮೇಲೆ ನಕಾರಾತ್ಮಕ ಪರಿಣಾಮ ಉಂಟಾಗುತ್ತಿದ್ದು. ಈ ಸಂದರ್ಭದಲ್ಲಿ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ (ರಿ.) ಪುತ್ತೂರು ಇದರ ವತಿಯಿಂದ ರೂ. 50,000/– ದೇಣಿಗೆಯನ್ನು ಪ್ರಧಾನ ಮಂತ್ರಿ ಪರಿಹಾರ ನಿಧಿಗೆ ಹಾಗೂ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯಿಂದ ರೂ. 50,000/– ದೇಣಿಗೆಯನ್ನು ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ನೀಡಲಾಯಿತು. ಈ ಮೊತ್ತವನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್ ಆರ್ ಸತೀಶ್ಚಂದ್ರರವರು ಪುತ್ತೂರಿನ ಶಾಸಕರಾದ ಶ್ರೀ ಸಂಜೀವ ಮಠಂದೂರು ಹಾಗೂ ಪುತ್ತೂರು ಸಹಾಯಕ ಆಯುಕ್ತರಿಗೆ ನೀಡಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಪ್ರಧಾನ ವ್ಯವಸ್ಥಾಪಕರಾದ ಶ್ರೀ ವಸಂತ್ ಎ ಉಪಸ್ಥಿತರಿದ್ದರು.



**ಬೆಂಗಳೂರು:** ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬೆಂಗಳೂರು ಸದರಿ ಸಹಕಾರಿ ವತಿಯಿಂದ ಕೋವೀಡ್–19 ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ರೂ. 5 ಲಕ್ಷ ಡಿ.ಡಿಯನ್ನು ಸಹಕಾರ ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್ ಇವರಿಗೆ ಸಹಕಾರಿಯ ಅಧ್ಯಕ್ಷರಾದ ಶ್ರೀ ಸದಾಶಿವರೆಡ್ಡಿ ಇವರು ನೀಡಿದರು ಹಾಗೂ ಸಹಕಾರಿಯ ಹಿರಿಯ ನಾಗರಿಕರಿಗೆ ಹಾಗೂ ವಿಕಲಚೇತನರಿಗೆ ನೀಡುತ್ತಿರುವ ಡೋರ್ ಸ್ಟೆಪ್ ಬ್ಯಾಂಕಿಂಗ್ ಸೇವೆಯನ್ನು ಸಹಕಾರಿ ಸಚಿವರು ಶ್ಲಾಘಿಸಿದರು.



**ಹಾವೇರಿ:** ಶ್ರೀ ಪುಟ್ಟರಾಜ ಗವಾಯಿ–ಸಚೇತನ ವಿವಿದ್ದೋದ್ದೇಶಗಳ ಸೌಹಾರ್ದ ಸಹಕಾರಿ ನಿಯಮಿತ ಬಂಕಾಪೂರ ಸದರಿ ಸಹಕಾರಿಯು ಕೋವಿಡ್–19 ಮುಖ್ಯಮಂತ್ರಿಗಳ ಪರಿಹಾರ ನಿಧಿ ಉದಾರ ದೇಣಿಗೆಯಾಗಿ ರೂ. 51500/– ದಿನಾಂಕ 08.05.2020 ಕೆನರಾ ಬ್ಯಾಂಕ ಖಾತೆಯ ಚೆಕ್ ನಂ–700173 ಮೂಲಕ ಸಹಕಾರಿಯ ಅಧ್ಯಕ್ಷರಾದ ಶ್ರೀಯುತ ಹನುಮಂತಪ್ಪ ಯು ವ್ಹಿ, ಸವಣೂರ ತಾಲ್ಲೂಕಾ ಬಿ.ಜೆ.ಪಿ ಅಧ್ಯಕ್ಷರಾದ ಶ್ರೀಯುತ ಗಂಗಾಧರ ಎಮ್ ಬಾಣದ ಹಾಗೂ ಸಹಕಾರಿಯ ನಿರ್ದೇಶಕರಾದ ಡಾ॥ ಆರ್.ಎನ್ ಬೆಂಚಿಹಳ್ಳಿ, ಶ್ರೀ ಸಿದ್ದಪ್ಪ ಎಮ್ ಜಿಗಳಿ, ಶ್ರೀ ಸುಭಾಷಸಗೌಡ ಆರ್ ಪಾಟೀಲ, ಶ್ರೀ ಬಸಯ್ಯ ಜಿ ಈಳಿಗೇರ, ಶ್ರೀಮತಿ ಅನಿತಾ ಎಸ್ ಗಿರಿಯಪ್ಪಗೌಡರ, ಶ್ರೀಮತಿ ಪ್ರೇಮಾ ಎಸ್ ಪಾಪೋಜಿ ಹಾಗೂ ಸಿಬ್ಬಂದಿ ಶ್ರೀಮತಿ ಪೂಜಾ ಎಸ್ ಶಿಗ್ಗಾವಿ ಇವರೆಲ್ಲರ ಉಪಸ್ಥಿತಿಯಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು ಹಾವೇರಿ, ಶ್ರೀಯುತ ಕೃಷ್ಣ ಬಾಜಪೇಯಿ ಇವರ ಮುಖಾಂತರ ನೀಡಲಾಯಿತು.



**ಬೆಳಗಾವಿ:** ಡಾ. ಪ್ರಭಾಕರ ಕೋರೆ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಅಂಕಲಿ ಯವರು ಕೋವಿಡ್–19 ಮುಖ್ಯಮಂತ್ರಿ ಪರಿಹಾರ ನಿಧಿಗೆ 11,00,000/– ರೂ ಮೊತ್ತದ ಚೆಕ್ ನೀಡಿದರು.



**ಬೆಳಗಾವಿ:** ಶ್ರೀ ರಾಮಲಿಂಗೇಶ್ವರ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಸವದತ್ತಿ ಸಹಕಾರಿಯು ಕೊರೊನಾ ವೈರಸ್ ನಿಯಂತ್ರಣಕ್ಕಾಗಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ಹಲವಾರು ರೀತಿಯಲ್ಲಿ ತಮ್ಮ ಕಾರ್ಯಗಳನ್ನು ಕೈಗೊಳ್ಳುತ್ತಿರುವುದು ಶ್ಲಾಘನೀಯವಾಗಿದೆ. ತಮ್ಮ ಜವಾಬ್ದಾರಿಯುತ ಕಾರ್ಯಗಳಿಗೆ ಸಹಕಾರಿಯ ಎಲ್ಲ ಆಡಳಿತ ಮಂಡಳಿಯ ಹಾಗೂ ಸರ್ವ ಸದಸ್ಯರಿಂದ 11,111/–ರೂಗಳ ಪರಿಹಾರ ಚೆಕ್‌ನ್ನು ಕೋವೀಡ್–19 ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ನೀಡಿದರು.

**ಪೋತ್ನಾಳ:** ಶ್ರೀ ಹುಚ್ಚಬುಡ್ಡೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಪೋತ್ನಾಳ ಸಹಕಾರಿ ವತಿಯಿಂದ ಕೋವಿಡ್–19 ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ. ಮಲ್ಲಿಕಾರ್ಜುನ ಗೌಡ ಇವರು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ತಿಮ್ಮಯ್ಯ ಶೆಟ್ಟಿ ಇವರಿಗೆ ರೂ. 21,000/– ಚೆಕ್ ಮೂಲಕ ಧೇಣಿಗೆಯನ್ನು ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ವೆಂಕಟೇಶ ರಾಥೋಡ್ ಮತ್ತು ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಶ್ರೀಕಾಂತ ಜೆ. ಉಪಸ್ಥಿತರಿದ್ದರು.

**ದಾವಣಗೆರೆ:** ಕೊರನಾ ವೈರಸ್ ನಿಂದ ಸಂಕಷ್ಟದಲ್ಲಿ ಸಿಲುಕಿರುವ ಬಡವರಿಗೆ, ನಿರ್ಗತಿಕರಿಗೆ ದಾವಣಗೆರೆ ಜಿಲ್ಲೆಯ ನ್ಯಾಮತಿ ತಾಲ್ಲೂಕಿನ ಶ್ರೀಗಂಧ ಸಹ್ಯಾದ್ರಿ ವಿವಿದೋದ್ದೇಶ ಸೌಹಾರ್ದ ಸಹಕಾರಿಯವರು ನ್ಯಾಮತಿಯಲ್ಲಿರುವ ಅಯ್ಯಪ್ಪ ಸ್ವಾಮಿ ದೇವಸ್ಥಾನದ ವತಿಯಿಂದ ಅಯೋಜಿಸುತ್ತಿರುವ ಉಚಿತ ಆಹಾರ ವ್ಯವಸ್ಥೆಗೆ ಒಂದು ಪ್ಯಾಕೆಟ್ ಅಕ್ಕಿ ಹಾಗೂ 1 ಬಾಕ್ಸ್ ಅಡುಗೆ ಎಣ್ಣೆಯನ್ನು ವಿತರಿಸಿದರು.



**ಚಿತ್ರದುರ್ಗ :** ಶ್ರೀ ಯೋಗಿ ನಾರೇಯಣ ಬಲಿಜ ಸೌಹಾರ್ದ ಸಹಕಾರಿ ನಿ., ಚಿತ್ರದುರ್ಗ ಸಹಕಾರಿ ವತಿಯಿಂದ ಕೋವಿಡ್–19 ಪರಿಹಾರ ನಿಧಿಗೆ ರೂ.10 ಸಾವಿರಗಳ ಚೆಕ್ ಅನ್ನು ಸಂಯುಕ್ತ ಸಹಕಾರಿಗೆ ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಯ, ಸೌಹಾರ್ದ ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜ ರವರ ಮೂಲಕ ನೀಡಲಾಯಿತು.

ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಕೆ. ಎಂ. ಪ್ರಹ್ಲಾದ್ ರವರು, ಉಪಾಧ್ಯಕ್ಷರಾದ ಕೆ. ಮಹಾಂತೇಶ್ ರವರು, ನಿರ್ದೇಶಕರಾದ ಕುಮಾರಸ್ವಾಮಿಯವರು, ಸುರೇಂದ್ರರವರು, ಮಂಜುನಾಥ್ ರವರು, ಮುಖ್ಯ ಕಾರ್ಯ ನಿರ್ವಹಕರಾದ ಶ್ರೀಮತಿ ಕವಿತಾರವರು ಹಾಗೂ ಸಿಬ್ಬಂದಿ ಪೂಜಾ ರವರು ಉಪಸ್ಥಿತರಿದ್ದರು.



**ಬೆಳಗಾವಿ:** ಶ್ರೀ ಮಹಾಲಕ್ಷ್ಮೀ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಭೋಜ ರವರು ಕೋವಿಡ್–19 ಮುಖ್ಯಮಂತ್ರಿ ಪರಿಹಾರ ನಿಧಿಗೆ ಚಿಕ್ಕೋಡಿ ಸಹಕಾರಿಗಳ ಸಹಾಯಕ ನಿಬಂಧಕರಾದ ಮಂಟೂರ ಇವರಿಗೆ 10,000/– ಮೊತ್ತದ ಚೆಕ್ ನೀಡಲಾಯಿತು.



**ಬೆಳಗಾವಿ:** ಶ್ರೀ ನರಸಿಂಹ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ ಯವರು ಕೋವಿಡ್–19 ದಿಂದ ಸಂಕಷ್ಟಕ್ಕೆ ಒಳಗಾದ ಜನರಿಗೆ ಒಂದು ದಿನದ ಆಹಾರ ಪೂರೈಕೆಗಾಗಿ ಚಿಕ್ಕೋಡಿ ಶ್ರೀ ಸಾಯಿ ಸೇವಾ ಪರಿವಾರಕ್ಕೆ 16,000/– ಮೊತ್ತದ ಧನ ಸಹಾಯ ಮಾಡಲಾಯಿತು.



**ಶಿವಮೊಗ್ಗ:** ದಿನಾಂಕ 20.05.2020 ರಂದು ವಿಪ್ರ ವಿವಿದೊದ್ದೇಶ ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ ಸಹಕಾರಿ ವತಿಯಿಂದ ಕೋವಿಡ್–19 ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ ರೂ. 50,000 ಚೆಕ್ಕನ್ನು ಜಿಲ್ಲಾಧಿಕಾರಿಯವರಿಗೆ ನೀಡಲಾಯಿತು ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ನಾರಾಯಣ ಮೂರ್ತಿ, ಉಪಾಧ್ಯಕ್ಷರಾದ ಶ್ರೀ ಗೋಪಾಲ್, ನಿರ್ದೇಶಕರಾದ ಶ್ರೀ ಹರಿಕೃಷ್ಣ ಯು, ಶ್ರೀ ಸಿ ಎಂ ಕುಲಕರ್ಣಿ ಮತ್ತು ಮುಖ್ಯಕಾರ್ಯನಿರ್ವಾಹಕರಾದ ಶ್ರೀಮತಿ ಮಾಲತಿ ಎಂ ಪಿ, ಉಪಸ್ಥಿತರಿದ್ದರು ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರ ಮೂಲಕ ಕೋವೀಡ್–19 ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ರೂ.50,000/– ದೇಣಿಗೆ ನೀಡಲಾಯಿತು.



**ರಾಯಚೂರು:** ರಾಯಚೂರ ನಗರದ ಸೌಹಾರ್ದ ಸಹಕಾರಿಗಳು ಕೋವಿಡ್–19 ಸಲುವಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಆರ್. ತಿಮ್ಮಯ್ಯ ಶೆಟ್ಟಿ ಮತ್ತು ಜಿಲ್ಲಾ ಒಕ್ಕೂಟದ ಅಧ್ಯಕ್ಷರಾದ ಶ್ರೀ ಕೆ ವಿರೂಪಾಕ್ಷಪ್ಪ ಇವರುಗಳಿಗೆ ರೂ. 90000/– ಗಳ ಚೆಕಗಳನ್ನು ನೀಡಲಾಯಿತು.

## ತಿದ್ದುಪಡಿ

ಮೇ 2020ರ ಸ್ವಾಭಿಮಾನಿ ಸಹಕಾರಿ ಪತ್ರಿಕೆಯ ಪುಟ ಸಂಖ್ಯೆ 27ರಲ್ಲಿ ಸುಕೋ ಬ್ಯಾಂಕಿನ ಸಿಬ್ಬಂದಿಗಳಿಗೆ ಆನ್‌ಲೈನ್ ತರಬೇತಿ ಕಾರ್ಯಕ್ರಮದ ರಾಜ್ಯದ 11 ಜಿಲ್ಲೆಗಳಲ್ಲಿ ಇರುವ 28 ಶಾಖೆಗಳಲ್ಲಿ 7ಕ್ಕೂ ಹೆಚ್ಚಿನ ಸಿಬ್ಬಂದಿಗಳು ಭಾಗವಹಿಸಿದರು ಎಂದು ಮುದ್ರಣವಾಗಿತ್ತು ಅದನ್ನು 70ಕ್ಕೂ ಹೆಚ್ಚಿನ ಸಿಬ್ಬಂದಿಗಳೆಂದು ಓದಿಕೊಳ್ಳುವುದು.



**ಬೆಳಗಾವಿ:** ಶ್ರೀ ಓಂ ನಮೋಕಾರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ,. ಸಪ್ತಸಾಗರ ಸಹಕಾರಿಯಿಂದ ಕೋವಿಡ್–19 ದಿಂದ ಸಂಕಷ್ಟಕ್ಕೆ ಒಳಗಾದ ಜನರಿಗೆ ಸಹಾಯವಾಗಲೆಂದು ಮುಖ್ಯಮಂತ್ರಿ ಪರಿಹಾರ ನಿಧಿಗೆ ಚೆಕ್ ಅನ್ನು ಉಪಮುಖ್ಯಮಂತ್ರಿ ಶ್ರೀ ಲಕ್ಷ್ಮಣ ಸವದಿ ಇವರಿಗೆ ನೀಡಲಾಯಿತು.



**ಬೆಳಗಾವಿ:** ಶ್ರೀ ಸಿದ್ಧಿವಿನಾಯಕ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ,. ಚಿಕ್ಕೋಡಿ ಯವರು ಕೋವಿಡ್–19 ದಿಂದ ಸಂಕಷ್ಟಕ್ಕೆ ಒಳಗಾದ ಜನರಿಗೆ ಆಹಾರ ಪೂರೈಕೆಗಾಗಿ ಚಿಕ್ಕೋಡಿಯ ಶ್ರೀ ಸಾಯಿ ಸೇವಾ ಪರಿವಾರ(ರಿ)ಕ್ಕೆ ದೇಣಿಗೆ ನೀಡಲಾಯಿತು.



**ಮೈಸೂರು:** ಮೈಸೂರು ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಮೈಸೂರು ಸಹಕಾರಿಯು ಕರ್ನಾಟಕ ರಾಜ್ಯ ಮುಖ್ಯಮಂತ್ರಿಗಳ ಕೋವಿಡ್–19 ಪರಿಹಾರ ನಿಧಿಗೆ ರೂ. 25,000/– ಗಳನ್ನು ದೇಣಿಗೆಯನ್ನು ನೀಡಲಾಯಿತು.



**ಸಂಕೇಶ್ವರ:** ದಿನಾಂಕ 09.05.2020 ರಂದು ಸಹಕಾರಿ ಧುರೀಣ, ಸಂಕೇಶ್ವರದ ದುರ್ಗಾಮಾತಾ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ. ಸಂಕೇಶ್ವರ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ರಾಜೇಂದ್ರ ಪಾಟೀಲ ಇವರು ಮಹಾಮಾರಿ ಕೊರೊನಾ ಸಾಂಕ್ರಾಮಿಕ ರೋಗ ನಿಯಂತ್ರಿಸಲು ರಾಜ್ಯ ಸರ್ಕಾರದ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ರೂ. ಒಂದು ಲಕ್ಷಗಳ ದೇಣಿಗೆ ಚೆಕ್ ಹುಕ್ಕೇರಿ ತಹಸೀಲ್ದಾರ ಅಶೋಕ ಗುರಾಣಿ ರವರಿಗೆ ಸಲ್ಲಿಸಲಾಯಿತು.



**ಉತ್ತರ ಕನ್ನಡ:** ದಿನಾಂಕ 29.5.2020 ರಂದು ಅಂಬಿಕಾ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ, ಅಂಕೋಲಾ ಸಹಕಾರಿಯ ಅಧ್ಯಕ್ಷರಾದ ಡಿ. ಎನ್. ನಾಯಕ ಇವರು ಕೋವೀಡ್–19 ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಸಂಕಷ್ಟದಲ್ಲಿರುವ ಪಿಗ್ಮಿ ಏಜೆಂಟರಾದ ಪಾಂಡುರಂಗ ವಿ. ನಾಯ್ಕ ಮತ್ತು ಲಕ್ಷ್ಮಿ ಆರ್. ಮಹಾಲೆ ಇವರಿಗೆ ಧನ ಸಹಾಯ ನೀಡಲಾಯಿತು.



**ಬೆಳಗಾವಿ :** ಜೈಜಿನೇಂದ್ರ ಕ್ರೆಡಿಟ್ ಸೌಹಾರ್ದ ಸಹಕಾರಿ ಶಮನೆವಾಡಿ, ಶಮನೆವಾಡಿ ಕ್ರೆಡಿಟ್ ಸೌಹಾರ್ದ ಸಹಕಾರಿ ಶಮನೆವಾಡಿ ಹಾಗೂ ಶ್ರೀ ಪಾರ್ಶ್ವನಾಥ ಕ್ರೆಡಿಟ್ ಸೌಹಾರ್ದ ಸಹಕಾರಿ ಶಮನೆವಾಡಿ ಸಹಕಾರಿಗಳು ಆಶಾ ಕಾರ್ಯಕರ್ತೆಯರಿಗೆ ಪ್ರತಿ ಸೌಹಾರ್ದ ಸಹಕಾರಿಯಿಂದ 3000 ಮೊತ್ತದ ಪ್ರೋತ್ಸಾಹ ಧನದ ಚೆಕ್ ನೀಡಿ ಗೌರವಿಸಲಾಯಿತು.



**ಬೆಳಗಾವಿ:** ದಿನಾಂಕ 29.05.2020ರಂದು ರೈತ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಮಲಿಕವಾಡ ಇವರಿಂದ ಆಶಾ ಕಾರ್ಯಕರ್ತೆಯರಿಗೆ ಸೌಹಾರ್ದ ಸಹಕಾರಿಯಿಂದ ರೂ. 3000/– ಮೊತ್ತದ ಪ್ರೋತ್ಸಾಹ ಧನದ ಚೆಕ್ ನೀಡಿ ಗೌರವಿಸಲಾಯಿತು.



**ಬೆಳಗಾವಿ:** ಶ್ರೀ ಭಾಗ್ಯಲಕ್ಷ್ಮಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೆನಾಡಿ ಸಹಕಾರಿಯು ಇಬ್ಬರು ಆಶಾ ಕಾರ್ಯಕರ್ತೆಯರು ತಲಾ 3,000 ಸಾವಿರದಂತೆ ಒಟ್ಟು 6,000 ಮೊತ್ತದ ಗೌರವ ಧನದ ಚೆಕ್ ನೀಡಿ ಗೌರವಿಸಲಾಯಿತು.



**ಬೆಳಗಾವಿ:** ಶ್ರೀ ಬಸವೇಶ್ವರ ಕ್ರೆಡಿಟ್ ಸೌಹಾರ್ದ ಸಹಕಾರಿ ಟಿ., ಶಿರಗಾವ ಸಹಕಾರಿಯು ಇಬ್ಬರು ಆಶಾ ಕಾರ್ಯಕರ್ತೆಯರು ತಲಾ 3,000 ಸಾವಿರದಂತೆ ಒಟ್ಟು 6,000 ಮೊತ್ತದ ಗೌರವ ಧನದ ಚೆಕ್ ನೀಡಿ ಗೌರವಿಸಲಾಯಿತು.



**ಬೆಳಗಾವಿ :** ಶ್ರೀ ಮಹಾಲಕ್ಷ್ಮಿ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿ ಸಿದನಾಳ ಸಹಕಾರಿ ವತಿಯಿಂದ ಕೋವಿಡ–19 ಲಾಕ್‌ಡೌನ್ ಸಮಯದಲ್ಲಿ ಜನರಿಗೆ ಮಾಸ್ಕ್ ಹಾಗೂ ಸ್ಯಾನಿಟೈಜರ್ ನೀಡಲಾಯಿತು.



**ಬೆಳಗಾವಿ :** ಶ್ರೀ ನವಭಾರತ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಚಿಂಚಲಿ ಸಹಕಾರಿಯು 4 ಜನ ಆಶಾ ಕಾರ್ಯಕರ್ತೆಯರಿಗೆ ತಲಾ 3,000 ಸಾವಿರದಂತೆ ಒಟ್ಟು 12,000 ಮೊತ್ತದ ಗೌರವ ಧನದ ಚೆಕ್ ನೀಡಿ ಗೌರವಿಸಲಾಯಿತು.



**ಬೆಳಗಾವಿ :** ಆಧಾರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ, ಚಿಂಚಲಿ ಸದರಿ ಸಹಕಾರಿಯವರು 2 ಜನ ಆಶಾ ಕಾರ್ಯಕರ್ತೆಯರು ತಲಾ 3,000 ಸಾವಿರದಂತೆ ಒಟ್ಟು 6,000 ಮೊತ್ತದ ಗೌರವ ಧನದ ಚೆಕ್ ನೀಡಿ ಗೌರವಿಸಿರುತ್ತಾರೆ.



**ಬೆಳಗಾವಿ:** ಸ್ವಾಮಿ ವಿವೇಕಾನಂದ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ, ಅಥಣಿ, ಸಹಕಾರಿಯಿಂದ ಮೂರು ಜನ ಆಶಾ ಕಾರ್ಯಕರ್ತೆಯರಿಗೆ ತಲಾ 3000/– ರೂ. ದಂತೆ 9000/– ರೂ.ಗಳ ಗೌರವ ಧನ ವಿತರಿಸಲಾಯಿತು.



**ಬೆಳಗಾವಿ:** ಸಮೃದ್ಧಿ ಕ್ರೆಡಿಟ್ ಸೌಹಾರ್ದ್ ಸಹಕಾರಿ ನಿ. ಉಗಾರ್ ಬಿ.ಕೆ ಸಹಕಾರಿಯಿಂದ ಆಶಾ ಕಾರ್ಯಕರ್ತೆಯರಿಗೆ ರೂ. 3000/– ಮೊತ್ತದ ಪ್ರೋತ್ಸಾಹ ಧನದ ಚೆಕ್ ನೀಡಿ ಗೌರವಿಸಲಾಯಿತು.



**ಬೆಳಗಾವಿ:** ದಿನಾಂಕ 16.05.2020 ರಂದು ಶ್ರೀ ಸಿದ್ದೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿದ್ದಾನಾಳ ಸಹಕಾರಿಯು ಕೋವೀಡ್–19 ಸಮಯದಲ್ಲಿ ಸೇವೆ ಸಲ್ಲಿಸಿದ ವೈದ್ಯರು, ನರ್ಸ್, ಆಶಾ ಕಾರ್ಯಕರ್ತೆಯರಿಗೆ ಪಿಪಿಟಿ ಕೀರ್ಟ್ ಅನ್ನು ವಿತರಿಸಲಾಯಿತು.



**ಬೆಳಗಾವಿ:** ಬಸವ ಪ್ರಸಾದ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ, ಶಿರಗಾಂವ ಸಹಕಾರಿಯಿಂದ ಆಶಾ ಕಾರ್ಯಕರ್ತೆಯರಿಗೆ 3000 ಮೊತ್ತದ ಗೌರವ ಧನದ ಚೆಕ್ ನೀಡಿ ಗೌರವಿಸಲಾಯಿತು.



**ಬೆಳಗಾವಿ:** ಅಂಕೋಲಾ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ, ಅಂಕೋಲಾ ಸಹಕಾರಿಯಿಂದ ಆಶಾ ಕಾರ್ಯಕರ್ತೆಯರಿಗೆ 3000 ಮೊತ್ತದ ಗೌರವ ಧನದ ಚೆಕ್ ನೀಡಿ ಗೌರವಿಸಲಾಯಿತು.



**ಬೆಳಗಾವಿ:** ಮಾರ್ಕಂಡೇಯ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., ಗೊಡಚಿನಮಲ್ಕಿ ಸಹಕಾರಿ ವತಿಯಿಂದ ಮೂರು ಜನ ಆಶಾ ಕಾರ್ಯಕರ್ತೆಯರಿಗೆ ತಲಾ 3000/– ರೂ ದಂತೆ ಒಟ್ಟು 9000/– ರೂ ಗಳ ಪ್ರೋತ್ಸಾಹ ಧನ ಚೆಕ್ ನೀಡಿ ಗೌರವಿಸಲಾಯಿತು.



**ಬೆಳಗಾವಿ:** ದಿನಾಂಕ 30.05.2020 ರಂದು ಶ್ರೀ ರೇಣುಕಾ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ. ಸವದತ್ತಿ ಸಹಕಾರಿಯಿಂದ ಇಬ್ಬರು ಆಶಾ ಕಾರ್ಯಕರ್ತೆಯರಿಗೆ ಸಹಕಾರಿಯ ಅಧ್ಯಕ್ಷರಾದ ಶ್ರೀ ಭೀಮಾ ಕೃಷ್ಣಾ ಕುಂಬಾರ ಹಾಗೂ ಆಡಳಿತ ಮಂಡಳಿ ಸದಸ್ಯರು ರೂ. 6000/– ಮೊತ್ತದ ಪ್ರೋತ್ಸಾಹ ಧನದ ಚೆಕ್ ನೀಡಿ ಗೌರವಿಸಲಾಯಿತು.



**ಬೆಳಗಾವಿ:** ಶ್ರೀ ನರಸಿಂಹ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ ಸಹಕಾರಿಯವರು ಆಶಾ ಕಾರ್ಯಕರ್ತೆಯರಿಗೆ ನೀಡಲು ರೂ. 3000/– ಮೊತ್ತದ ಪ್ರೋತ್ಸಾಹ ಧನದ ಚೆಕ್‌ನ್ನು ಚಿಕ್ಕೋಡಿಯ ಸಹಕಾರಿ ಸಂಘಗಳ ಸಹಾಯಕ ನಿಬಂಧಕರು ಇವರಿಗೆ ಸಲ್ಲಿಸಲಾಯಿತು.



**ಬೆಳಗಾವಿ:** ಶ್ರೀ ಸಿದ್ಧಲಿಂಗ ಸ್ವಾಮೀಜಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ; ಅಥಣಿ ಸಹಕಾರಿಯಿಂದ 2 ಜನ ಆಶಾ ಕಾರ್ಯಕರ್ತೆಯರಿಗೆ ತಲಾ 3,000 ಸಾವಿರದಂತೆ ಒಟ್ಟು 6,000 ಮೊತ್ತದ ಗೌರವ ಧನದ ಚೆಕ್ ನೀಡಿ ಗೌರವಿಸಲಾಯಿತು.

**ಬೆಳಗಾವಿ:** ಜಗಜ್ಯೋತಿ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಧೂಪದಾಳ (ಘಟಪ್ರಭಾ) ಸಹಕಾರಿ ವತಿಯಿಂದ ಕೊರೋನಾ ಸಾಂಕ್ರಾಮಿಕ ರೋಗ ನಿಯಂತ್ರಿಸುವ ಸಲುವಾಗಿ ನೇರವಾಗಿ ಪ್ರಧಾನ ಮಂತ್ರಿಗಳ ಪರಿಹಾರ ನಿಧಿಗೆ ದಿನಾಂಕ 11.05.2020 ರಂದು 50000/–ರೂ ಮೊತ್ತವನ್ನು NEFT ಮೂಲಕ ಸಲ್ಲಿಸಲಾಯಿತು.



**ಬೆಳಗಾವಿ:** ದಿನಾಂಕ 30.05.2020 ರಂದು ಅಥಣಿ ತಾಲೂಕಿನ ಐನಾಪುರ ಗ್ರಾಮದಲ್ಲಿ ಉಪಮುಖ್ಯಮಂತ್ರಿ ಶ್ರೀ ಲಕ್ಷ್ಮಣ ಸವದಿ ಸಮ್ಮುಖದಲ್ಲಿ ಶ್ರೀ ಐನಾಪುರ್ ಗಣೇಶ ಕ್ರೆಡಿಟ್ ಸೌಹಾರ್ದ ಸಹಕಾರಿ ಐನಾಪುರ, ಛತ್ರಪತಿ ಶಿವಾಜಿ ಕ್ರೆಡಿಟ್ ಸೌಹಾರ್ದ ಸಹಕಾರಿ ಐನಾಪುರ್, ಐನಾಪುರ್ ಅನ್ನಪೂರ್ಣೇಶ್ವರಿ ಕ್ರೆಡಿಟ್ ಸೌಹಾರ್ದ ಸಹಕಾರಿ ಐನಾಪುರ್, ಶ್ರೀ ಐನಾಪುರ್ ಧರಿದೇವರ ಕ್ರೆಡಿಟ್ ಸೌಹಾರ್ದ ಸಹಕಾರಿ ಐನಾಪುರ್ ಸಹಕಾರಿಗಳು ಹಾಗೂ ಸಹಕಾರಿ ಸಂಘದ ಆಶ್ರಯದೊಂದಿಗೆ ಆಶಾ ಕಾರ್ಯಕರ್ತೆಯರಿಗೆ ಪ್ರೋತ್ಸಾಹ ಧನದ ಚೆಕ್ ನೀಡಲಾಯಿತು.

ಕೋವಿಡ್–19 ವೈರಸ್ ವಿರುದ್ಧ ಜನರ ರಕ್ಷಣೆಗಾಗಿ ಕಾರ್ಯನಿರ್ವಹಿಸುತ್ತಿರುವ ಆಶಾ ಕಾರ್ಯಕರ್ತೆಯರಿಗೆ ಸೌಹಾರ್ದ ಸಹಕಾ–ರಿಗಳಿಂದ ಹಾಗೂ ಸಹಕಾರಿ ಸಂಘಗಳಿಂದ ಪ್ರತಿಯೊಬ್ಬರಿಗೂ 3000 ಸಾವಿರ ರೂ ಗಳಂತೆ 81 ಜನರಿಗೆ ಚೆಕ್ ವಿತರಣೆ ಮಾಡಲಾಯಿತು. ಸಹಕಾರಿ ಇಲಾಖೆ ಹಾಗೂ ಸಂಯುಕ್ತ ಸಹಕಾರಿ ಸೂಚನೆಯಂತೆ ನಮ್ಮ ಅಥಣಿ ನಗರದ ಎಲ್ಲಾ ಸೌಹಾರ್ದ ಸಹಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಉದಾರ ಮನಸ್ಸಿನಿಂದ ಗೌರವ ಧನ ನೀಡಿ ಗೌರವಿಸಲಾಯಿತು.



**ಬೆಳಗಾವಿ:** ಶ್ರೀ ಕುಮಾರಸ್ವಾಮಿ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿ ನಿಯಮಿತ, ಅಥಣಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ಬುಟಾಳೆಯವರು 2 ಜನ ಆಶಾ ಕಾರ್ಯಕರ್ತೆಯರಿಗೆ ತಲಾ 3,000 ಸಾವಿರದಂತೆ ಒಟ್ಟು 6,000 ಮೊತ್ತದ ಗೌರವ ಧನದ ಚೆಕ್ ನೀಡಿ ಗೌರವಿಸಲಾಯಿತು.

**ಬೆಳಗಾವಿ:** ಶ್ರೀ ಮಹಾತ್ಮಾ ಬಸವೇಶ್ವರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ನಿಪ್ಪಾಣಿ ಯವರು ಕೋವಿಡ್–19 ದಿಂದ ಸಂಕಷ್ಟಕ್ಕೆ ಒಳಗಾದ ಜನರಿಗೆ ಸಹಾಯ ಮಾಡಲು ಮುಖ್ಯಮಂತ್ರಿ ಪರಿಹಾರ ನಿಧಿಗೆ 1,00,000 ಮೊತ್ತವನ್ನು ನೆಫ್ಟ್ ಮೂಲಕ ಪಾವತಿ ಮಾಡಲಾಯಿತು.



**ಬೆಳಗಾವಿ:** ದಿನಾಂಕ 01.06.2020 ರಂದು ಶ್ರೀ ಬನಶಂಕರಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ ಸಹಕಾರಿಯಿಂದ ಆಶಾ ಕಾರ್ಯಕರ್ತೆಯರಿಗೆ ರೂ. 3000/– ಮೊತ್ತದ ಪ್ರೋತ್ಸಾಹ ಧನದ ಚೆಕ್ ನೀಡಿ ಗೌರವಿಸಲಾಯಿತು.



**ಬೆಳಗಾವಿ :** ಎಕ್ಸಂಬಾ ಜಿಜಾಮಾತಾ ಮಹಿಳಾ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ ಎಕ್ಸಂಬಾ ಸಹಕಾರಿ ವತಿಯಿಂದ 2 ಆಶಾ ಕಾರ್ಯಕರ್ತೆ ಇವರಿಗೆ 3000 ಸಹಾಯಧನ ಚೆಕ್ ನೀಡಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಛಾಯಾ ಮಾಹದೇವ ರಾಯಜಾಧವ ಮತ್ತು ಸಂಚಾಲಕ ರಜನಿ ಗಣಪತಿ ಹಜಾರೆ ಉಪಸ್ಥಿತರಿದ್ದರು.



**ಕೊಪ್ಪಳ :** ಕೊಪಣ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಕೊಪ್ಪಳ ಇವರಿಂದ "ಕೋವಿಡ್–19 ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ 25,000/– ರೂ ದೇಣಿಗೆಯನ್ನು ಕೊಪ್ಪಳದ ಮಾನ್ಯ ಜಿಲ್ಲಾಧಿಕಾರಿಗಳಾದ ಮಾನ್ಯ ಶ್ರೀ ಪಿ. ಸುನೀಲ್ ಕುಮಾರ್ ರವರಿಗೆ ದಿನಾಂಕ 04–05–2020 ರಂದು ನೀಡಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಪಂಪಾಪತಿ ಹುಬ್ಬಳ್ಳಿ ಹಾಗೂ ಮಾನ್ಯ ಉಪಾಧ್ಯಕ್ಷರಾದ ಶ್ರೀ ವಿರುಪಾಕ್ಷಗೌಡ ಪಾಟೀಲ್ ರವರು ಸಹಕಾರಿಯ ಸಮಸ್ತ ಆಡಳಿತ ಮಂಡಳಿಯ ಪರವಾಗಿ ಉಪಸ್ಥಿತರಿದ್ದರು.



**ಬೆಳಗಾವಿ:** ಶ್ರೀ ಸಿದ್ಧಿವಿನಾಯಕ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ ಚಿಕ್ಕೋಡಿ ಸಹಕಾರಿಯವರು 2 ಜನ ಆಶಾ ಕಾರ್ಯಕರ್ತೆಯರಿಗೆ ತಲಾ 3,000 ಸಾವಿರದಂತೆ ಒಟ್ಟು 6,000 ಮೊತ್ತದ ಗೌರವ ಧನದ ಚೆಕ್ ನೀಡಿ ಗೌರವಿಸಲಾಯಿತು.



**ಬೆಳಗಾವಿ:** ಶ್ರೀ ಜೈ ಹನುಮಾನ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ ಚಿಕ್ಕೋಡಿ ಸಹಕಾರಿಯವರು ಚಿಕ್ಕೋಡಿ ಸಹಕಾರಿ ಸಂಘಗಳ ಸಹಕಾರಿ ನಿಬಂಧಕರಾದ ಮಂಟೂರ ಇವರ ಸಮ್ಮುಖದಲ್ಲಿ 3 ಜನ ಆಶಾ ಕಾರ್ಯಕರ್ತೆಯರಿಗೆ ತಲಾ 3,000 ಸಾವಿರದಂತೆ ಒಟ್ಟು 9,000 ಮೊತ್ತದ ಗೌರವ ಧನದ ಚೆಕ್ ನೀಡಿ ಗೌರವಿಸಲಾಯಿತು.



**ಕೊಪ್ಪಳ :** ದಿನಾಂಕ 27.05.2020 ರಂದು ಭಗತ್‌ಸಿಂಗ್ ಪತ್ತಿನ ಸೌಹಾರ್ದ ಸಹಕಾರಿ ನಿ., ಕೊಪ್ಪಳ ಸಹಕಾರಿಯು ಕೋವಿಡ್–19 ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ 15,000/– ರೂ ಗಳನ್ನು ದೇಣಿಗೆಯನ್ನು ನೀಡಲಾಯಿತು.



**ಬಳ್ಳಾರಿ :** ಬಳ್ಳಾರಿ ಜಿಲ್ಲೆಯ ಆಯ್ದ 402 ಫ್ರಂಟ್‌ಲೈನ್ ಕೊರೋನಾ ವಾರಿಯರ್ಸ್ ಆದ ಆಶಾ ಕಾರ್ಯಕರ್ತೆಯರಿಗೆ ಜಿಲ್ಲೆಯ ಆಯ್ದ ಸೌಹಾರ್ದ ಸಹಕಾರಿ ಸಂಸ್ಥೆಗಳು ಸರ್ಕಾರದ ಪರವಾಗಿ ತಲಾ ಮೂರು ಸಾವಿರ ರೂಪಾಯಿ ಪ್ರೋತ್ಸಾಹಧನ ನೀಡುತ್ತಿವೆ ಎಂದು ವಿಕಾಸ ಸೌಹಾರ್ದ ಸಹಕಾರಿ ಬ್ಯಾಂಕ್ ಅಧ್ಯಕ್ಷ, ಸೌಹಾರ್ದ ಸಂಯುಕ್ತ ಸಹಕಾರಿ ನಿರ್ದೇಶಕ ವಿಶ್ವನಾಥ್ ಹಿರೇಮಠ್ ಅವರು ತಿಳಿಸಿದ್ದಾರೆ. ಜಿಲ್ಲೆಯ ಆಯ್ದ ಸೌಹಾರ್ದ ಸಹಕಾರಿ ಸಂಸ್ಥೆಗಳು ಬಿಡಿಎಎ ಸಭಾಂಗಣದಲ್ಲಿ ಮಂಗಳವಾರ ಏರ್ಪಡಿಸಿದ್ದ ಕರ್ನಾಟಕ ಸರ್ಕಾರದ ಪರವಾಗಿ ಪ್ರೋತ್ಸಾಹಧನ ವಿತರಣಾ ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಅವರು ಮಾತನಾಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಆರೋಗ್ಯ ಅಧಿಕಾರಿ ಡಾ. ಎಚ್.ಎಲ್. ಜನಾರ್ಧನ್, ಸಹಕಾರಿ ಇಲಾಖೆಯ ಜಂಟಿ ನಿಬಂಧಕ ಗೋಪಾಲ್ ಚೌಹ್ಹಾಣ್, ಸಹಕಾರ ಸಂಘಗಳ ಉಪನಿಬಂಧಕಿ ಡಾ. ಸುನೀತ ಸಿದ್ರಾಮ ಉಪಸ್ಥಿತರಿದ್ದರು.

ಬಳ್ಳಾರಿ ಜಿಲ್ಲೆಯಲ್ಲಿ ಒಟ್ಟು 172 ಸೌಹಾರ್ದ ಸಹಕಾರಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು, ಈ ಪೈಕಿ 32 ಸೌಹಾರ್ದ ಸಹಕಾರಿ ಸಂಸ್ಥೆಗಳು ಒಟ್ಟು ರೂಪಾಯಿ 12,06,000 ಗಳನ್ನು ಜಿಲ್ಲೆಯ ಆಯ್ದ ಆಶಾ ಕಾರ್ಯಕರ್ತೆಯರಿಗೆ ಸರ್ಕಾರದ ಪರವಾಗಿ ಪ್ರೋತ್ಸಾಹಧನ ನೀಡಲಾಯಿತು

## ವಿಶ್ವ ಪರಿಸರ ದಿನಾಚರಣೆ



**ಬಳ್ಳಾರಿ:** ದಿನಾಂಕ 05.06.2020ರಂದು ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಸುಕೋ ಬ್ಯಾಂಕ್ ಕಾಗದ ರಹಿತ 'ವೀಡಿಯೋ ಕರೆಯ ಮೂಲಕ ನೂತನ ಖಾತೆ ತೆರೆಯುವ' ತಂತ್ರಜ್ಞಾನವನ್ನು ದೈನಂದಿನ ವ್ಯವಹಾರದಲ್ಲಿ ಶೀಘ್ರದಲ್ಲಿ ಅಳವಡಿಸಿಕೊಳ್ಳಲಿದೆ ಎಂದು ಬ್ಯಾಂಕ್‌ನ ಅಧ್ಯಕ್ಷ ಮೋಹಿತ್ ಮಸ್ಕಿ ಅವರು ತಿಳಿಸಿದ್ದಾರೆ. ಬಸವೇಶ್ವರ ನಗರದ ಪರಮೇಶ್ವರ ಬಡಾವಣೆಯಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಸಸಿಗಳನ್ನು ನೆಡುವ ಮೂಲಕ ಶುಕ್ರವಾರ ಚಾಲನೆ ನೀಡಿದ ಅವರು, ಸುಕೋ ಬ್ಯಾಂಕ್ ಪರಿಸರ ಸಂರಕ್ಷಣೆಗೆ ಬದ್ಧವಾಗಿದ್ದು, ಕಾಗದ ಬಳಕೆಯನ್ನು ಕಡಿಮೆ ಮಾಡಲು ನೂತನ ತಂತ್ರಜ್ಞಾನವನ್ನು – ಆವಿಷ್ಕಾರಗಳನ್ನು ತ್ವರಿತವಾಗಿ ವ್ಯವಹಾರದಲ್ಲಿ ಅಳವಡಿಸಿಕೊಳ್ಳುತ್ತಿದೆ ಎಂದರು.

ಬಳ್ಳಾರಿಯ ಪರಮೇಶ್ವರ ಬಡಾವಣೆಯ ನಿವಾಸಿ, ನಿವೃತ್ತ ಪ್ರಾಧ್ಯಾಪಕ ಜಿ. ರುದ್ರಮುನಿ ಮತ್ತು ಅವರ ತಂಡ ತಮ್ಮ ಬಡಾವಣೆಯ ರಸ್ತೆಯ ಇಕ್ಕೆಲಗಳಲ್ಲಿ ಸಸಿಗಳನ್ನು ನೆಟ್ಟು, ನೀರುಣಿಸಿ ಪೋಷಣೆ ಮಾಡುತ್ತಿರುವುದು ಅವರ ನಿಸ್ವಾರ್ಥ ಪರಿಸರ ಪ್ರೇಮಕ್ಕೆ ಸಾಕ್ಷಿ. ಜಿ. ರುದ್ರಮುನಿ ಅವರ ಈ ಉತ್ಸಾಹವನ್ನು ಪ್ರೋತ್ಸಾಹಿಸಲಿಕ್ಕಾಗಿ ಸುಕೋ ಬ್ಯಾಂಕ್ ಈ ಬಡಾವಣೆಯಲ್ಲಿ ಸಸಿನೆಟ್ಟು, ಅವರ ಸೇವೆಯನ್ನು ಗೌರವಿಸಿದೆ ಎಂದರು. ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಪರಿಮಳಾಚಾರ್ಯ ಎಸ್. ಅಗ್ನಿಹೋತ್ರಿ ಅವರು ಮಾತನಾಡಿ, ಪ್ರತಿಯೊಬ್ಬರ ಆರೋಗ್ಯಕ್ಕಾಗಿ ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿ ಮತ್ತು ಕರ್ತವ್ಯ ಆಗಬೇಕು ಎಂದರು. ಸುಕೋ ಬ್ಯಾಂಕ್‌ನ ಆಡಳಿತ ಮಂಡಲಿ ಕಾರ್ಯದರ್ಶಿ ವೆಂಕಟೇಶ್‌ರಾವ್ ಕುಲಕರ್ಣಿ ಮತ್ತು ಸಿಬ್ಬಂದಿ ವರ್ಗ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.



**ಚಾಮರಾಜನಗರ :** "ವಿಶ್ವ ಪರಿಸರ ದಿನಾಚರಣೆ" ಅಂಗವಾಗಿ ಮಾರ್ಟಳ್ಳಿ ಸೌಹಾರ್ದ ಸಹಕಾರಿ ನಿ., ಮಾರ್ಟಳ್ಳಿ, ಹನೂರು ತಾ. ಇದರ ಪ್ರವರ್ತಕರು ಕಛೇರಿ ರಸ್ತೆಯಲ್ಲಿ ಸಸಿಗಳನ್ನು ನೆಟ್ಟು ಆಚರಿಸಿದರು.



**ಬೆಳಗಾವಿ :** ಶ್ರೀ ಬಸವಜ್ಯೋತಿ ಸೌಹಾರ್ದ ಸಹಕಾರಿ ನಿಯಮಿತ ಹತ್ತರವಾಟ ಸಹಕಾರಿಯ ಸದಸ್ಯರು, ಆಡಳಿತ ಮಂಡಳಿ ಹಾಗೂ ಸಿಬ್ಬಂದಿಗಳವತಿಯಿಂದ ಆಶಾ ಕಾರ್ಯಕರ್ತೆಯರಿಗೆ 3000/– ರೂಪಾಯಿ ಮೊತ್ತದ ಪ್ರೋತ್ಸಾಹ ಧನದ ಚೆಕ್ ನೀಡಿ ಗೌರವಿಸಲಾಯಿತು.

## ಉದ್ಘಾಟನೆ




**ಬೆಂಗಳೂರು :** ದಿನಾಂಕ 27.05.2020 ರಂದು ಬೆಂಗಳೂರು ನಗರದ ಶ್ರೀ ರಕ್ಷ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ,. ಸಹಕಾರಿಯ ಆನ್‌ಲೈನ್ ಮೂಲಕ ಹಣ ವರ್ಗಾವಣೆ ಕಾರ್ಯಕ್ರಮದ ಉದ್ಘಾಟನಾ ಸಮಾರಂಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ಹಾಗೂ ಮಾಜಿ ಶಾಸಕರಾದ ಶ್ರೀ ರಾಜಶೇಖರ್ ಶಿಲಾವಂತರು ಭಾಗವಹಿಸಿದರು. ಈ ಸಂದರ್ಭದಲ್ಲಿ ಬೆಂಗಳೂರು ನಗರದ ಜಿಲ್ಲಾ ಸಂಯೋಜಕರಾದ ಶ್ರೀ ಅನಿಲ್‌ಕುಮಾರ್ ಎಂ, ರವರು ಉಪಸ್ಥಿತರಿದ್ದರು.

**ಚಾಮರಾಜನಗರ :** ದಿನಾಂಕ 27.5.2020 ರಂದು ಹಿಮವದ್ ಗೋಪಾಲಸ್ವಾಮಿ ಮಹಿಳಾ ರೈತ ಉತ್ಪಾದಕರ ಸೌಹಾರ್ದ ಸಹಕಾರಿ ನಿ., ಗುಂಡ್ಲುಪೇಟೆ ಇದರ ಉದ್ಘಾಟನೆ ಮತ್ತು ಪ್ರಥಮ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆಯನ್ನು ಶ್ರೀಮತಿ ಸಿದ್ದಮ್ಮ ವಹಿಸಿದ್ದರು. ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಶ್ರೀ ರಮೇಶ್, ಓಡಿಪಿ, ಮೈಸೂರು ಹಾಗೂ ಜಿಲ್ಲಾ ಸಂಯೋಜಕರಾದ ಶ್ರೀ ಚಂದ್ರಶೇಖರಯ್ಯ ಇವರು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಸಾಮಾಜಿಕ ಅಂತರವನ್ನು ಪಾಲಿಸಿ, ಸ್ಯಾನಿಟೈಸರ್ ವ್ಯವಸ್ಥೆ ಮಾಡಲಾಯಿತು.

**ಚಾಮರಾಜನಗರ :** ಹನೂರು ತಾಲ್ಲೂಕಿನ ಮಾರ್ಟಳ್ಳಿ ಗ್ರಾಮದಲ್ಲಿ ನೂತನ ಸಹಕಾರಿ ಆದ ಮಾರ್ಟಳ್ಳಿ ಸೌಹಾರ್ದ ಸಹಕಾರಿ ನಿ., ಇದರ ಉದ್ಘಾಟನೆ ಮತ್ತು ಪ್ರಥಮ ಸರ್ವ ಸದಸ್ಯರ ಸಭೆಯ ಉದ್ಘಾಟನೆಯನ್ನು ಶ್ರೀ ದಿನೇಶ್ ಗುಪ್ತಾ ರವರು, ಮಾಜಿ ನಿರ್ದೇಶಕರು, ಕರಾಸೌಸಂಸನಿ., ಬೆಂಗಳೂರು ಇವರು ನೆರವೇರಿಸಿದರು. ಮುಖ್ಯ ಅಥಿತಿಗಳಾಗಿ ಶ್ರೀ ರಾಜೇಂದ್ರ, ಶ್ರೀ ಎಂ. ಚಂದ್ರಶೇಖರಯ್ಯ ಮತ್ತು ಶ್ರೀ ಗಂಗಾಧರ ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ಗಣ್ಯರಿಂದ 'ವಿಶ್ವ ಪರಿಸರ ದಿನಾಚರಣೆ' ಅಂಗವಾಗಿ ಸಸಿಯನ್ನು ನೆಡಲಾಯಿತು.

## ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಆಯ್ಕೆ

### ಉತ್ತರ ಕನ್ನಡ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಯಲ್ಲಾಪುರ, ಉತ್ತರ ಕನ್ನಡ



ಶ್ರೀ ಪ್ರಮೋದ ವಿಘ್ನೇಶ್ವರ ಹೆಗಡೆ
ಅಧ್ಯಕ್ಷರು



ಶ್ರೀ ಕಮಲಾಕರ ವಾಸು ನಾಯಕ
ಉಪಾಧ್ಯಕ್ಷರು

### ಶ್ರೀ ಲಕ್ಷ್ಮೀ ಸರಸ್ವತಿ ಪತ್ತಿನ ಸೌಹಾರ್ದ ಸಹಕಾರಿ ನಿ., ಹೊಸಪೇಟೆ.



ಶ್ರೀ ರಮೇಶ್ ಬಿ. ಹೆಚ್.
ಅಧ್ಯಕ್ಷರು



ಶ್ರೀ ಗೌಳಿ ಕುಮಾರ್ ಸ್ವಾಮಿ
ಉಪಾಧ್ಯಕ್ಷರು

### ಚಿಟಗುಪ್ಪಾ ಪತ್ತಿನ ಸೌಹಾರ್ದ ಸಹಕಾರಿ ನಿ., ಚಿಟಗುಪ್ಪಾ



ಶ್ರೀ ಮಲ್ಲಿಕಾರ್ಜುನ
ಅಧ್ಯಕ್ಷರು



ಶ್ರೀ ಮಹಮ್ಮದ್ ನಜೀರ್ ಆಹ್ಮದ್
ಉಪಾಧ್ಯಕ್ಷರು



**ಬೆಳಗಾವಿ:** ದಿನಾಂಕ 01–06–2020ರಂದು ಶ್ರೀ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಧುಪದಾಳ–ಘಟಪ್ರಭಾ ವತಿಯಿಂದ ಆಶಾ ಕಾರ್ಯಕರ್ತೆಯಾದ ಶ್ರೀಮತಿ ರೂಪಾ ದಯಾನಂದ ಜಿರಳಿ ಸಾ/ಘಟಪ್ರಭಾ ಕೋಡ ಇವರಿಗೆ ರೂ.3000/– ಚೆಕ್ ನೀಡಿ ಗೌರವಿಸಲಾಯಿತು.

# ಸೌಹಾರ್ದ ಸಹಕಾರಿಗಳು ಕೋವಿಡ್–19 ಪ್ರಧಾನ ಮಂತ್ರಿಗಳ ಪರಿಹಾರ ನಿಧಿಗೆ, ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ ನೇರವಾಗಿ ಸಲ್ಲಿಸಿರುವ ಹಾಗೂ ಸಂಯುಕ್ತ ಸಹಕಾರಿ ಮೂಲಕ ಸಲ್ಲಿಸಿರುವ ವಿವರಗಳು.

- ರಾಜ್ಯದ ಸೌಹಾರ್ದ ಸಹಕಾರಿಗಳು ತಾವು ಕೋವಿಡ–19 ಪ್ರಧಾನ ಮಂತ್ರಿಗಳ ಪರಿಹಾರ ನಿಧಿಗೆ, ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ ನೇರವಾಗಿ ಅಥವಾ ಸಂಯುಕ್ತ ಸಹಕಾರಿಗೆ ತಾವು ಕಳುಹಿಸಿದ ಸೌಹಾರ್ದ ಸಹಕಾರಿಗಳ ವಿವರಗಳನ್ನು ಇಲ್ಲಿ ಪ್ರಕಟಿಸಲಾಗಿದೆ. ಈ ನಿಧಿಗೆ ತಾವು ಸಲ್ಲಿಸಿದ ವಿವರಗಳನ್ನು ಕಳುಹಿಸದಿರುವ ಸೌಹಾರ್ದ ಸಹಕಾರಿಗಳು ತಮ್ಮ ವಿವರಗಳನ್ನು ಸಂಯುಕ್ತ ಸಹಕಾರಿಗೆ ಕಳುಹಿಸಿದಲ್ಲಿ ಮುಂದಿನ ಸ್ವಾಭಿಮಾನಿ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.
- ಇನ್ನೂ ತಮ್ಮ ವಂತಿಗೆಯನ್ನು ಕಳುಹಿಸದಿರುವ ಸೌಹಾರ್ದ ಸಹಕಾರಿಗಳು ಸಂಯುಕ್ತ ಸಹಕಾರಿಗೆ ತಮ್ಮ ವಂತಿಗೆಯನ್ನು ಕಳುಹಿಸಿದಲ್ಲಿ ಎಲ್ಲ ಮೊತ್ತವನ್ನು ಕ್ರೋಢೀಕರಿಸಿ ಮಾನ್ಯ ಸಹಕಾರ ಮಂತ್ರಿಗಳ ಮೂಲಕ ಮಾನ್ಯ ಮುಖ್ಯ ಮಂತ್ರಿಗಳಿಗೆ ಸಲ್ಲಿಸಲಾಗುವುದು.

| ಕ್ರ ಸಂ | ಸದಸ್ಯತ್ವ ಸಂಖ್ಯೆ | ಸೌಹಾರ್ದ ಸಹಕಾರಿಗಳ ಹೆಸರು | ಜಿಲ್ಲೆ | ಮೊತ್ತ | ಪರಿಹಾರ ನಿಧಿ |
|---|---|---|---|---|---|
| 1 | RCR-003 | ಮಾನ್ವಿ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ. ಮಾನವಿ | ರಾಯಚೂರು | 2,00,000.00 | ಪ್ರಧಾನ ಮಂತ್ರಿ ಪರಿಹಾರ ನಿಧಿ |
| | | | | 1,00,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 2 | BGM-264 | ಡಾ.ಪ್ರಭಾಕರ ಕೋರೆ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ, ಅಂಕಲಿ | ಬೆಳಗಾವಿ | 11,00,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 3 | RCR-142 | ನಾಗಲಾಂಭಿಕೆ ಪತ್ತಿನ ಸೌಹಾರ್ದ ಸಹಕಾರಿ ನಿ., ಮಾನವಿ | ರಾಯಚೂರು | 3,50,000.00 | ಅಗತ್ಯ ಸಾಮಗ್ರಿಗಳಿಗಾಗಿ |
| 4 | RCR-009 | ಭಮರಂಭ ಪತ್ತಿನ ಸೌಹಾರ್ದ ಸಹಕಾರಿ ನಿ., ಮಸ್ಕಿ | ರಾಯಚೂರು | 1,50,861.00 | ತಹಶಿಲ್ದಾರ |
| 5 | KLR-0011 | ಪಾವಗಡ ಸೌಹಾರ್ದ ಸಹಕಾರಿ ನಿ., | ಕೋಲಾರ | 1,00,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 6 | BGM-0065 | ಶ್ರೀ ದುರ್ಗಾಮಾತ ಕ್ರಡಿಟ್ ಸೌಹಾರ್ದ ಸಹಕಾರಿ ನಿ., ಸಂಕೇಶ್ವರ | ಬೆಳಗಾವಿ | 1,00,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 7 | CTG-002 | ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., | ಚಿತ್ರದುರ್ಗ | 1,00,000.00 | ಸಂಯುಕ್ತ ಸಹಕಾರಿ |
| 8 | DWD-002 | ವಿಜಯಲಕ್ಷ್ಮೀ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., | ಧಾರವಾಡ | 1.15.000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 9 | DWD-001 | ದಿ ಧಾರವಾಡ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ಲಿ., | ಧಾರವಾಡ | 1.00.000.00 | ಸೇವಾ ಭಾರತಿ ಟ್ರಸ್ಟ್ |
| 10 | HVR-037 | ಶ್ರೀ ಪುಟ್ಟರಾಜ ಗವಾಯಿ ಸಚೇತನ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿ ನಿ | ಹಾವೇರಿ | 51,500.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 11 | SMG-016 | ವಿಪ್ರ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., | ಶಿವಮೊಗ್ಗ | 50,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 12 | BGM-0757 | ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ | ಬೆಳಗಾವಿ | 50,000.00 | ಸಾಯಿ ಸೇವಾ ಪರಿವಾರ |
| 13 | RCR-004 | ಗುರು ರಾಮಲಿಂಗೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಮಸ್ಕಿ | ರಾಯಚೂರು | 50,000.00 | ತಹಶಿಲ್ದಾರ |

| | | | | | |
|---|---|---|---|---|---|
| 14 | RCR-055 | ತುಂಗಭದ್ರ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಂಧನೂರು | ರಾಯಚೂರು | 50,000.00 | ಸೌಹಾರ್ದ ಒಕ್ಕೂಟ |
| 15 | RCR-072 | ಚನ್ನಬಸವ ಪತ್ತಿನ ಸೌಹಾರ್ದ ಸಹಕಾರಿ ನಿ., ಮಾನವಿ | ರಾಯಚೂರು | 50,000.00 | ಸಂಯುಕ್ತ ಸಹಕಾರಿ |
| 16 | RCR-095 | ಸಿಂಧು ಕ್ರೆಡಿಟ ಸೌಹಾರ್ದ ಸಹಕಾರಿ ನಿ., ಸಿಂಧನೂರು | ರಾಯಚೂರು | 50,000.00 | ಸೌಹಾರ್ದ ಒಕ್ಕೂಟ |
| 17 | RCR-035 | ವೀರೂಪಾಕ್ಷೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಮಾನವಿ | ರಾಯಚೂರು | 50,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| | | | | 75,000.00 | ಅಗತ್ಯ ಸಾಮಗ್ರಿಗಳಿಗಾಗಿ |
| 18 | UDP-085 | ಸಂಹಿತಾ ಸೌಹಾರ್ದ ಸಹಕಾರಿ ನಿ., ಉಡುಪಿ | ಉಡುಪಿ | 40,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 19 | RCR-0108 | ಪೋತ್ನಾಳ ಪತ್ತಿನ ಸೌಹಾರ್ದ ಸಹಕಾರಿ ನಿ., | ರಾಯಚೂರು | 31,000.00 | ಸಂಯುಕ್ತ ಸಹಕಾರಿ |
| 20 | MYS-0006 | ಮೈಸೂರು ಕ್ರೆಡಿಟ್ ಸೌಹಾರ್ದ ಸಹಕಾರಿ ನಿ. | ಮೈಸೂರು | 25,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 21 | RCR-052 | ಕನ್ನಿಕಾ ಪರಮೇಶ್ವರಿ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಂಧನೂರು | ರಾಯಚೂರು | 25,000.00 | ಸೌಹಾರ್ದ ಒಕ್ಕೂಟ |
| 22 | RCR-073 | ಲಕ್ಷ್ಮಿ ಪತ್ತಿನ ಸೌಹಾರ್ದ ಸಹಕಾರಿ ನಿ., ಮಾನವಿ | ರಾಯಚೂರು | 25,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 23 | RCR-076 | ರೆಡ್ಡರ ಪತ್ತಿನ ಸೌಹಾರ್ದ ಸಹಕಾರಿ ನಿ., ಲಿಂಗಸೂಗುರು | ರಾಯಚೂರು | 25,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 24 | RCR-078 | ಸಾಯಿಚನ್ನಬಸವ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಂಧನೂರು | ರಾಯಚೂರು | 25,000.00 | ಸೌಹಾರ್ದ ಒಕ್ಕೂಟ |
| 25 | RCR-122 | ಶಿವಪ್ರಿಯಾ ಪತ್ತಿನ ಸೌಹಾರ್ದ ಸಹಕಾರಿ ನಿ., ಮಾನವಿ | ರಾಯಚೂರು | 25,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 26 | RCR-151 | ಶ್ರೀ ಗುರು ರಾಘವೇಂದ್ರ ಪತ್ತಿನ ಸೌಹಾರ್ದ ಸಹಕಾರಿ ನಿ., ಮಾನವಿ | ರಾಯಚೂರು | 25,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 27 | RCR-128 | ಶ್ರೀ ಹುಚ್ಚಬುಡ್ಡೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., | ರಾಯಚೂರು | 21,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 28 | RCR-089 | ಮುಕ್ತಾ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಂಧನೂರು | ರಾಯಚೂರು | 20,000.00 | ಸೌಹಾರ್ದ ಒಕ್ಕೂಟ |
| 29 | BGM-072 | ನರಸಿಂಹ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ | ಬೆಳಗಾವಿ | 16,000.00 | ಸಾಯಿ ಸೇವಾ ಪರಿವಾರ |
| 30 | MNG-0040 | ಶ್ರೀ ಶಂಕರ ಭಾರತಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., | ಮೈಸೂರು | 12,000.00 | ಸಂಯುಕ್ತ ಸಹಕಾರಿ |
| 31 | RCR-096 | ಹಾಲಪೂರ ಪತ್ತಿನ ಸೌಹಾರ್ದ ಸಹಕಾರಿ ನಿ., ಮಸ್ಕಿ | ರಾಯಚೂರು | 11,000.00 | ತಹಶಿಲ್ದಾರ |
| 32 | RCR-187 | ಜನನಿ ಶ್ರೀ ಪತ್ತಿನ ಸೌಹಾರ್ದ ಸಹಕಾರಿ ನಿ., ಮಸ್ಕಿ | ರಾಯಚೂರು | 11,000.00 | ತಹಶಿಲ್ದಾರ |
| 33 | SMG-0011 | ಶ್ರೀಗಂಧ ಸೌಹಾರ್ದ ಪತ್ತಿನ ಸಹಕಾರಿ ನಿ., | ಶಿವಮೊಗ್ಗ | 10,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 34 | BGU-338 | ಸಿರಿ ಶಂಕರಿ ಸೌಹಾರ್ದ ಸಹಕಾರಿ ನಿ | ಚಿತ್ರದುರ್ಗ | 10,000.00 | ಸಂಯುಕ್ತ ಸಹಕಾರಿ |
| 35 | CTG-082 | ಶ್ರೀ ಯೋಗಿ ನಾರೇಯಣ ಬಲಿಜ ಸೌಹಾರ್ದ ಸಹಕಾರಿ ನಿ., | ಚಿತ್ರದುರ್ಗ | 10,000.00 | ಸಂಯುಕ್ತ ಸಹಕಾರಿ |
| 36 | BGM-047 | ಶ್ರೀ ಮಹಾಲಕ್ಷ್ಮಿ ಕ್ರೆಡಿಟ್ ಸೌಹಾರ್ದ ಸಹಕಾರಿ ಲಿ., ಭೋಜ | ಬೆಳಗಾವಿ | 10,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 37 | BGM-564 | ಶ್ರೀ ದುರುದುಂಡೇಶ್ವರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ | ಬೆಳಗಾವಿ | 10,000.00 | ಸಂಯುಕ್ತ ಸಹಕಾರಿ |
| 38 | RCR-109 | ಶ್ರೀ ಚಂದೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಹಾಲಪೂರು | ರಾಯಚೂರು | 10,000.00 | ಸೌಹಾರ್ದ ಒಕ್ಕೂಟ |

| | | | | | |
|---|---|---|---|---|---|
| 39 | RCR-169 | ಪಾವಮಾನ ಪತ್ತಿನ ಸೌಹಾರ್ದ ಸಹಕಾರಿ ನಿ., ಮಾನವಿ | ರಾಯಚೂರು | 10,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 40 | RCR-188 | ಹಳ್ಳಿ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ ಸಿಂಧನೂರು | ರಾಯಚೂರು | 10,000.00 | ಸೌಹಾರ್ದ ಒಕ್ಕೂಟ |
| 31 | RCR-212 | ಲಕ್ಷ್ಮಿ ರಂಗನಾಥ ಪತ್ತಿನ ಸೌಹಾರ್ದ ಸಹಕಾರಿ ನಿ., ಮಾನವಿ | ರಾಯಚೂರು | 10,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 42 | UDP-0077 | ಕೊಂಕಣ್ ಕ್ಯಾಥೊಲಿಕ್ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., | ಉಡುಪಿ | 10,000.00 | ಸಂಯುಕ್ತ ಸಹಕಾರಿ |
| 43 | HSN-0001 | ಶ್ರೀ ವಿಘ್ನೇಶ್ವರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., | ಹಾಸನ | 10,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 44 | RCR-050 | ಪೂಜ್ಯ ಶರಣಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಮಸ್ಕಿ | ರಾಯಚೂರು | 11,000.00 | ತಹಶಿಲ್ದಾರ |
| | | | | 10,000.00 | ಸೌಹಾರ್ದ ಒಕ್ಕೂಟ |
| 45 | BGM-0006 | ಶ್ರೀ ಪಂಚಾಚಾರ್ಯ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಸಂಕೇಶ್ವರ | ಬೆಳಗಾವಿ | 5,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 46 | BGM-1003 | ಓಂ ನಮೋಕಾರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಸಪ್ತಸಾಗರ | ಬೆಳಗಾವಿ | 5,000.00 | ಮುಖ್ಯಮಂತ್ರಿ ಪರಿಹಾರ ನಿಧಿ |
| 47 | RCR-014 | ಅಶ್ವಿನಿ ಪತ್ತಿನ ಸೌಹಾರ್ದ ಸಹಕಾರಿ ನಿ., ರಾಯಚೂರು | ರಾಯಚೂರು | 5,000.00 | ಸಂಯುಕ್ತ ಸಹಕಾರಿ |
| 48 | RCR-060 | ರಾಣಿ ಚೆನ್ನಮ್ಮ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಂಧನೂರು | ರಾಯಚೂರು | 5,000.00 | ಸೌಹಾರ್ದ ಒಕ್ಕೂಟ |
| 49 | RCR-084 | ವಿಜಯಮಿತ್ರಾ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಂಧನೂರು | ರಾಯಚೂರು | 5,000.00 | ಸೌಹಾರ್ದ ಒಕ್ಕೂಟ |
| 50 | RCR-093 | ಆಸರೆ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಂಧನೂರು | ರಾಯಚೂರು | 5,000.00 | ಸೌಹಾರ್ದ ಒಕ್ಕೂಟ |
| 51 | RCR-103 | ಶಿವಯೋಗಿ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಂಧನೂರು | ರಾಯಚೂರು | 5,000.00 | ಸೌಹಾರ್ದ ಒಕ್ಕೂಟ |
| 52 | RCR-118 | ಜೀವನಜ್ಯೋತಿ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಂಧನೂರು | ರಾಯಚೂರು | 5,000.00 | ಸೌಹಾರ್ದ ಒಕ್ಕೂಟ |
| 53 | RCR-129 | ಶಿವಚೇತನ ಪತ್ತಿನ ಸೌಹಾರ್ಧ ಸಹಕಾರಿ ನಿ., ಸಿಂಧನೂರು | ರಾಯಚೂರು | 5,000.00 | ಸೌಹಾರ್ದ ಒಕ್ಕೂಟ |
| 54 | RCR-185 | ಸಿಟಿ ಮರ್ಚೆಂಟ್ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಂಧನೂರು | ರಾಯಚೂರು | 5,000.00 | ಸೌಹಾರ್ದ ಒಕ್ಕೂಟ |
| 55 | RCR-197 | ದೆವನಂ ಪ್ರಿಯಾ ಪತ್ತಿನ ಸೌಹಾರ್ದ ಸಹಕಾರಿ ನಿ., ಮಸ್ಕಿ | ರಾಯಚೂರು | 5,000.00 | ತಹಶಿಲ್ದಾರ |
| 56 | RCR-201 | ವಿಜಯ ವಿರಾಟ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಂಧನೂರು | ರಾಯಚೂರು | 5,000.00 | ಸೌಹಾರ್ದ ಒಕ್ಕೂಟ |
| 57 | RCR-231 | ಅಲಯನ್ಸ್ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಂಧನೂರು | ರಾಯಚೂರು | 5,000.00 | ಸೌಹಾರ್ದ ಒಕ್ಕೂಟ |
| 58 | SMG-0019 | ಅಭಯಮ್ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ. | ಶಿವಮೊಗ್ಗ | 5,000.00 | ಸಂಯುಕ್ತ ಸಹಕಾರಿ |
| 59 | UDP-0073 | ಬಾಂಧವ್ಯ ಸೌಹಾರ್ದ ಸಹಕಾರಿ ನಿ., | ಉಡುಪಿ | 5,000.00 | ಸಂಯುಕ್ತ ಸಹಕಾರಿ |
| 60 | KWR-0051 | ಓಂಕಾರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., | ಉತ್ತರ ಕನ್ನಡ | 5,000.00 | ಸಂಯುಕ್ತ ಸಹಕಾರಿ |
| 61 | MYS-0003 | ಶಾರದಾ ಸೌಹಾರ್ದ ಸಹಕಾರಿ ನಿ., | ಮೈಸೂರು | 5,000.00 | ಸಂಯುಕ್ತ ಸಹಕಾರಿ |
| 62 | RCR-087 | ವಾಸವಂಭ ಪತ್ತಿನ ಸೌಹಾರ್ದ ಸಹಕಾರಿ ನಿ, ಸಿಂಧನೂರು | ರಾಯಚೂರು | 4,000.00 | ಸೌಹಾರ್ದ ಒಕ್ಕೂಟ |
| 63 | KPL-0167 | ಶ್ರೀ ಶಿವಕೃಪಾ ಪತ್ತಿನ ಸೌಹಾರ್ದ ಸಹಕಾರಿ ನಿ., ಗಂಗಾವತಿ | ಕೊಪ್ಪಳ | 2,000.00 | ಸಂಯುಕ್ತ ಸಹಕಾರಿ |
| 64 | GDG-0050 | ನೆರವು ಮಹಿಳಾ ಸೌಹಾರ್ದ ಸಹಕಾರಿ ನಿ., ಗದಗ | ಗದಗ | 1,500.00 | ಸಂಯುಕ್ತ ಸಹಕಾರಿ |
| 65 | GLB-0174 | ಶ್ರೀ ಶ್ರೀಶೈಲ ಮಲ್ಲಿಕಾರ್ಜುನ ಸೌಹಾರ್ದ ಸಹಕಾರಿ ನಿ., | ಕಲಬುರಗಿ | 1,000.00 | ಸಂಯುಕ್ತ ಸಹಕಾರಿ |
| 66 | RCR-0224 | ವೀರಶೈವ ವಿಕಾಸ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., | ರಾಯಚೂರು | 1,000.00 | ಸಂಯುಕ್ತ ಸಹಕಾರಿ |

# COVID – 19 : ROLE OF COOPERATIVE SECTOR

- Dr. S.A. Siddhanti

ಡಾ. ಎಸ್. ಎ ಸಿದ್ದಾಂತಿಯವರು ಪ್ರಾಂತೀಯ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ನಿವೃತ್ತ ನಿರ್ದೇಶಕರು, ಶ್ರೀಯುತರು ಇತ್ತೀಚಿಗೆ ಕರ್ನಾಟಕ ರಾಜ್ಯ ಗ್ರಾಮೀಣಾ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಗದಗ ಇವರು ಏರ್ಪಡಿಸಿದ ರಾಷ್ಟ್ರೀಯ ಸೆಮಿನಾರ್ ಇದರ ಪ್ರತಿನಿಧಿಗಳಿಗೆ 12 ಆನ್‌ಲೈನ್ ಉಪನ್ಯಾಸಗಳನ್ನು **covid-19 Role of Cooperative Sector** ನೀಡಿದ ಉಪನ್ಯಾಸದ ವಿವರಗಳನ್ನು ಕ್ರೂಡೀಕರಿಸಿ ಸಹಕಾರಿಗಳಿಗೆ ಈ ಸಂದರ್ಭದಲ್ಲಿ ಇರುವ ಸವಾಲುಗಳನ್ನು ಸಮರ್ಪಕವಾಗಿ ಎದುರಿಸುವ ಸಾಮರ್ಥ್ಯ ಹೇಗೆ ಬಳಸಿಕೊಳ್ಳಬೇಕು ವಿಶ್ಯಾದಾದ್ಯಂತ ಬೇರೆ ಬೇರೆ ಸಹಕಾರ ಸಂಸ್ಥೆಗಳ ಯಾವ ರೀತಿ ಕ್ರಿಯಾ ಯೋಜನೆಯನ್ನು ರೂಪಿಸಿವೆ ಎಂಬುದರ ಬಗ್ಗೆ ಲೇಖನ ರೂಪದಲ್ಲಿ ಸಿದ್ದಪಡಿಸಿರುವುದನ್ನು ಸೌಹಾರ್ದ ಸಹಕಾರಿಗಳ ಅವಗಾಹನೆಗಾಗಿ ಪ್ರಕಟಿಸಲಾಗಿದೆ.

## Back drop

"VASUDHAIVAKUTUMBHAKAM" – Entire world is one family, built in Cooperation in the nature, which is a matter of value of heart and market value. Cooperation implies living together with a sense of brotherhood for the welfare of all.

The present COVID-19 (present virus) has quickly spread around the world and the large number of people have been infected, creating stress and threat to human kind, forced to take `social distancing' measures, demands cooperation among members of the entire world.

The present virus has been testing quality of leadership, sacrifice, arrogance, human concern and attitude among all governments, sectors and members of community. The elements of gender, religion, politics and culture do not matter when it comes to operating cooperatives in the day to-day functioning, which provides platform to all concerned to be bold to face the situations as one family.

The cooperatives had demonstrated in the past that cases of emergency and natural disasters, cooperatives have always been in forefront due to their closeness with their members and communities.

The cooperatives stood firmly along with governments and performed whatever they were asked to do so. They have provided opportunities of development to the communities and never been in conflict with the Governments, since cooperatives observed a code of conduct and adopted in accordance with existing and changing world economies.

The cooperative sector implies neither capitalism nor socialism plays a key role in providing and boosting the team spirit among the members of various communities across the world in the present scenario (COVID-19).

## Role of ICA (International Cooperative Alliance)

ICA established in 1895, is a world network of all type of cooperatives, and has passed successfully through;

- Facing two world wars
- Industrial revolution in Europe
- Great economic depression in 1930
- Changes in colonial rules
- Emergence of new political and economic entities
- Emergence of World Trade regimes

ICA is playing key role in present scenario (COVID-19), by providing information, training, guidance and skills required to face the present virus, in different parts of the world through their technology.

## Role of Cooperatives in facing COVID-19 :

The present COVID-19 has made an attack on humanity, indicates danger as well as opportunity. The pre-19th century Cholera epidemics and the Spanish flu pandemic in 1918, (infected 50 crore people and killed 5 crore people) not only disturbed communities and economies, but also provided an opportunity to new pathways to relocate and change. India has been effective in dealing with the COVID-19 crisis so far.

In view of the present uncertainties and hangovers, the cooperative sector has to achieve the right balance between concern for community and economic operations of cooperative societies.

At global level, there are 100 countries having 100

crore members with 20 lakh cooperatives, where 250 crore people are in social and economic relationship. The cooperatives are involved in various economic activities, such as : Agricultural, Credit, Consumer, Labour, Dairy, Sugar, Fisheries, Transport, Marketing, Health, Insurance etc., The cooperatives across the world have been pro-active in conducting their day to-day operations along with providing support and services to needy members and people at large in present crisis, few of them are;

- Mobilizing Resources to provide relief for their members, workers and communities.
- Integration of cooperatives with local and national governments in the world to provide relief strategies as partners.
- Providing work place safety and working conditions through social distancing (Italy, Canada and Tunisia)
- Supporting Internal Operation Management i.e. Cooperatives establishing telework arrangement by cancelling events that require face to face exchanges (USA, UK and Finland)
- Ensuring worker protection by cooperatives through;
  * Modifying paid time-off policies to ensure that workers who are absent do not suffer loss of income (USA)
  * Higher paid workers deciding to take a pay-cut to compensate lower paid workers during lockdown (Spain)
  * Providing child care services without fees (UK)
- Stabilization of Supply chain by cooperatives i.e.
  * Protecting small holder farmers' production and keeping the food value chain alive.
  * Shortening supply chain by establishing direct purchase between producers and consumers.
- Industrial Cooperatives involved in production innovation and adoption through;
  * Shifting production towards much needed supplies like hand sanitizers and face masks and distributing to high risk population and frontline workers (Argentina, SEWA in India)
- Cooperatives networks broadening access to relevant information through;
  * Surveying member organizations on the impact of the pandemic COVID-19 (Australia, Japan)
  * Preparing video messages, WhatsApp groups, questions and answers, guidance notes, establishing on line platforms and organizing webinars to provide solutions to human relations, governance, legal and risk management advice to member cooperatives on the pandemic and possible mitigation measures. (UK, USA, Colombia, SEWA in India.
- Extending support for customers and communities.
  * Agricultural and Retail Cooperatives in distribution of food and other necessities by helping needy people who cannot go to shopping by themselves (UK, Switzerland, Denmark, Ireland and Japan)
- Ensuing the safety of shoppers and employees (Brazil, Italy, UK, Netherland, Denmark, Switzerland and Japan)
- Working with community partners in responding to school closures, to provide lunch boxes for disadvantaged children (Japan, south Korea)
- Health cooperatives putting in place e-learning courses designed to help people to cope with mental stress of the pandemic and lock down (Stress, anxiety and depression solutions in UK, Ireland, Ethiopia)
- Consumer, Housing and Financial Cooperatives waiving late fees for electricity bills (USA, Spain) and providing broad band services to support the affected school systems, enabling `on line' classes for high school students.
- Most of the governments across the world have designed strategies that integrate cooperatives to implement programmes and action plan to face COVID-19.

**Strengthening Cooperative Sector (Challenges) :**

In order to face the present COVID-19 crisis, the cooperative sector has to be strengthened through scientific process, such as ;

- Presence of dynamic selfless cooperative leaders with clear vision, mission and objectives, who can transform and protect the human community and environment.
- Creating awareness of rights, duties and responsibilities among members, directors and colleagues of cooperative societies.
- Infusion and inbuilt professionalization for better governance (competent selfless cooperative leaders, directors, executives and personnel, having team spirit).
- Ensuring active participation by members i.e. adopting two-way traffic, where members not only to borrow but also to transact with other activities of cooperative societies.
- Providing market information to members on regular basis through `ON LINE'.
- Reducing dependence on animal products
- Improving sanitization and public hygiene.
- Establishing marketing platform with advantage i.e.
  * Members to have freedom to sell their produce as per their choice.
  * Cooperatives to provide support and shelter to its members by way of storage and insurance services.
- Emotional attachment among all cooperatives and cooperative members, directors and personnel i.e.
  * Practicing cooperation among cooperatives (6th principle) need of the hour to face any crisis and present COVID-19.
- Creating the presence of cooperatives through practicing `Concern for Community' (7th Principle) by serving needy people certain services like health, transport, education, essentials, banking etc., in their respective areas.
- Demonstrating the ethical and professional governance by cooperatives, such as ;

Best practices, code of conduct, committed and selfless leaders, harmonious relationships between Board of Directors ad Executives, Democratic and positive approach, flexible bye laws, reduced bureaucratic procedure etc.,

- Strengthening of owned funds i.e. increase in share capital.
- Sound Financial Management practice
- Creating `Contingency fund' so as to face the present crisis COVID-19 by making necessary amendment in appropriation of profit, so as to adopt the seventh principle i.e. Concern for Community.
- Cooperatives along with Voluntary Organizations, NGOs, Volunteers, Professionals, Social leaders, Panchayat committee members, farmers etc., to act as core committee to serve the necessary services at grass root level with the help of government in facing the present crisis.

## ONE WORD MORE

The virus has been a great leveler affecting people irrespective of their wealth and social status and nature has given acknowledgement for unnatural and unethical practices. There is a need to conceive organic, ethical and natural thinking process of changing life styles without harming and warming the universe.

Too much greed in the process of globalization created the present crisis, signaling the de-globalization, Stay at Home, Work from Home and SOCIAL DISTANCING.

It is testing time to face the deeds of human beings i.e. "As we Sow, so we reap" (Karma philosophy). We are "BORN, LIVE & LET-LIVE & EXIT" through cooperative bent of mind as member of global family though sacrifices. The cooperative sector is in the front line to create Peace, Harmony and integrate all resources through "ART OF LIVING TOGETHER".

India has to make an exercise in building institutional and governance capacity by involving cooperatives at different levels in facing present crisis, COVID-19.

**"Let living creatures be optimistic and faithful towards the nature to create peaceful environment through organic thoughts".**

**"ಸರ್ವೇಜನಾ ಸುಖಿನೋ ಭವಂತು"**

# ಆನ್‌ಲೈನ್ ತರಬೇತಿ ಮಾರ್ಗದರ್ಶಿ

– ಶ್ರೀ ರಘುನಂದನ ಕೆ, ಉಪಪ್ರಧಾನ ವ್ಯವಸ್ಥಾಪಕ, ಕರಾಸೌಸಂಸನಿ., ಬೆಂಗಳೂರು

"ಆತ್ಮೀಯ ಪ್ರತಿನಿಧಿಗಳೇ, ಎಲ್ಲಕ್ಕಿಂತ ಮೊದಲಿಗೆ ನಿಮ್ಮ ಮೊಬೈಲ್‌ನ್ನು ಕೈಗೆ ತೆಗೆದುಕೊಂಡು ಅದನ್ನು ಸ್ವಿಚ್ ಆಫ್ ಮಾಡಿ ಅಥವಾ ಸೈಲೆಂಟ್ ಮೋಡ್‌ಗೆ ಹಾಕಿಕೊಳ್ಳುವ ಮೂಲಕ ತರಬೇತಿಯ ಯಶಸ್ಸಿಗೆ ಸಹಕರಿಸಿ" ಎನ್ನುವ ಪ್ರಕಟಣೆಯೊಂದಿಗೆ ಕಾರ್ಯಕ್ರಮಗಳು ಆರಂಭವಾಗುತ್ತಿದ್ದ ಕಾಲವೊಂದಿತ್ತು. ಈಗ, "ಮೊದಲಿಗೆ ನಿಮ್ಮ ಮೊಬೈಲ್ ಕೈಗೆ ತೆಗೆದುಕೊಳ್ಳಿ, ಬ್ಯಾಟರಿ ಇಂಟರ್ನೆಟ್ ಪರಿಕ್ಷಿಸಿಕೊಳ್ಳಿ" ಎನ್ನುವ ಸೂಚನೆಯೊಂದಿಗೆ ತರಬೇತಿಯನ್ನು ಆರಂಭಿಸಬೇಕಾದ ಬದಲಾವಣೆಗೆ ನಾವು ಹೊಂದಿಕೊಳ್ಳಬೇಕಿದೆ. ಕಣ್ಣಿಗೆ ಕಾಣದ ಕರೋನಾ ವೈರಸ್ ಎನ್ನುವ ಸೂಕ್ಷ್ಮಾಣು ಜೀವಿಯೊಂದು ಅವತರಿಸಿ ಸರ್ವಶಕ್ತಿವಂತ ತಾನು ಎಂದುಕೊಂಡಿದ್ದ ಮನುಷ್ಯನ ಬದುಕಿನ ಸಾಮಾಜಿಕ ವ್ಯವಸ್ಥೆಯನ್ನೇ ಅಲ್ಲಾಡಿಸಿಬಿಟ್ಟಿದೆ. ಒಂದಾಗಿ ಕೈ ಹಿಡಿದು ನಿಲ್ಲುವ ಸಹಕಾರದ ಪಾಠಕ್ಕಿಂತ ಸಾಮಾಜಿಕ ದೂರ (ಸೋಶಿಯಲ್ ಡಿಸ್ಟೆನ್ಸ್) ದಲ್ಲಿ ಜೀವ ಉಳಿಸಿಕೊಳ್ಳುವ ಅನಿವಾರ್ಯತೆಗೆ ನಾವು ಬದಲಾಯಿಸಲ್ಪಟ್ಟಿದ್ದೇವೆ.

ಆದರೆ, ಲಾಕ್ ಡೌನ್ ಎಂದು ಎಷ್ಟು ದಿನ ಕೈಕಟ್ಟಿ ಕುಳಿತುಕೊಳ್ಳಲು ಸಾಧ್ಯ. ಒಂದು ವಿಶ್ರಾಂತಿಯ ನಂತರ ಮತ್ತೆ ಈಗ ಚಲನೆ ಆರಂಭವಾಗಿದೆ, ಹೊಸ ವ್ಯವಸ್ಥೆಗಳೆಡೆಗೆ ನಾವು ಚಲಿಸಲಾರಂಭಿಸಿದ್ದೇವೆ. ಕಛೇರಿಗಳು ಮನೆಗಳಿಗೆ ಶಿಫ್ಟ್ ಆಗಿವೆ. ಲಾಕ್‌ಡೌನ್ ಕಾರಣದಿಂದ ನಿಂತುಹೋಗಿದ್ದ ಮೀಟಿಂಗ್‌ಗಳು, ತರಬೇತಿಗಳು, ಶಾಲಾ ತರಗತಿಗಳು, ವಿಶ್ವವಿದ್ಯಾಲಯದ ಸೆಮಿನಾರ್‌ಗಳು, ಸಾಂಸ್ಕೃತಿಕ ಚಟುವಟಿಕೆಗಳು ಆನ್‌ಲೈನ್ ಎಂಬ ಡಿಜಿಟಲ್ ಪ್ಲಾಟ್‌ಫಾರ್ಮನ ಮೂಲಕ ನಿಧಾನವಾಗಿ ತೆರೆದುಕೊಳ್ಳತೊಡಗಿವೆ. ವರ್ಚುವಲ್ ಹೊಸತನವೊಂದು ಸಹಕಾರ ಕ್ಷೇತ್ರವನ್ನು ಕೂಡ ನಿಧಾನವಾಗಿ ಆವರಿಸಿಕೊಳ್ಳುತ್ತಿದೆ. ಈ ಬದಲಾವಣೆಗೆ ಸಹಕಾರ ಕ್ಷೇತ್ರ ಕೂಡ ಸಿದ್ಧವಾಗಬೇಕಿದ್ದು, ಈ ನಿಟ್ಟಿನಲ್ಲಿ ಆನ್‌ಲೈನ್ ತರಬೇತಿ ಹಾಗೂ ಇದರ ಯಶಸ್ಸಿಗೆ ಅಗತ್ಯವಾದ ವಿಷಯಗಳ ಬಗ್ಗೆ ಒಂದಷ್ಟು ವಿವರಗಳನ್ನು ಅವಲೋಕಿಸೋಣ.

* * * * * * * * *

**ಆನ್‌ಲೈನ್ ತರಬೇತಿ ಎನ್ನುವ ಪರಿಕಲ್ಪನೆ :** ಇಂಟರ್‌ನೆಟ್ ಬಳಸಿ ಹಲವು ಜನ ಡಿಜಿಟಲ್ ವೇದಿಕೆಯಡಿಯಲ್ಲಿ ನಡೆಸುವ ಸಭೆ, ವಿಡಿಯೋ ಕಾನ್ಫರೆನ್ಸ್, ವೆಬಿನಾರ್ (ವೆಬ್ ಆಧಾರಿತವಾಗಿ ನಡೆಸುವ ಸೆಮಿನಾರ್), ತರಬೇತಿ ಇವೆಲ್ಲ ಆನ್‌ಲೈನ್ ಅವಕಾಶಗಳ ಸಾಧ್ಯತೆಗಳು. ಆನ್‌ಲೈನ್ ತರಬೇತಿ ಎನ್ನುವುದು ಈಗ ಹೊಸತಾಗಿ ಆರಂಭವಾಗಿರುವ ತರಬೇತಿ ವಿಧಾನವಲ್ಲ. ಇ-ಲರ್ನಿಂಗ್ ಮಾದರಿಯಲ್ಲಿ ತುಂಬ ಹಿಂದಿನಿಂದಲೂ ಇದು ಜಾರಿಯಲ್ಲಿದೆ. ಕಾರ್ಪೋರೇಟ್ ಸಂಸ್ಥೆಗಳಲ್ಲಿ ಹೆಚ್ಚಿನ ಬಳಕೆಯಲ್ಲಿದ್ದ ಇದು ಈಗ ಸಹಕಾರ ಕ್ಷೇತ್ರ ಸೇರಿದಂತೆ ಜನಸಾಮಾನ್ಯರ ಅರಿವಿನ ವ್ಯಾಪ್ತಿಗೆ ತೆರೆದುಕೊಂಡಿದೆ. ವೆಬ್ ಆಧಾರಿತ ತರಬೇತಿ (Web Based Training – WBT) ಅಥವಾ ಅಂತರ್ಜಾಲ ಆಧಾರಿತ ತರಬೇತಿ (Internet Based Training – IBT) ಎನ್ನುವುದರ ಸುಲಭ ವ್ಯಾಖ್ಯಾನವೇ ಆನ್‌ಲೈನ್ ತರಬೇತಿ.

**ಆ್ಯಪ್ ಎನ್ನುವ ಆನ್‌ಲೈನ್ ತರಬೇತಿ ವೇದಿಕೆ :** ಆನ್‌ಲೈನ್ ತರಬೇತಿಯನ್ನು ಸುಲಭವಾಗಿ ನಡೆಸಲು ಆ್ಯಪ್‌ಗಳನ್ನು ಬಳಸಲಾಗುತ್ತದೆ. ಆ್ಯಪ್ ಎಂದರೆ ಡಿಜಿಟಲ್ ಡಿವೈಸ್‌ಗಳಲ್ಲಿ ಡೌನ್‌ಲೋಡ್ ಮಾಡಿಕೊಳ್ಳುವ ಮೂಲಕ ಬಳಕೆಗೆ ತೆರೆದುಕೊಳ್ಳುವ ಅಪ್ಲಿಕೇಷನ್, ಇದನ್ನು ಸರಳವಾಗಿ ಆ್ಯಪ್ ಎಂದು ಕರೆಯಲಾಗುತ್ತದೆ. ಆನ್‌ಲೈನ್ ಅವಕಾಶದ ಮೂಲಕ ತರಬೇತಿಗೆ ಹೆಚ್ಚು ಪ್ರಚಲಿತದಲ್ಲಿರುವ ಆ್ಯಪ್‌ಗಳೆಂದರೆ – ಗೋ ಟೂ ಮೀಟಿಂಗ್, ಸಿಸ್ಕೋ ವೆಬ್–ಎಕ್ಸ್, ಗೋ ಟೂ ವೆಬಿನಾರ್, ಬ್ಲ್ಯೂ ಜೀನ್ಸ್, ಜೂಮ್, ಗೂಗಲ್ ಮೀಟ್, ಸೇ ನಮಸ್ತೆ ಇತ್ಯಾದಿ. ಹತ್ತಾರು ಜನರು ಸಾವಿರುವ ಜಾಗದಿಂದಲೇ, ಇಂಟರ್‌ನೆಟ್ ಲಭ್ಯತೆಯೊಂದಿಗೆ ಸುಲಭವಾಗಿ ಈ ಆ್ಯಪ್‌ಗಳ ಮೂಲಕ ಆನ್‌ಲೈನ್ ವೇದಿಕೆಗೆ ಬರಬಹುದು.

ಆರಂಭದ ಕೆಲವು ದಿನಗಳ ಬಳಕೆಗಾಗಿ ಆ್ಯಪ್‌ಗಳು ಉಚಿತವಾಗಿ ಲಭ್ಯವಿದ್ದು, ನಂತರದಲ್ಲಿ ಆನ್‌ಲೈನ್ ಪಾವತಿ ಮೂಲಕ ಈ ಆ್ಯಪ್‌ಗಳನ್ನು ಆನ್‌ಲೈನಿನಲ್ಲಿಯೇ ಖರೀದಿ ಮಾಡಬೇಕಾಗುತ್ತದೆ. ಯಾವುದೇ ಆ್ಯಪ್‌ನ್ನು ಬಳಸುವ ಪೂರ್ವದಲ್ಲಿ ಸುರಕ್ಷತೆ, ಆ್ಯಪ್‌ನಲ್ಲಿ ಉಪಯೋಗಿಸಬಹುದಾದ ವಿವಿಧ ಆಯ್ಕೆಗಳನ್ನು ಪರಿಶೀಲಿಸಿಕೊಳ್ಳುವುದು ಒಳ್ಳೆಯದು. ಸಾಮಾನ್ಯವಾಗಿ ಆ್ಯಪ್‌ಗಳಲ್ಲಿ ಸುಲಭವಾಗಿ ಸಂವಹನ (ಆಡಿಯೋ), ಮುಖಾಮುಖಿ ಚರ್ಚೆ (ವಿಡಿಯೋ), ಉಪನ್ಯಾಸದ ಸಂದರ್ಭದಲ್ಲಿ ಅನ್ಯ ಶಬ್ದಗಳ ನಿವಾರಣೆ (ಮ್ಯುಟ್), ಸಂದೇಶ ವಿನಿಮಯ (ಮೆಸೇಜ್), ಫೈಲ್ ಹಾಗೂ ಕಡತಗಳನ್ನು ಸ್ಕ್ರೀನ್‌ನಲ್ಲಿ ಹಂಚಿಕೊಳ್ಳುವುದು (ಸ್ಕ್ರೀನ್ ಶೇರಿಂಗ್) ಹಾಗೂ ರೆಕಾರ್ಡ್ ಮಾಡಿಕೊಳ್ಳುವ ಅವಕಾಶಗಳಿರುತ್ತವೆ. ಇದಲ್ಲದೆ ಕೆಲವು ಆ್ಯಪ್‌ಗಳು ಅಭಿಪ್ರಾಯ ಸಂಗ್ರಹ (ಪೋಲಿಂಗ್), ಮಾತನಾಡಬೇಕಾದಾಗ ಕೈ ಎತ್ತುವುದು (ರೈಸ್ ಹ್ಯಾಂಡ್) ಸೇರಿದಂತೆ ವಿವಿಧ ಆಯ್ಕೆಗಳನ್ನು ಹೊಂದಿರುತ್ತವೆ.

ಆಯೋಜಕರು ಸುಲಭವಾಗಿ ತರಬೇತಿ ವಿಷಯ ಹಾಗೂ ತರಬೇತಿ ಸಮಯವನ್ನೊಳಗೊಂಡ ವೆಬ್ ಲಿಂಕ್‌ನ್ನು ಸಿದ್ಧಪಡಿಸಲು ಸಾಧ್ಯವಿದೆ. ಈ ವೆಬ್ ಲಿಂಕ್‌ನ್ನು ತರಬೇತಿಯಲ್ಲಿ ಭಾಗವಹಿಸಬೇಕಾದವರಿಗೆ ಮೇಲ್/ಎಸ್–ಎಂಎಸ್/ವಾಟ್ಸ್‌ಪ್ ಮೂಲಕ ಕಳುಹಿಸಬಹುದು. ನಿಗದಿಪಡಿಸಿದ ತರಬೇತಿ ಸಮಯಕ್ಕೆ ಸರಿಯಾಗಿ ಲಿಂಕ್ ತೆರೆದುಕೊಳ್ಳುವ ಮೂಲಕ, ಇದನ್ನು ಬಳಸಿ ತರಬೇತಿಯಲ್ಲಿ ಭಾಗವಹಿಸಲು ಪ್ರತಿನಿಧಿಗಳಿಗೆ ಅವಕಾಶವಾಗುತ್ತದೆ.

**ಆಯೋಜಕರು ಗಮನಿಸಬೇಕಾದ ಅಂಶಗಳು :** ಯಾವುದೇ ತರಬೇತಿಯ ಸಿದ್ಧತೆಯ ಯಶಸ್ಸಿಗೆ ಆಯೋಜಕರ ಪಾತ್ರ ಮಹತ್ವದ್ದು. ಆನ್‌ಲೈನ್ ತರಬೇತಿಯ ಯಶಸ್ಸು ಕೂಡ ಆಯೋಜಕರ ಸಿದ್ಧತೆಯ ಸಾಮರ್ಥ್ಯವನ್ನ ಅವಲಂಭಿಸಿದೆ. ಆಯೋಜಕರು ಗಮನಿಸಬೇಕಾದ ಕೆಲವು ಅಂಶಗಳೆಂದರೆ :

- ಬಳಸುತ್ತಿರುವ ಆ್ಯಪ್‌ನಲ್ಲಿನ ಆಯ್ಕೆಗಳ (ಓಪ್ಷನ್ಸ್) ಬಗ್ಗೆ ಸ್ಪಷ್ಟ ತಿಳುವಳಿಕೆ, ಅವುಗಳನ್ನು ಯಾವ ಸಂದರ್ಭದಲ್ಲಿ ಪರಿಣಾಮಕಾರಿಯಾಗಿ ಹೇಗೆ ಬಳಸಬೇಕು ಎನ್ನುವ ಕುರಿತ ವಿವೇಚನೆ ಅಗತ್ಯ.
- ಆನ್‌ಲೈನ್ ತರಗತಿಯ ಲಿಂಕ್‌ನ್ನು ಮುಂಚಿತವಾಗಿ ಪಾಲ್ಗೊಳ್ಳಬೇಕಾದವ–ರಿಗೆ ಕಳುಹಿಸುವುದು. ತರಬೇತಿಯ ಪೂರ್ವದಲ್ಲಿಯೇ ಭಾಗವಹಿಸುತ್ತಿರುವ ಪ್ರತಿನಿಧಿಗಳಿಗೆ ಆನ್‌ಲೈನ್ ಶಿಷ್ಟಾಚಾರದ ಬಗ್ಗೆ ಹಾಗೂ ತರಬೇತಿಯ ಸ್ವರೂಪ, ಪ್ರಶ್ನೋತ್ತರ ಸ್ವರೂಪ, ಚರ್ಚೆಯ ಅವಧಿಗಳ ಬಗ್ಗೆ ಸೂಚನೆಗಳನ್ನು ನೀಡುವುದು ಮುಖ್ಯವಾಗುತ್ತದೆ.
- ಉಪನ್ಯಾಸಗಳ ಸಮಯದೆಡೆಗೆ ಗಮನ, ಪಾಲ್ಗೊಂಡ ಪ್ರತಿನಿಧಿಗಳ ವಿಡಿಯೋ/ಆಡಿಯೋಗಳಿಂದ ತರಬೇತಿಗೆ ತೊಂದರೆಯಾಗದಂತೆ ಅಗತ್ಯ ನಿಯಂತ್ರಣ ಮಾಡಬೇಕಾಗುತ್ತದೆ.

**ಉಪನ್ಯಾಸಕರು/ತರಬೇತುದಾರರು ಗಮನಿಸಬೇಕಾದ ಅಂಶಗಳು :** ಪರಿಣಾಮಕಾರಿ ಉಪನ್ಯಾಸದಿಂದ ಮಾತ್ರ ತರಬೇತಿ ಪೂರ್ಣ ಪ್ರಮಾಣದಲ್ಲಿ

ಪ್ರಯೋಜನಕಾರಿಯಾಗುತ್ತದೆ. ಮುಖಾಮುಖಿ ಉಪನ್ಯಾಸಕ್ಕಿಂತ ಆನ್‌ಲೈನ್ ಉಪನ್ಯಾಸ ಭಿನ್ನವಾಗಿರುತ್ತದೆ. ಪಾಲ್ಗೊಂಡ ಪ್ರತಿನಿಧಿಗಳ ವಿಡಿಯೋಗಳು ಆಫ್ ಆಗಿರುವ ಸಂದರ್ಭದಲ್ಲಿ ತಮ್ಮಷ್ಟಕ್ಕೆ ತಾವೇ ಏಕಾಂಗಿಯಾಗಿ ಕುಳಿತು ಉಪನ್ಯಾಸ ನೀಡಬೇಕಾಗುತ್ತದೆ. ಐಸ್‌ಬ್ರೇಕ್ ಚಟುವಟಿಕೆಗಳಿಗೆ, ಹಾವಭಾವಗಳಿಗೆ ಹೆಚ್ಚಿನ ಅವಕಾಶವಿರುವುದಿಲ್ಲ. ಎಲ್ಲವನ್ನೂ ಮಾತಿನ ಮೂಲಕವೇ ನಿಭಾಯಿಸಬೇಕಾದ ಮಹತ್ವದ ಜವಾಬ್ದಾರಿ ಉಪನ್ಯಾಸಕರದ್ದು. ಈ ಕೆಳಕಂಡ ಅಂಶಗಳನ್ನು ಉಪನ್ಯಾಸಕರು ಪರಿಗಣಿಸುವುದು ಅನಿವಾರ್ಯ.

- ಉಪನ್ಯಾಸ ನೀಡುವ ಸ್ಥಳದಲ್ಲಿ ಇಂಟರ್‌ನೆಟ್ ಸಂಪರ್ಕ ಹಾಗೂ ಬಳಸುವ ಡಿಜಿಟಲ್ ಡಿವೈಸ್ (ಲ್ಯಾಪ್‌ಟಾಪ್/ಮೊಬೈಲ್/ಟ್ಯಾಬ್/ಐಫೋನ್) ಸರಿಯಾಗಿರುವುದನ್ನು ಮುಂಚಿತವಾಗಿಯೇ ಖಚಿತಪಡಿಸಿಕೊಳ್ಳುವುದು.
- ಆನ್‌ಲೈನ್ ತರಗತಿಗಳಲ್ಲಿ ವಿಡಿಯೋ ಉಪನ್ಯಾಸ ಹೆಚ್ಚಿರುವುದರಿಂದ, ಮುಖ ಸ್ಪಷ್ಟವಾಗಿ ಕಾಣಲು ಮುಖದ ಮೇಲೆ ಸದಾ ಬೆಳಕು ಬೀಳುವಂತೆ ನೋಡಿಕೊಳ್ಳುವುದು, ಬ್ಯಾಕ್‌ಡ್ರಾಪ್ ಸಾಧ್ಯವಾದಷ್ಟು ಸರಳವಾಗಿದ್ದರೆ ಉತ್ತಮ.
- ಉಪನ್ಯಾಸದ ಸಂದರ್ಭದಲ್ಲಿ ಬಳಸುವ ಕಡತ, ವಿಡಿಯೋ, ಚಿತ್ರಗಳು ಕಡಿಮೆ ಇಂಟರ್ನೆಟ್ ಡಾಟಾ ಬಳಸುವಂತಿದ್ದರೆ ಸ್ಕ್ರೀನ್ ಶೇರ್ ಸುಲಭ ಹಾಗೂ ಪಾಲ್ಗೊಂಡವರಿಗೆ ತೊಂದರೆಯಿಲ್ಲದೆ ನೋಡಲು ಅನುಕೂಲ.
- ಉಪನ್ಯಾಸದ ಮಧ್ಯದಲ್ಲಿ ಸಂವಾದ/ಚರ್ಚೆ/ಪ್ರಶ್ನೋತ್ತರ ಸ್ವರೂಪ ಬೇಡ, ಏಕೆಂದರೆ ಹಲವರು ಹಲವು ಜಾಗದಿಂದ ಭಾಗವಹಿಸುವುದರಿಂದ ಉಪನ್ಯಾಸದ ಮಧ್ಯದ ಚರ್ಚೆಗಳನ್ನು ನಿಯಂತ್ರಿಸುವುದು ಆಯೋಜಕರಿಗೆ ಕಷ್ಟಸಾಧ್ಯವಾಗಬಹುದು.
- ಚಾಟ್ ಮೂಲಕ, ರೈಸ್ ಹ್ಯಾಂಡ್ ಆಯ್ಕೆ ಬಳಸುವ ಮೂಲಕ ಪ್ರಶ್ನೆ ಕೇಳಲು ಅವಕಾಶ ಕಲ್ಪಿಸಬಹುದಾದರೂ ಅದು ಉಪನ್ಯಾಸಕರಿಗೆ ಸುಲಭವೆನಿಸುವುದಕ್ಕಿಂತ ತೊಂದರೆ ಉಂಟು ಮಾಡುವುದೇ ಜಾಸ್ತಿ. ಆ್ಯಪ್‌ನಲ್ಲಿ ಪೋಲಿಂಗ್ ಆಯ್ಕೆಯಿದ್ದಲ್ಲಿ ಬಳಸಬಹುದು.
- ಉಪನ್ಯಾಸದ ಸಂದರ್ಭದಲ್ಲಿ ಹೋಸ್ಟ್ ಅಥವಾ ಕೋ ಹೋಸ್ಟ್ ಆಯ್ಕೆ ಪಡೆಯುವುದು, ಆ್ಯಪ್ ಬಗ್ಗೆ ತಾಂತ್ರಿಕ ಮಾಹಿತಿ ತಿಳಿದಿರುವುದು, ಸಂಯೋಜಕರೊಂದಿಗಿನ ಸಂವಹನ ಉಪನ್ಯಾಸವನ್ನು ಪರಿಣಾಮಕಾರಿಯಾಗಿಸಬಲ್ಲದು.

**ಆನ್‌ಲೈನ್ ತರಬೇತಿ ಭಾಗವಹಿಸುವಿಕೆಗೆ ಸಿದ್ಧತೆ :** ಆನ್‌ಲೈನ್ ತರಬೇತಿಯಲ್ಲಿ ಪಾಲಿಸುವ ಶಿಷ್ಟಾಚಾರಗಳಿಂದ ಹಾಗೂ ಭಾಗವಹಿಸಬೇಕಾದಾಗ ಮಾಡಿಕೊಳ್ಳಬೇಕಾದ ಸಿದ್ಧತೆಗಳಿಂದ ಪಾಲ್ಗೊಳ್ಳುವವರು ಹೆಚ್ಚು ಪ್ರಯೋಜನ ಪಡೆದುಕೊಳ್ಳಬಹುದು. ಈ ನಿಟ್ಟಿನಲ್ಲಿ, ಗಮನಿಸಬೇಕಾದ ಪ್ರಮುಖ ಅಂಶಗಳೆಂದರೆ –

- ಇಂಟರ್‌ನೆಟ್ ಸಂಪರ್ಕ ಹೊಂದಿರುವ ಮೊಬೈಲ್/ಲ್ಯಾಪ್‌ಟಾಪ್/ಡೆಸ್ಕ್‌ಟಾಪ್/ಟ್ಯಾಬ್‌ಗಳನ್ನು ಬಳಸಿ, ಆಯೋಜಕರು ಕಳುಹಿಸುವ ಲಿಂಕ್ ಮೂಲಕ ಆನ್‌ಲೈನ್ ತರಬೇತಿಯಲ್ಲಿ ಭಾಗವಹಿಸಬೇಕಾಗುತ್ತದೆ.
- ಭಾಗವಹಿಸುವ ಪೂರ್ವದಲ್ಲಿಯೇ ಡಿವೈಸ್‌ನ ಬ್ಯಾಟರಿ, ಮೈಕ್, ಸ್ಪೀಕರ್, ಡಾಟಾ/ವೈಫೈ, ಕ್ಯಾಮೆರಾ ಎಲ್ಲವನ್ನೂ ಪರೀಕ್ಷಿಸಿ ಸಮರ್ಪಕವಾಗಿರಿಸಿಕೊಳ್ಳುವುದು ಸೂಕ್ತ. ಟಿಪ್ಪಣಿಗಾಗಿ ಪುಸ್ತಕ ಹಾಗೂ ಪೆನ್ನನ್ನು ಇಟ್ಟುಕೊಳ್ಳಿ, ಹಲವು ಕೆಲಸ ಒಟ್ಟಿಗೆ ಮಾಡದೆ ಲಕ್ಷ್ಯಕೊಟ್ಟು ಕೇಂದ್ರೀಕೃತರಾಗಿ ಭಾಗವಹಿಸಿ.
- ಸೂಕ್ತವಾದ ಉಡುಪನ್ನು ಧರಿಸಿ, ಪರದೆಯ ಮಧ್ಯ ಭಾಗದಲ್ಲಿ ಕುಳಿತುಕೊಳ್ಳಿ, 30 ಇಂಚಿನ ಅಂತದಲ್ಲಿ ಅಥವಾ ಒಂದು ತೋಳಿನ ಅಂತರದಲ್ಲಿ ಕ್ಯಾಮರಾ ಇರಲಿ. ಕ್ಯಾಮೆರದ ಮುಂದೆ ಓಡಾಟ ತಪ್ಪಿಸಿ, ನಿಮ್ಮ ಹಿನ್ನಲೆ ಸ್ಪಷ್ಟವಾಗಿರಲಿ ಹಾಗು ಸರಳವಾಗಿರಲಿ.
- ನಿಗದಿತ ಸಮಯದಲ್ಲಿ ತರಗತಿಗೆ ಹಾಜರಾಗುವುದು ಹಾಗೂ ಬೇರೆಯವರಿಗೆ ತಿಳಿಯಲು ಸಾಧ್ಯವಾಗುವಂತೆ ನಿಮ್ಮ ಹೆಸರನ್ನೇ ಅಪ್ಲಿಕೇಶನ್‌ನಲ್ಲಿ ಬಳಸುವುದು ಒಳ್ಳೆಯದು.
- ಮೊಬೈಲ್ ಮೂಲಕ ಹಾಜರಾಗುತ್ತಿದ್ದಲ್ಲಿ ಲ್ಯಾಂಡ್ ಸ್ಕೇಪ್ ಸೂಕ್ತ ಆಯ್ಕೆ, ಇಂಟರ್ನೆಟ್ ಸಂಪರ್ಕ ಸಮರ್ಪಕವಾಗಿರದಿದ್ದಲ್ಲಿ ವಿಡಿಯೋ ಸ್ವಿಚ್ ಆಫ್ ಮಾಡಿಕೊಳ್ಳುವುದು ಹೆಚ್ಚು ಪ್ರಯೋಜನಕಾರಿ.
- ಸಂಪೂರ್ಣ ತರಬೇತಿ ಅಥವಾ ನೀವು ಮಾತನಾಡದ ಸಂದರ್ಭದಲ್ಲಿ, ನಿಮ್ಮ ಆಡಿಯೋವನ್ನು ಮ್ಯೂಟ್‌ನಲ್ಲಿರಿಸುವುದರಿಂದ ಉತ್ತಮ ಕಲಿಕೆಯ ಅನುಭವ ಪಡೆಯಬಹುದು.
- ತರಬೇತಿ ಜಾರಿಯಲ್ಲಿದ್ದಾಗ ಆಹಾರ ಸೇವನೆಯನ್ನು ತಪ್ಪಿಸಿ, ವಿಡಿಯೋ ಆನ್ ಇದ್ದಾಗ ನಿಮ್ಮ ಹಿನ್ನೆಲೆಯಲ್ಲಿ ಅನಗತ್ಯ ಚಟುವಟಿಕೆಗಳು/ವ್ಯಕ್ತಿಗಳು ಕಾಣದಂತೆ ಜಗರೂಕತೆಯಿರಲಿ.
- ಪ್ರಶ್ನೋತ್ತರ/ಚರ್ಚೆಯ ಸಂದರ್ಭದಲ್ಲಿ ಚಾಟ್ ಅಥವಾ ರೈಸ್ ಹ್ಯಾಂಡ್‌ನಂತಹ ಆಯ್ಕೆಯನ್ನು ಬಳಸಿ ನಂತರ ಮಾತನಾಡುವುದು ಸೂಕ್ತ. ನಿಧಾನವಾಗಿ ಮಾತನಾಡಿ, ನಿಮ್ಮ ಮಾತು ಚಿಕ್ಕದಾಗಿ ಚೊಕ್ಕವಾಗಿರಲಿ. ಆರಂಭದಲ್ಲಿ ನಿಮ್ಮ ಹೆಸರು ಹಾಗೂ ಅಂತ್ಯದಲ್ಲಿ ಧನ್ಯವಾದ ಹೇಳಲು ಮರೆಯಬೇಡಿ.

**ಆನ್‌ಲೈನ್ ತರಬೇತಿಯ ಇತಿಮಿತಿಗಳು :** ಕಡಿಮೆ ಖರ್ಚಿನಲ್ಲಿ ಹೆಚ್ಚು ಜನರಿಗೆ ಸುಲಭವಾಗಿ ತಲುಪಲು ಆನ್‌ಲೈನ್ ತರಬೇತಿಯಲ್ಲಿ ಸಾಧ್ಯ. ತರಬೇತಿಯ ಆಡಿಯೋ/ವಿಡಿಯೋ ರೆಕಾರ್ಡಿಂಗ್ ಲಭ್ಯವಾಗುವುದರಿಂದ ಪುನರ್ಬಳಕೆಗೆ, ಫೇಸ್‌ಬುಕ್/ಯೂಟ್ಯೂಬ್‌ನಂತಹ ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಳ್ಳಲು ಸಾಧ್ಯವಿದೆ. ಭಾಗವಹಿಸಬೇಕಾದ ಪ್ರತಿನಿಧಿಗಳು ಎಷ್ಟು ಗಂಟೆಗೆ ಹಾಜರಾಗಿದ್ದಾರೆ, ಯಾವಾಗ ಹೊರನಡೆದಿದ್ದಾರೆ ಎನ್ನುವ ಮಾಹಿತಿಗಳು ಆಯೋಜಕರಿಗೆ ಲಭ್ಯವಾಗುವುದರಿಂದ ಕಛೇರಿ ಸಭೆಗಳು/ಕಡ್ಡಾಯ ತರಬೇತಿಗಳಿಗೆ ಹೆಚ್ಚಿನ ಅನುಕೂಲ. ಇಂಟರ್ನೆಟ್ ಸೌಲಭ್ಯದ ಅನಿವಾರ್ಯತೆ, ಇಂಟರ್‌ನೆಟ್ ನೆಟವರ್ಕ್ ಸಮಸ್ಯೆಗಳು ಇದರ ಮಿತಿಗಳು. ಪ್ರಾಯೋಗಿಕ ತರಬೇತಿಗಳಿಗೆ ಕಷ್ಟವಾದರೂ, ಉಪನ್ಯಾಸ ಸ್ವರೂಪದ ತರಬೇತಿಗಳಿಗೆ ಹೆಚ್ಚಿನ ಪ್ರಯೋಜನಕಾರಿ.

* * * * * * * * *

ಒಟ್ಟಾರೆಯಾಗಿ ಬದಲಾವಣೆಗೆ ತೆರೆದುಕೊಳ್ಳಲೇಬೇಕಾದ ಸಂದರ್ಭದಲ್ಲಿ ಸಹಕಾರ ಕ್ಷೇತ್ರ ಸೇರಿದಂತೆ ಎಲ್ಲ ಕ್ಷೇತ್ರಗಳು ಇವೆ. ತಂತ್ರಜ್ಞಾನ ಬಳಕೆಯಲ್ಲಿ ಸಹಕಾರ ಕ್ಷೇತ್ರ ಮೊದಲಿನಿಂದಲೂ ಕಡಿಮೆ ಆಸಕ್ತಿ ತೋರಿದೆಯಾದರೂ, ಇಂದಿನ ಪರಿಸ್ಥಿತಿ ಆಸಕ್ತಿಯನ್ನು ಹೊಂದಲೇಬೇಕಾಗುವಂತೆ ಮಾಡಿದೆ. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದು ಈಗಾಗಲೇ ರಾಜ್ಯದಲ್ಲಿ ಜಿಲ್ಲಾವಾರು ಸೌಹಾರ್ದ ಸಹಕಾರಿಗಳ ಆನ್‌ಲೈನ್ ತರಬೇತಿಯನ್ನು ಯಶಸ್ವಿಯಾಗಿ ನಡೆಸಿದೆ. ನ್ಯಾಷನಲ್ ಕೋಆಪರೇಟೀವ್ ಯೂನಿಯನ್ ಆಫ್ ಇಂಡಿಯಾದಿಂದ ವೆಬಿನಾರ್‌ಗಳು ನಡೆದಿವೆ. ಸಹಕಾರ ಭಾರತಿ ಸಂಘಟನೆ ಪೇಸ್ ಬುಕ್ ಲೈವ್ ಉಪನ್ಯಾಸಗಳನ್ನು ನಡೆಸಿದೆ. ಸಹಕಾರ ಕ್ಷೇತ್ರದಲ್ಲಿ ಆನ್‌ಲೈನ್ ತರಬೇತಿಯ ಅವಕಾಶಗಳ ಮೂಲಕ ತಂತ್ರಜ್ಞಾನ ಬಳಕೆಯ ಹಾಗೂ ಡಿಜಿಟಲ್ ಪ್ಲಾಟ್‌ಫಾರ್ಮ್ ಉಪಯೋಗಿಸುವ ಸಾಧ್ಯತೆಗಳನ್ನು ಹೆಚ್ಚಾಗಿಸುವಲ್ಲಿ ಸಹಕಾರಿಗಳು ಕಾರ್ಯಪ್ರವೃತ್ತರಾದಲ್ಲಿ ಸಹಕಾರ ಕ್ಷೇತ್ರದ ಅಭಿವೃದ್ಧಿಯ ವೇಗ ಹೆಚ್ಚಲು ಸಾಧ್ಯವಾಗುತ್ತದೆ.

# ಆದಾಯ ತೆರಿಗೆ ಕಾಯ್ದೆಯಲ್ಲಿನ ಇತ್ತೀಚಿನ ಬದಲಾವಣೆಗಳಲ್ಲಿ ಸಹಕಾರಿಗಳ ಮೇಲೆ ಪರಿಣಾಮ ಬೀರುವ ಅಂಶಗಳು

ಸಿಎ॥ ಬಿ.ವಿ. ರವೀಂದ್ರನಾಥ್

2020ರ ವಿತ್ತೀಯ ಕಾಯ್ದೆಯಲ್ಲಿ ಸಹಕಾರಿ ಸಂಸ್ಥೆಗಳ ಮೇಲೆ ಪರಿಣಾಮ ಬೀರುವ ಅನೇಕ ತಿದ್ದುಪಡಿಗಳಲ್ಲಿ ಪ್ರಮುಖವಾಗಿರುವುದು ಕಲಂ 194ಎಗೆ ಆಗಿರುವ ತಿದ್ದುಪಡಿ. ಇದು ಬಡ್ಡಿ ಪಾವತಿಗಳ ಮೇಲೆ ಮೂಲದಲ್ಲಿ ತೆರಿಗೆ ಕಡಿತ ಮಾಡುವುದರ ಬಗ್ಗೆ ಇರುತ್ತದೆ. ಇದುವರೆಗೆ ಸಹಕಾರಿ ಬ್ಯಾಂಕುಗಳನ್ನು ಹೊರತು ಪಡಿಸಿ ಇತರೆ ಎಲ್ಲ ಸಹಕಾರ ಸಂಸ್ಥೆಗಳು ತಮ್ಮ ಸದಸ್ಯರಿಂದ ಸ್ವೀಕರಿಸಿದ ಠೇವಣಿಗಳ ಮೇಲೆ ಪಾವತಿಸಬೇಕಾದ ಬಡ್ಡಿಯ ಮೊತ್ತ ಎಷ್ಟೇ ಇರಲಿ ಅಂತಹ ಬಡ್ಡಿಯ ಮೇಲೆ ಮೂಲದಲ್ಲಿ ತೆರಿಗೆ ಕಡಿತ ಮಾಡಬೇಕಾದ ಅಗತ್ಯವಿರಲಿಲ್ಲ. ಇದೀಗ ಕೆಳಕಂಡಂತೆ ಮಹತ್ತರ ಬದಲಾವಣೆಯನ್ನು 2020ರ ವಿತ್ತೀಯ ಕಾಯ್ದೆಯಲ್ಲಿ (Finance Act) ಮಾಡಲಾಗಿದ್ದು ಅದು ದಿನಾಂಕ 01–04–2020ರಿಂದ ಜಾರಿಗೆ ಬಂದಿರುತ್ತದೆ.

**In section 194A of the Income-tax Act,––**

(B) after clause (xi) and before Explanation 1, the following proviso shall be inserted, namely:––

**"Provided that a co-operative society referred to in clause (v) or clause (viia) shall be liable to deduct income-tax in accordance with the provisions of sub-section (1), if––**

(a) the total sales, gross receipts or turnover of the co-operative society exceeds fifty crore rupees during the financial year immediately preceding the financial year in which the interest referred to in sub-section (1) is credited or paid; and

(b) the amount of interest, or the aggregate of the amounts of such interest, credited or paid, or is likely to be credited or paid, during the financial year is more than fifty thousand rupees in case of payee being a senior citizen and forty thousand rupees in any other case.";

ಇದರ ಪರಿಣಾಮವಾಗಿ ಹಿಂದಿನ ವರ್ಷ 50 ಕೋಟಿಗೂ ಮೀರಿ ವಹಿವಾಟು ನಡೆಸಿದ ಎಲ್ಲ ಸಹಕಾರಿ ಸಂಸ್ಥೆಗಳು ಈ ವರ್ಷದಿಂದ ತಮ್ಮಲ್ಲಿರುವ ಸದಸ್ಯರ ಠೇವಣಿಯ ಮೇಲೆ ನೀಡುವ ಬಡ್ಡಿಯು ವಾರ್ಷಿಕ 40 (ನಲವತ್ತು) ಸಾವಿರ (ಹಿರಿಯ ನಾಗರಿಕರಿಗೆ 50 (ಐವತ್ತು) ಸಾವಿರ) ರೂಪಾಯಿಗೆ ಮೀರುವಂತಿದ್ದರೆ ಪಾವತಿಸುವ ಬಡ್ಡಿಯ ಮೇಲೆ ನಿಗದಿತ ದರದಲ್ಲಿ ಮೂಲದಲ್ಲಿ ತೆರಿಗೆ ಕಡಿತ ಮಾಡಬೇಕಾಗಿರುತ್ತದೆ.

**"ಗಮನಿಸಿ"**

**1. ಇಲ್ಲಿ ವಹಿವಾಟು ನಿರ್ಧರಿಸಲು ಒಟ್ಟು ಮಾರಾಟ ಅಥವಾ ಒಟ್ಟು ಜಮಾ ಅಥವಾ ವಹಿವಾಟು ಎನ್ನುವ ಪದಗಳ ಅರ್ಥ ಮತ್ತು ವ್ಯತ್ಯಾಸಗಳನ್ನು ಅರಿಯಬೇಕು. ಒಟ್ಟು ಮಾರಾಟ (Total Sales) ಅಂದರೆ ವಸ್ತುಗಳ ಮಾರಾಟ ಪ್ರಕ್ರಿಯೆಯಲ್ಲಿ ತೊಡಗಿರುವ ಸಹಕಾರಿಗಳ ಮಾರಾಟದ ಜಮಾ.**

**2. ಪತ್ತಿನ ಸಹಕಾರಿಗಳಾಗಿದ್ದರೆ ಒಟ್ಟು ಜಮಾ (Gross Receipts) ಅಂದರೆ ಆದಾಯ ವೆಚ್ಚ ತಃಖ್ತೆಯಲ್ಲಿ ಕಾಣಿಸಿದ ಎಲ್ಲ ರೀತಿಯ ಆದಾಯಗಳ ಒಟ್ಟು ಜಮಾ.**

**3. ವಹಿವಾಟು (Turnover) ಎಂದರೆ ಯಾವುದೇ ಸಹಕಾರಿಯು ಮಾರಾಟ ಪ್ರಕ್ರಿಯೆ ಹಾಗೂ ಪತ್ತಿನ ಚಟುವಟಿಕೆ ಎರಡನ್ನೂ ನಡೆಸುತ್ತಿದ್ದರೆ ಆಗ Total Sales & Gross Receipts ಎರಡರ ಒಟ್ಟು ಮೊತ್ತವನ್ನು ವಹಿವಾಟು ಎಂದು ಪರಿಗಣಿಸಲಾಗುತ್ತದೆ.**

**ಈ ಮೂರು ಅಂಶಗಳಲ್ಲಿ ಯಾವುದೇ ಒಂದು ಅಂಶದಲ್ಲಿನ ಮೊತ್ತವು 50 ಕೋಟಿ ಮೀರಿದಲ್ಲಿ ಅಂತ ಸಹಕಾರಿಗೆ ಈ ಕಲಂ ಅನ್ವಯಿಸುತ್ತದೆ.**

ಹಾಗಾಗಿ ಅಂತಹ ಸಹಕಾರ ಸಂಸ್ಥೆಗಳು ಅಂತಹ ಸದಸ್ಯರ ಪಾನ್ ನಂ ಪಡೆದು ಠೇವಣಿಯ ವಿವರಗಳನ್ನು ತೆರಿಗೆ ಇಲಾಖೆಗೆ ಸಲ್ಲಿಸಬೇಕಾಗಿರುತ್ತದೆ. ತೆರಿಗೆ ಕಡಿತ ಬಯಸದ ಸದಸ್ಯರು ನಮೂನೆ 15 ಜಿ ಅಥವಾ 15 ಹೆಚ್ ಅನ್ನು ಸಲ್ಲಿಸಬೇಕಾಗಿರುತ್ತದೆ.

# ಆದಾಯ ತೆರಿಗೆ ಬದಲಾವಣೆಯ ಕುರಿತು ಮಾಹಿತಿ

ಸಿಎ॥ ಬಿ.ವಿ. ರವೀಂದ್ರನಾಥ್

ದೇಶದಲ್ಲಿ ನಗದು ರಹಿತ ವ್ಯವಹಾರವನ್ನು ಉತ್ತೇಜಿಸುವ ಮತ್ತು ಹಣಕಾಸು ವ್ಯವಹಾರವನ್ನು ಸಂಪೂರ್ಣ ಅಂಕೀಕರಣಗೊಳಿಸುವ (Digitilisation) ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಅನೇಕ ಸುಲಭ ಮತ್ತು ಅಗ್ಗವಾಗಿರುವ ಪಾವತಿ ಪದ್ಧತಿ ಹಾಗೂ ಪಾವತಿ ಉಪಕರಣಗಳನ್ನು (BHIM UPI, Google Pay, PayTm, UPI-QR Code, Aadhaar Pay, Ru-Pay debit cards, NEFT, RTGS) ಪರಿಚಯಿಸುತ್ತಾ ಬಂದಿದೆ. ಅದರ ಮುಂದುವರೆದ ಭಾಗವಾಗಿ ದಿನಾಂಕ 01–11–2019ರಿಂದ ಅನ್ವಯವಾಗುವಂತೆ ಆದಾಯ ತೆರಿಗೆ ಕಾಯ್ದೆಯಲ್ಲಿ ಕಲಂ 269ಎಸ್‌ಯು ಎಂಬ ಹೊಸತೊಂದು ಕಲಂ ಅನ್ನು ಸೇರಿಸಲಾಗಿತ್ತು. ಇದಕ್ಕೆ ಪೂರಕವಾಗಿ 01–01–2020ರಿಂದ ಜಾರಿಗೆ ಬರುವಂತೆ ಆದಾಯ ತೆರಿಗೆ ನಿಯಮಗಳಿಗೆ ತಿದ್ದುಪಡಿ ಮಾಡಿ ಕೆಳಕಂಡ ಒಂದು ಹೊಸ ನಿಯಮವನ್ನು ಸೇರ್ಪಡೆ ಮಾಡಲಾಗಿದೆ

**119AA. Modes of payment for the purpose of section 269SU :**

Every person, carrying on business, if his total sales, turnover or gross receipts, as the case may be, in business exceeds fifty crore rupees during the immediately preceding previous year shall provide facility for accepting payment through following electronic modes, in addition to the facility for other electronic modes of payment, if any, being provided by such person, namely:-

(I) Debit Card powered by RuPay;

(II) Unified Payments Interface (UPI) (BHIM-UPI); and

(III) Unified Payments Interface Quick Response Code (UPI QR Code) (BHIM-UPI QR Code)

**ನಿಯಮ 119ಎಎ : ಕಲಂ 269ಎಸ್‌ಯುಗೆ ಸಂಬಂಧಿಸಿದಂತೆ ಪಾವತಿಯ ಪದ್ಧತಿಗಳು**

ಹಿಂದಿನ ಆರ್ಥಿಕ ವರ್ಷದಲ್ಲಿ ಐವತ್ತು ಕೋಟಿ ರೂಪಾಯಿಗಳನ್ನು ಮೀರಿ ಮಾರಾಟ, ವಹಿವಾಟು ಅಥವಾ ಒಟ್ಟು ಜಮಾ ಇರುವ ಉದ್ಯಮ ನಡೆಸುತ್ತಿರುವ ಪ್ರತಿಯೊಬ್ಬ ವ್ಯಕ್ತಿಯು ತನ್ನ ವ್ಯವಹಾರದಲ್ಲಿ ಹಣ ಸ್ವೀಕರಿಸಲು ಇರುವ ಅನ್ಯ ಎಲೆಕ್ಟ್ರಾನಿಕ್ ವ್ಯವಸ್ಥೆಗಳೊಂದಿಗೆ ಕೆಳಕಾಣಿಸಿದ ಎಲೆಕ್ಟ್ರಾನಿಕ್ ರೀತಿಗಳಲ್ಲೂ ಪಾವತಿಸಲು ಅನುಕೂಲ ಮಾಡಿಕೊಡತಕ್ಕದ್ದು

(1) ರುಪೇ ಪಾವತಿ ಹೊಂದಿರುವ ಡೆಬಿಟ್ ಕಾರ್ಡ್

(2) ಭೀಮ್ ಇತ್ಯಾದಿ ಯುಪಿಐ ಪದ್ಧತಿ; ಮತ್ತು

(3) ಯುಪಿಐ ಪದ್ಧತಿಗೆ ಅನುಗುಣವಾಗಿರುವ ಕ್ಯೂಆರ್ ಕೋಡ್

**ಇಲ್ಲಿ ಗಮನಿಸಬೇಕಾದ ಸಂಗತಿಗಳು :**

1. ಇದು ಸಹಕಾರ ಸಂಸ್ಥೆಗಳೂ ಸೇರಿದಂತೆ ಎಲ್ಲ ವೃತ್ತಿ/ಉದ್ದಿಮೆದಾರರಿಗೂ ಅನ್ವಯಿಸುತ್ತದೆ
2. ವಾರ್ಷಿಕ ಐವತ್ತು ಕೋಟಿ ರೂಪಾಯಿಗಳನ್ನು ಮೀರಿ ಮಾರಾಟ, ವಹಿವಾಟು ಅಥವಾ ಒಟ್ಟು ಜಮಾ ಇರುವ ಉದ್ದಿಮೆ ಯಾ ವೃತ್ತಿ ನಡೆಸುತ್ತಿರುವ ಪ್ರತಿಯೊಬ್ಬ ವ್ಯಕ್ತಿಯು ಕಾಯ್ದೆಯಡಿಯಲ್ಲಿ ನಿರ್ದಿಷ್ಟ ವ್ಯಕ್ತಿ ಎಂದು ಕರೆಸಿಕೊಳ್ಳುತ್ತಾನೆ.
3. ಈ ಕುರಿತು ಅಧಿಸೂಚನೆಯನ್ನು ಕೇಂದ್ರೀಯ ನೇರ ತೆರಿಗೆ ಮಂಡಳಿಯು (ಸಿಬಿಡಿಟಿ) ದಿನಾಂಕ 30–12–2019ರಂದು ಹೊರಡಿಸಿದ್ದು ಈ ನಿಯಮ ದಿನಾಂಕ 01–01–2020ರಿಂದ ದೇಶದಾದ್ಯಂತ ಜಾರಿಗೆ ಬಂದಿರುತ್ತದೆ
4. ಆದಾಯ ತೆರಿಗೆ ಕಲಂ 269ಎಸ್‌ಯುನಲ್ಲಿ ತಿಳಿಸಿದ ಎಲೆಕ್ಟ್ರಾನಿಕ್ (ಡಿಜಿಟಲ್) ಪಾವತಿ ಪದ್ಧತಿಗಳಲ್ಲಿ ಮಾಡುವ ಯಾವುದೇ ಪಾವತಿಗಳಿಗೆ ಯಾವುದೇ ಬ್ಯಾಂಕು ದಿನಾಂಕ 01–01–2020ರಿಂದ ಯಾವುದೇ ರೀತಿಯ ಶುಲ್ಕಗಳನ್ನು ವಿಧಿಸುವಂತಿಲ್ಲ.
5. ಅದೇ ರೀತಿಯಲ್ಲಿ ವ್ಯಾಪಾರಿಗಳಿಗೆ ಈ ಮೊದಲು ನೀಡುತ್ತಿದ್ದ ಶೇಕಡಾ 2ರ ರಿಯಾಯಿತಿಯನ್ನೂ ದಿನಾಂಕ 01–01–2020ರಿಂದ ರದ್ದು ಮಾಡಲಾಗಿದೆ.
6. ಈ ನಿಯಮದಿಂದಾಗಿ ಈಗ ಇರುವ ಆರ್‌ಟಿಜಿಎಸ್, ಎನ್‌ಈಎಫ್ಟಿ, ಚೆಕ್/ಡಿಡಿ ಮುಂತಾದವುಗಳ ಜೊತೆಯಲ್ಲೇ ರುಪೇ ಪಾವತಿ ಹೊಂದಿರುವ ಡೆಬಿಟ್ ಕಾರ್ಡ್, ಭೀಮ್ ಇತ್ಯಾದಿ ಯುಪಿಐ ಪದ್ಧತಿ; ಮತ್ತು ಯುಪಿಐ ಪದ್ಧತಿಗೆ ಅನುಗುಣವಾಗಿರುವ ಕ್ಯೂಆರ್ ಕೋಡ್ ಈ ಮೂರೂ ಪದ್ಧತಿಗಳಿಗೂ ಅವಕಾಶ ಕಲ್ಪಿಸಬೇಕು.
7. ಪಾವತಿಗೆ ಮೇಲೆ ಕಾಣಿಸಿದ ಸೌಕರ್ಯಗಳನ್ನು ಒದಗಿಸಲು ಮತ್ತು ಕಾರ್ಯರೂಪಕ್ಕೆ ತರಲು ದಿನಾಂಕ 31–01–2020ರವರೆಗೆ ಸಮಯಾವಕಾಶ ನೀಡಲಾಗಿದೆ.
8. ಸೂಚಿತ ಸೌಕರ್ಯಗಳನ್ನು ಒದಗಿಸಲು ವಿಫಲರಾದ ಅಂತಹ ನಿರ್ದಿಷ್ಟ ವ್ಯಕ್ತಿಗಳು ಕಲಂ 271ಡಿಬಿರನ್ವಯ ಪ್ರತಿದಿನಕ್ಕೆ 5,000 ರೂಗಳಂತೆ ದಂಡ ಪಾವತಿಸತಕ್ಕದ್ದು.
9. ಅಂದರೆ ದಿನಾಂಕ 31–01–2020ರೊಳಗಾಗಿ ಈ ಸೌಲಭ್ಯ ಒದಗಿಸಿದಲ್ಲಿ ಅಂತಹವರ ಮೇಲೆ ದಂಡ ವಿಧಿಸಲಾಗದು.

ಮೇಲ್ಕಂಡ ಮಾಹಿತಿಯನ್ನು ನನಗೆ ಲಭ್ಯವಿರುವ ಮೂಲಗಳಿಂದ ಸಂಗ್ರಹಿಸಿ ಕನ್ನಡಕ್ಕೆ ಅನುವಾದಿಸಿ ಎಲ್ಲರ ಗಮನಕ್ಕೆ ತರಲು ಇಚ್ಛಿಸುತ್ತಿದ್ದೇನೆ. ಯಾವುದೇ ನಿರ್ಣಯ ತೆಗೆದುಕೊಳ್ಳುವ ಮುನ್ನ ತಜ್ಞರನ್ನು ಸಂಪರ್ಕಿಸಿ ಸೂಕ್ತ ವಿವರಣೆ ಪಡೆದು ಮುಂದುವರೆಯಲು ವಿನಂತಿಸಿದೆ.

# ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಯಲ್ಲಿ ಸಹಕಾರಿ ಸಂಸ್ಥೆಗಳ ಭಾಗವಹಿಸುವಿಕೆ (ಭಾಗ–2)

# PARTICIPATION OF COOPERATIVES IN ACHIEVING SUSTAINABLE DEVELOPMENT GOALS - SDGs (Part-2)



– ಶ್ರೀ ಯಶವಂತ ಡೋಂಗ್ರೆ

**ಎಸ್‌ಡಿಜಿ 2 :** ಹಸಿವಿನ ಅಂತ್ಯ, ಆಹಾರ ಭದ್ರತೆಯ ಸಾಧನೆ ಮತ್ತು ಉತ್ತಮ ಪೋಷಣೆ ಹಾಗೂ ಸುಸ್ಥಿರ ಕೃಷಿಗೆ ಉತ್ತೇಜನ (End hunger, achieve food security and improved nutrition and promote sustainable agriculture)

ಮೊದಲ ಗುರಿಗೆ ಪೂರಕವಾಗಿರುವ ಈ ಎರಡನೆಯ ಗುರಿಯು ಜಗತ್ತಿನ ಯಾವ ಭಾಗದಲ್ಲಿಯೂ ಜನ ಹಸಿವಿನಿಂದ ಬಳಲಬಾರದೆಂಬ ಉದ್ದೇಶ ಹೊಂದಿದೆ. 2030ರೊಳಗೆ ಪ್ರತಿಯೊಬ್ಬರಿಗು ವರ್ಷ ಪೂರ್ತಿ ಸುರಕ್ಷಿತ ಮತ್ತು ಪೋಶಕತ್ವ ಭರಿತ ಆಹಾರವು ಸಾಕಷ್ಟು ಪ್ರಮಾಣದಲ್ಲಿ ದೊರೆಯುವಂತಾಗಬೇಕೆಂದು ಈ ಗುರಿಯು ಬಯಸುತ್ತದೆ. ನಿರ್ದಿಷ್ಟವಾಗಿ ಈ ಗುರಿಯು ಎಲ್ಲ ಬಗೆಯ ಅಪೋಷಕತೆಯನ್ನು ಕೊನೆಗಾಣಿಸಬೇಕೆಂದು ಮತ್ತು ವಿಷೇಶವಾಗಿ ಮಕ್ಕಳಲ್ಲಿ, ಹದಿವಯಸ್ಕರಲ್ಲಿ, ಗರ್ಭಿಣಿ ಮತ್ತು ಹಾಲುಣಿಸುವ ಮಹಿಳೆಯರಲ್ಲಿ ಅಪೋಷಕತೆಯ ಸಮಸ್ಯೆಯನ್ನು ನಿವಾರಿಸಬೇಕೆಂದು ವಿಧಿಸುತ್ತದೆ. ಇದೇ ಅವಧಿಯಲ್ಲಿ ಕೃಷಿ ಉತ್ಪಾದನೆಯನ್ನು ಮತು ಕೃಷಿ ಆದಾಯವನ್ನು ದ್ವಿಗುಣಗೊಳಿಸಬೇಕೆಂದೂ, ಕೃಷಿ ಉತ್ಪನ್ನಗಳ ಮೌಲ್ಯವೃದ್ಧಿ, ಕೃಷಿ ಸಂಬಂಧಿತ ಮಾರುಕಟ್ಟೆ ಮತ್ತು ಇತರ ಸವಲತ್ತುಗಳು, ವಿಶೇಷವಾಗಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ದೊರೆಯುವಂತಾಗಬೇಕೆಂದೂ ಈ ಗುರಿಯಲ್ಲಿ ಹೇಳಲಾಗಿದೆ. ಜನರಿಗೆ ಆಹಾರ ಭದ್ರತೆಯು ದೊರೆಯಬೇಕೆಂದಾದಲ್ಲಿ ಕೃಷಿ ಕ್ಷೇತ್ರವು ಸುಸ್ಥಿರವಾಗಿರಬೇಕೆಂದೂ ಈ ಗುರಿಯು ಗುರುತಿಸುತ್ತದೆ. ಆದುದ–ರಿಂದ ಕೃಷಿ ಪರಿಕರಗಳ ಉತ್ಪಾದನೆ ಮತ್ತು ಅವುಗಳು ರೈತರಿಗೆ ಸುಲಭವಾಗಿ ದೊರೆಯುವಂತಾಗುವುದು, ಸ್ಥಳೀಯ ಬೆಳೆಗಳು ಮತ್ತು ಅವುಗಳಿಗೆ ಸಂಬಂಧಿಸಿದ ಬೀಜಗಳ ರಕ್ಷಣೆ, ಕೃಷಿಯ ಪೂರಕ ಪರಿಸರವನ್ನು ಕಾಪಾಡುವುದು, ಭೂಮಿ ಮತ್ತು ಮಣ್ಣಿನ ಗುಣಮಟ್ಟವನ್ನು ಉತ್ತಮಪಡಿಸುವುದು, ಪ್ರಕೃತಿ ವಿಕೋಪಗಳಿಂದ ರಕ್ಷಣೆ, ಕೃಷಿ ಕ್ಷೇತ್ರದಲ್ಲಿ ಹೆಚ್ಚಿನ ಹೂಡಿಕೆ ಮಾಡುವುದು ಮತ್ತು ಕೃಷಿ ಕ್ಷೇತ್ರದ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವುದು, ಕೃಷಿ ಉತ್ಪನ್ನಗಳ ಮಾರಾಟಕ್ಕೆ ಸಂಬಂಧಿಸಿದ ಎಲ್ಲ ರೀತಿಯ ಅಡೆತಡೆಗಳನ್ನು ನಿವಾ–ರಿಸುವುದು, ಕೃಷಿಉತ್ಪನ್ನಗಳಿಗೆ ಸಂಬಂಧಿಸಿದ ಕಮಾಡಿಟಿ ಮಾರುಕಟ್ಟೆ ಮತ್ತು ಡಿರೈವೇಟಿವ್ ಮಾರುಕಟ್ಟೆಗಳನ್ನು ಸುಧಾರಿಸುವುದು ಇವೇ ಮುಂತಾದ ಕಾರ್ಯಗಳಿಗೂ ಸಮಯಾಧಾರಿತ ಗುರಿಗಳ್ನು ನಿಗದಿಮಾಡಲಾಗಿದೆ.

ಕಳೆದ ಶತಮಾನಕ್ಕೆ ಹೋಲಿಸಿದರೆ ಜಗತ್ತಿನಲ್ಲಿ ಒಟ್ಟಾರೆ ಹಿಸಿವು ಮತ್ತು ಅಪೋಷಕತೆಯಿಂದಬಳಲುತ್ತಿರುವಜನಸಂಖ್ಯೆಯಲ್ಲಿ ಇಳಿಕೆಯಾಗಿದೆಯಾದರೂ, ಇತ್ತೀಚಿನ ಎರಡು ದಶಕದಲ್ಲಿ ಈ ಸಮಸ್ಯೆಯು ನಿರೀಕ್ಷಿಸಿದಷ್ಟು ಕಡಿಮೆಯಾಗುತ್ತಿಲ್ಲ. ಚಿಂತೆಯ ವಿಷಯವೆಂದರೆ 2015ರಲ್ಲಿ 777 ಮಿಲಿಯನ್ ಇದ್ದ ಅಪೋಷಕತ್ವ ಸಮಸ್ಯೆ ಇರುವ ಜನಸಂಖ್ಯೆ 2016 ರಲ್ಲಿ 815 ಮಿಲಿಯನ್‌ಗೆ ಏರಿಕೆಯಾಗಿದೆ ಮತ್ತು ಇಂದಿಗೂ ಇದೇ ದಿಕ್ಕಿನಲ್ಲಿ ಮುಂದುವರೆದಿದೆ. ಹಲವು ದೇಶಗಳಲ್ಲಿ ಅಂಥ : ಕಲಹ, ಪ್ರಾಕೃತಿಕ ವಿಕೋಪಗಳು ಮುಂತಾದುವುಗಳು ಹೆಚ್ಚಾಗಿರುವುದ–ರಿಂದ, ಈ ಸಂಖ್ಯೆ ಕಡಿಮೆಯಾಗುವ ಲಕ್ಷಣಗಳು ಕಾಣುತ್ತಿಲ್ಲ. ಪ್ರಪಂಚದಲ್ಲಿ ಆಹಾರೋತ್ಪನ್ನ ಬೆಳೆಯುತ್ತಿರುವ ಕೃಷಿಕರಲ್ಲಿ ಶೇಕಡ 90 ಭಾಗ ಸಣ್ಣ ಮತ್ತು ಅತಿ ಸಣ್ಣ ರೈತರಾಗಿದ್ದು ಇವರು ಒಟ್ಟು ಆಹಾರೋತ್ಪನ್ನದ ಶೇಕಡ 80ರಷ್ಟನ್ನು ಉತ್ಪಾದಿಸುತ್ತಿದ್ದಾರೆ. ಈ ಸಮುದಾಯಕ್ಕೆ ಅಗತ್ಯ ಬಂಡವಾಳ ಒದಗಿಸುವ ಮತ್ತು ಇತರೆ ಕೃಷಿ ಸಂಬಂಧಿ ಪರಿಕರಗಳನ್ನು ಒದಗಿಸುವ ದೊಡ್ಡ ಜವಾಬ್ದಾ–ರಿಯನ್ನು ನಿರ್ವಹಿಸಬೇಕಾಗಿದೆ. ಹಾಗೆಯೇ, ಪೌಷ್ಟಿಕ ಆಹಾರವು ಜನಸಾಮಾನ್ಯರಿಗೆ ಸುಲಭವಾಗಿ ದೊರೆಯುವಂತೆಯೂ ಮಾಡಬೇಕಾಗಿದೆ. ಇಂತಹ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಬೇಕಾದರೆ ಕೃಷಿಕರೇ ಭಾಗವಹಿಸಲು ಸಾಧ್ಯವಾಗುವ, ಪ್ರಜಾಸತ್ತಾತ್ಮಕ ನೆಲೆಯ, ಸ್ವಸಹಾಯ ಮಾದ–ರಿಯ ಸಂಸ್ಥೆಗಳೇ ಸೂಕ್ತ ಎಂಬುದು ಜಗತ್ತಿನ ಬಹುತೇಕ ತಜ್ಞರು ಮತ್ತು ಅಂತಾರಾಷ್ಟ್ರೀಯ ಸಂಸ್ಥೆಗಳ ಅಭಿಪ್ರಾಯವಾಗಿದೆ. ಆದುದರಿಂದಲೇ ಹಸಿವು ಮತ್ತು ಅಪೌಷ್ಟಿಕತೆಯನ್ನು ಅಂತ್ಯಗೊಳಿಸುವಲ್ಲಿ ಸಹಕಾರಿ ಸಂಘಗಳ ಸಂಘಟಿತ ಪಾತ್ರ ಬಹು ಮುಖ್ಯವಾಗಿದೆ.

ಹಸಿವಿನ ಅಂತ್ಯ ಸಾಧ್ಯವಾಗಬೇಕಾದರೆ ಸಾಕಷ್ಟು ಆಹಾರ ಲಭ್ಯವಾಗಬೇಕು, ಆಹಾರ ಲಭ್ಯವಾಗಬೇಕಾದರೆ ಕೃಷಿಕ್ಷೇತ್ರ ಸುಸ್ಥಿರತೆ ಸಾಧಿಸಬೇಕು. ಪ್ರಪಂಚದೆಲ್ಲೆಡೆ

ಈಗ ಕೃಷಿ ಕ್ಷೇತ್ರ ಸಂಕಷ್ಟ ಎದುರಿಸುತ್ತಿದೆ. ರೈತರು ಬಂಡವಾಳದ ಅಲಭ್ಯತೆ, ಕೃಷಿ ಪರಿಕರಗಳ ಅಸಮರ್ಪಕ ಪೂರೈಕೆ, ಹವಾಮಾನ ವೈಪರೀತ್ಯ ಇತ್ಯಾದಿ ಉತ್ಪಾದನಾ ಪೂರ್ವ ಸಮಸ್ಯೆಗಳನ್ನೂ, ಬೆಲೆಗಳ ಏರಿಳಿತ, ಬೆಳೆವಿಮೆಯ ಅಲಭ್ಯತೆ, ಸೂಕ್ತ ಮಾರುಕಟ್ಟೆ ಮತ್ತು ಗೋದಾಮು ವ್ಯವಸ್ಥೆಗಳಿಲ್ಲದಂತಹ ಉತ್ಪಾದನೋತ್ತರ ಸಮಸ್ಯೆಗಳನ್ನೂ ಎದುರಿಸುತ್ತಿದ್ದಾರೆ. ಇನ್ನೊಂದೆಡೆ, ಆಹಾರ ಅಗತ್ಯವಿರುವ ಜನ ಸೂಕ್ತ ಸಮಯಕ್ಕೆ ಆಹಾರೋತ್ಪನ್ನಗಳು ಲಭ್ಯವಿಲ್ಲದಿರುವುದು, ಉತ್ಪನ್ನಗಳ ಗುಣಮಟ್ಟ, ಬೆಲೆಗಳ ಏರಿಳಿತ ಮುಂತಾದ ಸಮಸ್ಯೆಗಳಿಗೆ ತುತ್ತಾಗುತ್ತಿದ್ದಾರೆ. ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಈ ಸಮಸ್ಯೆಗಳು ಹೆಚ್ಚು ಎದ್ದು ಕಾಣುತ್ತಿವೆ. ಹಸಿವಿನ ಸಮಸ್ಯೆಯನ್ನು ಎದುರಿಸುವ ನಿಟ್ಟಿನಲ್ಲಿ ಹಲವು ಸಂಘಟನೆಗಳ ಸಂಚಿತ ಪ್ರಯತ್ನಗಳು ಇಂದಿನ ತುರ್ತು ಅಗತ್ಯ. ಆದರೆ ಸುಸ್ಥಿರ ಅಭಿವೃದ್ಧಿಯ ಈ ಗುರಿಯ ಸಾಧನೆಗೆ ಸಂಯುಕ್ತ ರಾಷ್ಟ್ರ ಸಂಸ್ಥೆ ಗುರುತಿಸಿರುವ ವಿವಿಧ ಅಗತ್ಯಗಳ ಹಿನ್ನೆಲೆಯಲ್ಲಿ ನೋಡಿದಾಗ ಬಹುಷ: ಸಹಕಾರಿ ಸಂಸ್ಥೆಗಳೇ ಈ ಗಂಭೀರ ಸಮಸ್ಯೆಗೆ ಪರಿಹಾರ ಹುಡುಕುವಲ್ಲಿ ಅತ್ಯಂತ ಸೂಕ್ತ ಸಾಂಸ್ಥಿಕ ಪರಿಹಾರಗಳೆಂದು ಅನ್ನಿಸದಿರದು.

ಹಾಗೆ ನೋಡಿದರೆ ಈ ಎರಡನೆ ಗುರಿಯ ಸಾಧನೆ ಬಹುಮೊದಲಿನಿಂದಲೂ ಸಹಕಾರಿ ಸಂಘಟನೆಗಳ ಪ್ರಮುಖ ಉದ್ದೇಶಗಳಲ್ಲೊಂದಾಗಿದೆ. "ಕೃಷಿ ಉತ್ಪಾದನೆಯನ್ನು ಮತು ಕೃಷಿ ಆದಾಯವನ್ನು ಹೆಚ್ಚಿಸುವುದು, ಕೃಷಿ ಉತ್ಪನ್ನಗಳ ಮೌಲ್ಯವೃದ್ಧಿ, ಕೃಷಿ ಸಂಬಂಧಿತ ಮಾರುಕಟ್ಟೆ ಮತ್ತು ಇತರ ಸವಲತ್ತುಗಳು ಮತ್ತು ವಿಶೇಷವಾಗಿ ಇವು ಸಣ್ಣ ಮತ್ತು ಅತಿ ಸಣ್ಣ ಕೃಷಿಕರಿಗೆ ದೊರೆಯುವಂತಾಗಬೇಕೆಂಬ" ಗುರಿಯನ್ನೇ ಸಹಕಾರಿ ಸಂಘಟನೆಗಳು ಹಿಂದಿನಿಂದಲೂ ತಮ್ಮ ಗುರಿಯನ್ನಾಗಿಸಿಕೊಂಡಿವೆ. ಅಂತೆಯೇ ಪ್ರಪಂಚದಾದ್ಯಂತ ಇರುವ ಸಹಕಾರಿ ಸಂಘಟನೆಗಳಲ್ಲಿ ಬಹುಭಾಗ ಕೃಷಿ ಸಂಬಂಧಿತ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದನ್ನು ಗಮನಿಸುತ್ತೇವೆ.

ಸಾಂಸ್ಥಿಕ ಮೌಲ್ಯಗಳು, ಅನುಭವ ಮತು ಪರಿಣಿತಿ ಈ ಎಲ್ಲವನ್ನೂ ಗಮನಿಸಿದಾಗ ಹಸಿವಿನ ಅಂತ್ಯವನ್ನು ಸಾಧ್ಯವಾಗಿಸಬೇಕಾದರೆ ಸಹಕಾರಿ ಸಂಘಗಳ ಮೂಲಕ ಮಾತ್ರವೇ ಸಾಧ್ಯ ಎನ್ನುವ ಪರಿಸ್ಥಿತಿ ಇದೆ. "ಒಂದು ದಿನದ ಊಟ ಕೊಡುವುದರಿಂದ ಹಸಿವನ್ನು ಅಂತ್ಯಮಾಡಲು ಸಾಧ್ಯವಿಲ್ಲ, ಬದಲಿಗೆ ದಿನದ ಆಹಾರ ಗಳಿಸುವ ಸಾಮರ್ಥ್ಯ ನೀಡಿದಾಗ ಹಸಿವಿನ ಅಂತ್ಯವಾಗುತ್ತದೆ" ಎನ್ನುವ ಸತ್ಯವನ್ನು ನಮ್ಮ ಸಹಕಾರಿ ಸಂಘಗಳು ಅರಿತು, ಆ ದಿಕ್ಕಿನಲ್ಲಿ ಕಾರ್ಯೋನ್ಮುಖರಾಗಬೇಕಿದೆ. ಈ ಕಠಿಣ ಕಾರ್ಯ ಕೇವಲ ಕೃಷಿ ಪತ್ತಿನ ಸಹಕಾರ ಸಂಘಗಳು ಅಥವ ಮಾರುಕಟ್ಟೆ ಸಹಕಾರಿ ಸಂಘಗಳಿಂದ ಮಾತ್ರ ಸಾಧ್ಯವಾಗುವಂತಹುದಲ್ಲ. ಎಲ್ಲ ರೀತಿಯ ಸಹಕಾರಿ ಸಂಸ್ಥೆಗಳ – ಸಹಕಾರಿ ಸಂಘಗಳ ನಡುವಿನ ಸಹಕಾರದಿಂದ ಮಾತ್ರವೇ ಇದು ಸಾಧ್ಯ. ಈ ನಿಟ್ಟಿನಲ್ಲಿ ನಮ್ಮ ಸಹಕಾರಿ ಸಂಘಟನೆಗಳು ಈ ಕೆಳಗಿನಂತೆ ಕಾರ್ಯೋನ್ಮುಖವಾಗಬಹುದಾಗಿದೆ.

1. ಮೊಟ್ಟ ಮೊದಲನೆಯದಾಗಿ ದೇಶದ ಎಲ್ಲೆಡೆ ಕೃಷಿ ಸಹಕಾರಿ ಸಂಘಗಳನ್ನು ಸಧೃಡವಾಗುವಂತೆ ಮಾಡಬೇಕಿದೆ. ಇದರಲ್ಲಿ ರಾಜ್ಯ ಸರಕಾರಗಳು ಮತ್ತು ಸಹಕಾರಿ ಮಹಾಮಂಡಳಗಳ ಪಾತ್ರ ಮಹತ್ತರವಾದುದು. ಕೃಷಿ ಸಂಬಂಧಿ ಚಟುವಟಿಕೆಗಳಲ್ಲಿ ನಿರತವಾದ ಸಹಕಾರಿ ಸಂಸ್ಥೆಗಳಿಗೆ ಅಗತ್ಯ ಕಾರ್ಯ ಸ್ವಾತಂತ್ರ ನೀಡುವುದು, ಅವುಗಳ ವ್ಯವಹಾರಕ್ಕೆ ಪೂರಕ ಪರಿಸರ ನಿರ್ಮಿಸುವುದು, ಇಂತಹ ಸಹಕಾರ ಸಂಘಗಳ ಸಿಬ್ಬಂದಿಗೆ ಅಗತ್ಯ ತಾಂತ್ರಿಕ ತರಬೇತಿ ನೀಡುವುದು ಇತ್ಯಾದಿಗಳನ್ನು ತ್ವರಿತವಾಗಿ ಮಾಡಬೇಕಾಗಿದೆ.
2. ಕೃಷಿ ಸಹಕಾರಿ ಸಂಘಗಳು ಕೃಷಿಕ ಸದಸ್ಯರ ಎಲ್ಲ ಅಗತ್ಯಗಳನ್ನು ಪೂರೈಸುವಂತೆ ವೈವಿಧ್ಯ ಚಟುವಟಿಕೆಗಳನ್ನು ಆರಂಭಿಸಬೇಕು. ಎಂದರೆ ಪ್ರತಿ ಕೃಷಿ ಸಹಕಾರಿ ಸಂಘವು ವಿವಿಧೋದ್ದೇಶ ಸಹಕಾರಿ ಸಂಘದಂತೆ ಕಾರ್ಯ ನಿರ್ವಹಿಸಬೇಕು.
3. ಒಂದು ಪ್ರದೇಶದಲ್ಲಿರುವ ವಿವಿಧ ಸಹಕಾರಿ ಸಂಘಗಳು ಪರಸ್ಪರ ಸಹಕಾರದಿಂದ ಸದಸ್ಯರ ಅಗತ್ಯಗಳನ್ನು ಪೂರೈಸಲು ಕಾರ್ಯಕ್ರಮ ರೂಪಿಸಬೇಕು. ಉದಾಹರಣೆಗೆ ರೈತ ಕುಟುಂಬಗಳು ಕೃಷಿಪತ್ತಿನ ಸಹಕಾರಿ ಸಂಘ, ಕೃಷಿ ಉತ್ಪನ್ನ ಮಾರಾಟ ಸಹಕಾರಿ ಸಂಘ, ಹಾಲು ಉತ್ಪಾದಕ ಸಹಕಾರಿ ಸಂಘ, ಹೀಗೆ ಹಲವು ಸಹಕಾರಿ ಸಂಘಗಳ ಸದಸ್ಯರಾಗಿರುತ್ತವೆ. ಈ ಎಲ್ಲ ಸಹಕಾರಿ ಸಂಘಗಳು ಪರಸ್ಪರ ಸಹಕರಿಸುವುದರಿಂದ ಈ ಸದಸ್ಯ ಕುಟುಂಬಗಳಿಗೆ ನೆರವು ನೀಡುವುದು ಸುಲಭವಾಗುತ್ತದೆ.
4. ಕೃಷಿಕರು ತಮ್ಮ ಕೃಷಿ ಚಟುವಟಿಕೆಗಳ ಜೊತೆಗೇ ಕಡಿಮೆ ಅವಧಿಯಲ್ಲಿ ಆದಾಯ ನೀಡುವ ಇತರ ಕೃಷಿ ಸಂಬಂಧಿ ಚಟುವಟಿಕೆಗಳಲ್ಲಿ –ಉದಾಹರಣೆಗೆ ಹೈನುಗಾರಿಕೆ, ಜೇನುಸಾಕಣೆ, ಹಣ್ಣು/ತರಕಾರಿಗಳನ್ನು ಬೆಳೆಯುವುದು, ಕೃಷಿ ಉತ್ಪನ್ನಗಳ ಮೌಲ್ಯ ವೃದ್ಧಿ ಚಟುವಟಿಕೆಗಳು ಇತ್ಯಾದಿ – ತೊಡಗಲು ಅಗತ್ಯವಾದ ನೆರವನ್ನು ಸಹಕಾರಿ ಸಂಘಗಳು ನೀಡಬಹುದು.
5. ಕೃಷಿಯ ಉತ್ಪಾದಕತೆಯನ್ನು ವೃದ್ಧಿಸುವುದು ಅತ್ಯಂತ ಮುಖ್ಯ ಅಗತ್ಯ. ಈ ನಿಟ್ಟಿನಲ್ಲಿ ಸಹಕಾರಿ ಸಂಘಗಳು ಉತ್ತಮ ಬೀಜ, ಗೊಬ್ಬರ ಮುಂತಾದ ಪರಿಕರಗಳನ್ನು ಕ್ಲುಪ್ತ ಸಮಯದಲ್ಲಿ ದೊರೆಯುವಂತೆ ಮಾಡುವುದು, ಕೃಷಿಕರಿಗೆ ಅಗತ್ಯ ತಾಂತ್ರಿಕ ಮಾಹಿತಿ/ಪರಿಣಿತಿ ನೀಡಲು ಕಾರ್ಯಕ್ರಮ

Swabhimani Sahakari, Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2020-2022 RNI NO. KARBIL-2004/18001/Pages 48
Licensed to post without Prepayment License No. PMG BG/WPP-384/2020-2022.

ರೂಪಿಸುವುದು, ಕೃಷಿ ಚಟುವಟಿಕೆಗಳ ವೆಚ್ಚ ಕಡಿಮೆಯಾಗುವಂತೆ ಕೃಷಿಕ ಸದಸ್ಯರು ಕೃಷಿ ಪರಿಕರಗಳನ್ನು ಸಾಮೂಹಿಕ ನೆಲೆಯಲ್ಲಿ ಉಪಯೋಗಿಸುವಂತಹ ಯೋಜನೆಗಳನ್ನು ರೂಪಿಸುವುದು ಮುಂತಾದುವುಗಳನ್ನು ಆದ್ಯತೆಯ ಮೇಲೆ ನಡೆಸಬೇಕು.

6. ಆಹಾರದ ಅಲಭ್ಯತೆಯ ಸಮಸ್ಯೆಗಿಂತ ಪ್ರಮುಖವಾದುದು ಆಹಾರದ ಪೌಷ್ಟಿಕತೆಯ ಸಮಸ್ಯೆ. ಬಡವರ, ಅದರಲ್ಲೂ ಗ್ರಾಮೀಣ ಭಾಗದ ಬಡವರು ಉಪಯೋಗಿಸುವ ಆಹಾರದಲ್ಲಿ ಅಗತ್ಯ ಪೌಷ್ಟಿಕಾಂಶಗಳು ಇರುವಂತೆ ಮಾಡುವಲ್ಲಿ ಸಹಕಾರಿ ಸಂಘಗಳು ಮಹತ್ತರ ಪಾತ್ರ ನಿರ್ವಹಿಸಬಹುದು. ಉದಾಹರಣೆಗೆ ಸ್ಥಳೀಯವಾಗಿ ದೊರೆಯುವ ಪೌಷ್ಟಿಕ ಆಹಾರೋತ್ಪನ್ನಗಳನ್ನು ಗುರುತಿಸಿ ಅವುಗಳ ಸೇವನೆಯನ್ನು ಉತ್ತೇಜಿಸುವುದು, ಹಾಲು, ಮೊಸರು, ಹಣ್ಣು ಇತ್ಯಾದಿಗಳು ಸುಲಭ ಬೆಲೆಯಲ್ಲಿ ಸಿಗುವಂತೆ ಸಹಕಾರಿ ಮಾದರಿಯ ಉತ್ಪಾದನೆ ಮತ್ತು ಮಾರಾಟ ಚಟುವಟಿಕೆ ನಡೆಸುವುದು ಇತ್ಯಾದಿ. ನಮ್ಮ ನೆರೆಯ ಬಡ ರಾಷ್ಟ್ರವಾದ ಬಾಂಗ್ಲಾದೇಶದಲ್ಲಿ ಗ್ರಾಮೀಣ್ ಬ್ಯಾಂಕ್‌ನ ನೇತೃತ್ವದಲ್ಲಿ ನಡೆಯುತ್ತಿರುವ ಇಂತಹ ಕಾರ್ಯಕ್ರಮದಿಂದಾಗಿ ಅಲ್ಲಿಯ ಗ್ರಾಮೀಣ ಪ್ರದೇಶದಲ್ಲಿ ಅಪೌಷ್ಟಿಕತೆಯ ಪ್ರಮಾಣ ಕಡಿಮೆಯಾಗಿರುವುದನ್ನು ಮಾದರಿಯಾಗಿ ತೆಗೆದುಕೊಳ್ಳಬಹುದಾಗಿದೆ.

7. ಸಹಕಾರಿ ಸಂಘಗಳು ಅದರಲ್ಲೂ ಕೃಷಿ ಸಹಕಾರಿ ಸಂಘಗಳು ಪ್ರಾಕೃತಿಕ ಕೃಷಿ ಪದ್ಧತಿಗೆ ಉತ್ತೇಜನ ಕೊಡುವಂತಹ ಯೋಜನೆಗಳನ್ನು ರೂಪಿಸುವುದು. ಉದಾಹರಣೆಗೆ ಸಾವಯವ ಗೊಬ್ಬರದ ಮಾರಾಟ, ಸ್ಥಳೀಯವಾಗಿ ಅಭಿವೃದ್ಧಿ ಪಡಿಸಿದ ಬೀಜಗಳ ಮಾರಾಟ, ನೈಸರ್ಗಿಕ ಕೃಷಿ ಮಾಡುವವರಿಗೆ ಕಡಿಮೆ ಬಡ್ಡಿಯ ಸಾಲ ನೀಡಿಕೆ, ನೈಸರ್ಗಿಕ ಕೃಷಿಯ ಮೂಲಕ ಬೆಳೆದ ಬೆಳೆಗಳಿಗೆ ಮಾರುಕಟ್ಟೆ ಒದಗಿಸುವುದು ಇತ್ಯಾದಿಗಳನ್ನು ಮಾಡಬಹುದು.

8. ತರಕಾರಿ, ಹಣ್ಣು ಮುಂತಾದ ಬೆಳೆಗಳನ್ನು ಸಂಸ್ಕರಿಸಿ, ಮೌಲ್ಯ ವೃದ್ಧಿಗೊಳಿಸಿ ಮಾರಲು ಅನುವಾಗುವಂತೆ ಸಂಸ್ಕರಣ ಘಟಕಗಳನ್ನು ಆರಂಭಿಸುವುದು ಅಥವ ಅಂತಹ ಘಟಕಗಳನ್ನು ಆರಂಭಿಸಲು ಸ್ಥಳೀಯರಿಗೆ ಉತ್ತೇಜನ ನೀಡುವುದು.

9. ಕೃಷಿಯಲ್ಲಿ ತಂತ್ರಜ್ಞಾನದ ಬಳಕೆಗೆ ಅನುವು ಮಾಡಿಕೊಡಲು ಅಂತಹ ತಂತ್ರಜ್ಞಾನ ಖರೀದಿಸ ಬಯಸುವ ರೈತರಿಗೆ ಸಹಾಯ ಯೋಜನೆಗಳನ್ನು ರೂಪಿಸುವುದು ಮತ್ತು/ಅಥವ ಅಂತಹ ತಂತ್ರಜ್ಞಾನವನ್ನು ಸಹಕಾರಿ ಸಂಘವೇ ಖರೀದಿಸಿ (ಉದಾಹರಣೆಗೆ ಟಿಲ್ಲರ್, ಟ್ರಾಕ್ಟರ್, ಸಸಿನೆಡುವ ಯಂತ್ರ, ಕಳೆಕೀಳುವ ಯಂತ್ರ, ಕಟಾವು ಯಂತ್ರ ಹೀಗೆ) ಅದನ್ನು ರೈತ ಸದಸ್ಯರಿಗೆ ಬಾಡಿಗೆಯ ಆಧಾರದಲ್ಲಿ ಉಪಯೋಗಿಸಲು ನೀಡುವುದು.

10. ಶೀತಲ ಗೋದಾಮುಗಳಂತಹ ಅತ್ಯಂತ ಅಗತ್ಯದ ಮೂಲ ಪರಿಕರಗಳನ್ನು ಒದಗಿಸಲು ಪ್ರಯತ್ನಿಸುವುದು.

11. ಕೃಷಿಕರ ಸಹಾಯಕ್ಕಾಗಿ/ಉಪಯೋಗಕ್ಕಾಗಿ ಸರಕಾರ, ಬ್ಯಾಂಕುಗಳು, ವಿಮಾ ಕಂಪನಿಗಳು ಅಥವಾ ಇನ್ನಾವುದೇ ವ್ಯವಹಾರ ಸಂಸ್ಥೆಗಳು ಆರಂಭಿಸುವ ಯೋಜನೆಗಳ ಲಾಭವನ್ನು ಸದಸ್ಯರಿಗೆ ತಲುಪಿಸಲು ಅನುವಾಗುವಂತೆ ಮತ್ತು ಸಂಘಕ್ಕೆ ಆದಾಯ ಗಳಿಕೆಯೂ ಆಗುವಂತೆ, ಅಂತಹ ಯೋಜನೆಗಳ ಏಜೆನ್ಸಿಗಳನ್ನು ಪಡೆದು ಸೇವೆಗಳನ್ನು ಒದಗಿಸಬಹುದು.

ಆಹಾರೋತ್ಪಾದನೆಯ ಪ್ರಮಾಣ ಹೆಚ್ಚಾಗಬೇಕಿದೆ. ಈ ಆಹಾರೋತ್ಪಾದನೆಯನ್ನು ಜನರ ಆರೋಗ್ಯ ಮತ್ತು ಕೊಳ್ಳುವ ಶಕ್ತಿಯನ್ನು ಗಮನದಲ್ಲಿಟ್ಟುಕೊಂಡು ಮಾಡಬೇಕಿದೆ. ಬೆಳೆದ ಆಹಾರವನ್ನು ಕ್ಲುಪ್ತ ಸಮಯದಲ್ಲಿ ಅಗತ್ಯವಿರುವ ಜನಸಮುದಾಯಕ್ಕೆ ತಲುಪಿಸಬೇಕಾಗಿದೆ. ಜನರ ಆಹಾರ ಸೇವನೆಯು ಪೌಷ್ಟಿಕತೆಯ ಅಗತ್ಯಗಳ ಅನುಸಾರ ನಡೆಯುವಂತೆ ಮಾಡಬೇಕಿದೆ. ಈ ಎಲ್ಲವನ್ನೂ ಇಂದಿನ ಅಗತ್ಯಾನುಸಾರ ಮಾಡುವುದು ಸರಕಾರಿ ಸಂಸ್ಥೆಗಳಿಗಾಗಲೀ, ಖಾಸಗೀ ಸಂಸ್ಥೆಗಳಿಗಾಗಲೀ ಪೂರ್ಣವಾಗಿ ಸಾಧ್ಯವಿಲ್ಲ. ಸಹಕಾರಿ ಕ್ಷೇತ್ರದ ಪೂರ್ಣ ಸಹಕಾರವಿದ್ದಲ್ಲಿ ಮಾತ್ರವೇ 2030ರೊಳಗೆ ಹಸಿವು ಮತ್ತು ಅಪೌಷ್ಟಿಕತೆಯ ಸಮಸ್ಯೆಯ ಪರಿಹಾರಕ್ಕೆ ನಿಗದಿಯಾದ ಗುರಿಯನ್ನು ತಲುಪುವುದು ಸಾಧ್ಯ.

ಕೇಂದ್ರ ಕಛೇರಿ: ದೂರವಾಣಿ ಸಂಖ್ಯೆಗಳು : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ: ನಂ. 62, 2ನೇ ಮಹಡಿ, 18ನೇ ಕ್ರಾಸ್, 3ನೇ ಮುಖ್ಯ ರಸ್ತೆ (ಮಾರ್ಗೋಸಾ ರಸ್ತೆ), ಫೈಪ್‌ಲೈನ್ ರಸ್ತೆ ಮಲ್ಲೇಶ್ವರಂ, ಬೆಂಗಳೂರು–560010 ದೂ: 080 23449933/34
ಬೆಂಗಳೂರು ಪ್ರಾಂತೀಯ ಕಛೇರಿ: ನಂ 141, 1ನೇ ಮೇನ್, 11ನೇ ಕ್ರಾಸ್, ಡಾ. ರಾಜ್‌ಕುಮಾರ ರಸ್ತೆ, 1–ಕೆ–ಬ್ಲಾಕ್, ರಾಜಾಜಿನಗರ, ಬೆಂಗಳೂರು–560010 ದೂ: 080 23525546.
ಮೈಸೂರು ಪ್ರಾಂತೀಯ ಕಛೇರಿ: ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821 2332299
ಬೆಳಗಾವಿ ಪ್ರಾಂತೀಯ ಕಛೇರಿ: ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ: 0831 – 2401551.
ಕಲಬುರಗಿ ಪಾಂತೀಯ ಕಛೇರಿ: ನಂ 1–4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ, ಗಾರ್ಡನ್ ರಸ್ತೆ, ಕಲಬುರಗಿ–585102 ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., Nirman Bhavan complex, Dr. Rajkumar Road, 1st Black, Rajajinagar, Bengaluru-560 010